ಸಂಪುಟ: 14 Volume ಸಂಚಿಕೆ: 18 Issue ಪುಟಗಳು 08 Pages ಮಂಗಳವಾರ 21 ಏಪ್ರಿಲ್ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಕಷ್ಟಗಳು ಹೆಚ್ಚಾದಂತೆ ಬುದ್ಧಿ ಚುರುಕಾಗಿ ಕೆಲಸ ಮಾಡುತ್ತದೆ.

–ಎಮರ್ಸನ್







# ಉತ್ತಮ ಜೀವನಕ್ಕೆ ಆರೋಗ್ಯ ಮುಖ್ಯ ಬಸವಲಿಂಗ ಪಟ್ಟದ್ದೇವರು ಅಭಿಮತ



• **ಮಲ್ಲಮ್ಮ ನುಡಿ ವಾರ್ತೆ , ಭಾಲ್ಕಿ**

ಪ್ರತಿಯೊಬ್ಬರು ಉತ್ತಮ ಜೀವನಕ್ಕಾಗಿ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆದು ಕೊಳ್ಳುವುದು ಅವಶ್ಯಕ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ-2026, ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಬಿ.ಕೆ.ಬಳತೆ ಆಸ್ಪತ್ರೆ ಸಹಯೋಗದಲ್ಲಿ ಭಾನುವಾರ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಮಗೆ ಯಾವುದೇ ಸಮಸ್ಯೆ ಬಂದರೂ ನಾವು ಕುಳಿತು ಪರಿಹರಿಸಿಕೊಳ್ಳಬಹುದು. ಆದರೆ, ನಮ್ಮ ಆರೋಗ್ಯದಲ್ಲಿ ಏರುಪೇರು ಕಂಡು ಬಂದರೇ ವೈದ್ಯರ ಬಳಿ ಹೋಗಲೇಬೇಕಾಗುತ್ತದೆ. ಹಾಗಾಗಿ ಯಾವುದೇ ಮುಜಗರಕ್ಕೆ ಒಳಪಡದೇ ಆರೋಗ್ಯ ಸಮಸ್ಯೆ ಕಂಡು ಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದರು.

ನೇತೃತ್ವ ವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಿಶ್ವಗುರು ಬಸವಣ್ಣವರ ಜಯಂತಿ, ವಚನ ಜಾತ್ರೆ, ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಬಿ.ಕೆ.ಬಳತೆ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಏರ್ಪಡಿಸಿರುವುದು ಅತ್ಯಂತ ಖುಷಿ ತಂದು ಕೊಟ್ಟಿದೆ. ಈ ಶಿಬಿರದಿಂದ ಬಡ ಜನರಿಗೆ ಅನುಕೂಲವಾಗಿದೆ. ನೂರಾರು ಯುವಕರು ರಕ್ತದಾನ ಮಾಡಿ ಮಾನವೀಯತೆ ಮೆರೆದಿದ್ದಾರೆ ಎಂದು ತಿಳಿಸಿದರು. ಪುಷ್ಪಾವತಿ ಕಾಶಪ್ಪ ಬಳತೆ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ, ಯುವ ಮುಖಂಡರಾದ ಡಿ.ಕೆ.ಸಿದ್ರಾಮ, ಪ್ರಸನ್ನ ಖಂಡ್ರೆ, ಬಸವ ಜಯಂತಿ ಮೆರವಣಿಗೆ ಸಮಿತಿ ಅಧ್ಯಕ್ಷ ಯೋಗೇಶ ಅಷ್ಟೂರೆ, ಡಾ.ಅಮಿತ ಅಷ್ಟೂರೆ, ಮಲ್ಲಮ್ಮ ನಾಗನಕೇರೆ, ಪ್ರಜ್ವಲ ಬಳತೆ ಸೇರಿದಂತೆ ಹಲವರು ಇದ್ದರು.

### 150 ಜನ ಆರೋಗ್ಯ ತಪಾಸಣೆ

"ಉಚಿತ ಆರೋಗ್ಯ ಶಿಬಿರದಲ್ಲಿ 150 ಜನರು ಆರೋಗ್ಯತಪಾಸಣೆ ಮಾಡಿಸಿಕೊಂಡು ವೈದ್ಯರಿಂದ ಸೂಕ್ತ ಸಲಹೆ ಪಡೆದು ಕೊಂಡರು. ಸುಮಾರು 70 ಯುವಕರು ರಕ್ತದಾನ ಮಾಡಿದರು. ಡಾ.ಸಜ್ಜಲ ಬಳತೆ, ಡಾ.ರಾಹುಲ ರಾಜುರೆ, ಡಾ.ರಾಮಲಿಂಗ ವಳಸಂಗೆ, ಡಾ.ವಿಕ್ರಮ ದೇವಪ್ಪ, ಡಾ.ಅಮಿತ ಅಷ್ಟೂರೆ, ಡಾ.ಪ್ರಶಾಂತ ಮಠಪತಿ, ಡಾ.ಶಿವರಾಜಿ ಗುರದಳೆ ಮತ್ತು ಡಾ.ಲಕ್ಷ್ಮಿಕಾಂತ ಐನಾಪುರೆ ಆರೋಗ್ಯ ತಪಾಸಣೆ ನಡೆಸಿದರು.

# ಸಾಮಾಜಿಕ ಕ್ರಾಂತಿ ಸೃಷ್ಟಿಸಿದ ಬಸವಣ್ಣ: ಈಶ್ವರ ಖಂಡ್ರೆ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಬಸವಣ್ಣನವರು ವಿಶ್ವದಲ್ಲಿ ಸಮಾನತೆ, ಸ್ವಾತಂತ್ರ, ಮೌಢ್ಯತೆ, ಅನ್ಯಾಯ, ವರ್ಗಬೇಧ, ವರ್ಣಬೇಧ, ಲಿಂಗ ಬೇಧ ಇತ್ತು ಆ ಸಂದರ್ಭದಲ್ಲಿ 893 ವರ್ಷಗಳ ಹಿಂದೆ ಜನ್ಮತಾಳಿ ಅಸ್ಪೃಶ್ಯತೆಗಳನ್ನು ನಿರ್ಮೂಲನೆ ಮಾಡಲು ಕಲ್ಯಾಣ ಕ್ರಾಂತಿ ಮೂಲಕ ಜಗತ್ತಿಗೆ ಸಾರಿದರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಅವರು ಸೋಮವಾರ ಜಿಲ್ಲಾಡಳಿತ ವತಿಯಿಂದ ನಗರದ ಬಸವೇಶ್ವರ ವೃತ್ತದಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಭಾವಚಿತ್ರಕ್ಕೆ ಪೂಜೆ ಮಾರ್ಲಾಪಣೆ ಹಾಗೂ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಸಮಸಮಾಜ ನಿರ್ಮಾಣ ಮಾಡಲು ಕಾಯಕ ದಾಸೋಹ, ಸಹಬಾಳ್ವೆ, ಸರಳತೆ ಮೇಲೆ ಅವರ ಗುರಿಯಾಗಿತ್ತು, ಅನುಭವ ಮಂಟಪದಲ್ಲಿ 770 ಶರಣರಿಗೆ ಸಮಾನತೆ ಕೊಟ್ಟು ಹೋರಾಟ ಮಾಡಿದವರು ಬಸವಣ್ಣನವರು ಎಂದರು.

ಪೌಡಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಮಾತನಾಡಿ, ಬಸವಣ್ಣನವರ ತತ್ವ, ಸಿದ್ಧಾಂತ ಮತ್ತು ಆದರ್ಶಗಳನ್ನು ನಮ್ಮ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಂಡು ನಡೆಯೋಣ ಎಂದರು.

ಬೀದರ ದಕ್ಷಿಣ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಮಾತನಾಡಿ, ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಹತ್ವದ ವಚನವನ್ನು ಉಲ್ಲೇಖಿಸಿ ಶ್ರಮದ ಮಹತ್ವ ಒತ್ತಿ ಹೇಳಿದರು. ಜಾತಿ ಭೇದವಾದ ಮತ್ತು ಅಸಮಾನತೆ ವಿರುದ್ಧ ಹೋರಾಡಿ ಸಮಾನತೆ, ಸಮಾಜನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ ಮಹಾನ ತತ್ವಜ್ಞಾನಿ ಆಗಿದ್ದರು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಬಂಡೆಪ್ಪಾ ಖಾಶೆಂಪೂರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಕಾರ್ಯನಿರ್ವಾಹಕಅಧಿಕಾರಿಡಾ.ಗಿರೀಶ ಬದೋಲೆ, ಮಹಾನಗರ ಪಾಲಿಕೆಯ ಆಯುಕ್ತರಾದ ಮುಕುಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಬಸವ ಉತ್ಸವ ಸಮಿತಿ ಅಧ್ಯಕ್ಷರಾದ ಡಾ.ರಜನೀಶ ವಾಲಿ, ಕಾರ್ಯದರ್ಶಿಗಳಾದ ಶಶಿಧರ ಹೊಸಳ್ಳಿ, ಮುಖಂಡರಾದ ಬಾಬು ವಾಲಿ, ಸೂರ್ಯಕಾಂತ ನಾಗಮಾರಪಳ್ಳಿ, ರಮೇಶ ಪಾಟೀಲ ಸೋಲಪುರ, ಶಿವಶರಣಪ್ಪ ವಾಲಿ, ಬಸವರಾಜ ಧನ್ನೂರ, ಸಿದ್ರಾಮಯ್ಯ ಸ್ವಾಮಿ,

ರಾಜಕುಮಾರ ಕಂದಗೋಳೆ, ರಾಜಕುಮಾರ ಹಲಬರ್ಗೆ, ಚಂದ್ರಶೇಖರ ಪಾಟೀಲ್, ಗಾದಗಿ ಗುರುನಾತ ಕೊಳ್ಳೂರ, ಬಾಬುರಾವ ಮಲ್ಕಾಪೂರ, ಸುರೇಶ ಚನಶೆಟ್ಟಿ, ಶಾಮಣ್ಣಾ ಭಾವಗಿ, ಪರ್ನಾಂಡಿಸ್ ಹಿಪ್ಪಳಗಾಂವ, ವಿಜಯಕುಮಾರ ಸೋನಾರೆ, ಜಾನಸನ ಘೋಡೆ, ಹಣಮಂತ ಮಲಕಾಪೂರೆ ಸೇರಿದಂತೆ ಸಂಘ ಸಂಸ್ಥೆ ಪದಾಧಿಕಾರಿಗಳು, ಅನುಯಾಯಿಗಳು ಇನ್ನಿತರ ಮುಖಂಡರು ಉಪಸ್ಥಿತರಿದ್ದರು.



# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಅಲಿಕಲ್ಲು ಮಳೆ ರೈತರಿಗೆ ತಂದ ಸಂಕಷ್ಟ

ಹುಮನಾಬಾದ್ ಪ್ರದೇಶದಲ್ಲಿ ಸಂಭವಿಸಿದ ಅಲಿಕಲ್ಲು ಮಳೆಯ ಪರಿಣಾಮವಾಗಿ ರೈತರು ಬೆಳೆದ ಮಾವು, ದ್ರಾಕ್ಷಿ, ಸೇರಿದಂತೆ ಇತರೆ ಭಾರೀ ಬೆಳೆಗಳು ನಷ್ಟವನ್ನು ಅನುಭವಿಸುತ್ತಿದ್ದಾರೆ. ಹೊಲಗಳಲ್ಲಿ ಬೆಳೆದ ಬೆಳೆಗಳು ಹಾನಿಗೊಳಗಾಗಿ, ರೈತರ ಜೀವನೋಪಾಯ ಸಂಕಷ್ಟಕ್ಕೆ ಸಿಲುಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಸ್ಪಂದಿಸಿ ಸೂಕ್ತ ಪರಿಹಾರ ಒದಗಿಸುವುದು ಅತ್ಯಾವಶ್ಯಕವಾಗಿದೆ.

ಅಲಿಕಲ್ಲು ಮಳೆಯಂತಹ ಪ್ರಕೃತಿ ವಿಕೋಪಗಳು ರೈತರ ನಿಯಂತ್ರಣಕ್ಕೆ ಮೀರಿದವು. ಆದ್ದರಿಂದ ಸರ್ಕಾರವು ಹಾನಿಯ ಸಮೀಕ್ಷೆ ನಡೆಸಿ, ನಷ್ಟಕ್ಕೆ ಅನುಗುಣವಾಗಿ ಪರಿಹಾರ ಧನವನ್ನು ಬಿಡುಗಡೆ ಮಾಡಬೇಕು. ಜೊತೆಗೆ ಬೆಳೆ ವಿಮೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು, ರೈತರಿಗೆ ಶೀಘ್ರ ಸಹಾಯ ತಲುಪುವಂತೆ ನೋಡಿಕೊಳ್ಳಬೇಕು.

ಸ್ಥಳೀಯ ಅಧಿಕಾರಿಗಳು ತ್ವರಿತವಾಗಿ ಹಾನಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ಸರ್ಕಾರವು ವಿಳಂಬ ಮಾಡದೆ ರೈತರ ಕಷ್ಟಕ್ಕೆ ಸ್ಪಂದಿಸಿದರೆ, ಅವರಲ್ಲಿ ವಿಶ್ವಾಸ ಮೂಡುತ್ತದೆ. ರೈತನೇ ದೇಶದ ಬೆನ್ನೆಲುಬು ಎಂಬ ಮಾತು ನಿಜವಾಗಲು, ಈ ಸಂದರ್ಭದಲ್ಲಿ ಸರ್ಕಾರದ ನೆರವು ಬಹು ಮುಖ್ಯ.

ಹೀಗಾಗಿ, ಹುಮನಾಬಾದ್ ತಾಲ್ಲೂಕಿನ ಅಲಿಕಲ್ಲು ಮಳೆಯಿಂದ ಹಾನಿಗೊಳಗಾದ ರೈತರಿಗೆ ತಕ್ಷಣ ಪರಿಹಾರ ನೀಡಿ, ಅವರ ಬದುಕನ್ನು ಪುನಃ ಸ್ಥಿರಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

# ಬಸವಣ್ಣನವರ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತ

• **ಮಲ್ಲಮ್ಮ ನುಡಿ ವಾರ್ತೆ, ಔರಾದ**

ಅಸಮಾನತೆ, ಅಂಧಶ್ರದ್ಧೆ ಹಾಗೂ ಸಾಮಾಜಿಕ ಅನ್ಯಾಯಗಳನ್ನು ನಿರ್ಮೂಲನೆ ಮಾಡಲು ಜೀವನದುದ್ದಕ್ಕೂ ಶ್ರಮಿಸಿದ್ದ ವಿಶ್ವಗುರು ಬಸವಣ್ಣನವರು ನೀಡಿದ ಕಾಯಕ ಸಿದ್ಧಾಂತ ಸೇರಿದಂತೆ ಎಲ್ಲ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ತಾಲ್ಲೂಕು ಆಡಳಿತದ ವತಿಯಿಂದ ಔರಾದ(ಬಿ) ತಹಸೀಲ್ ಕಛೇರಿ ಆವರಣದಲ್ಲಿ ಏಪ್ರಿಲ್ 20 ರಂದು ಆಯೋಜಿಸಲಾದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾತಿ-ಮತ ಭೇದಗಳನ್ನು ದೂರ ಮಾಡಿ ಸಮಾನತೆಯ ನೆಲೆಯಲ್ಲಿ ಬದುಕುವ ಸಂದೇಶವನ್ನು ಬಸವಣ್ಣನವರು ನೀಡಿದ್ದಾರೆ. ಅವರು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಾಮಾಜಿಕ ಸಮಸ್ಯೆಗಳ ಬಗ್ಗೆ ತಿಳುವಳಿಕೆ ಮೂಡಿಸುವ ಜೊತೆಗೆ ಸಾಮಾಜದಲ್ಲಿರುವ ಅಂಕುಡೊಂಕುಗಳನ್ನು ಸರಿಪಡಿಸಲು ತನ್ನದೇ ಆದ ಕೊಡುಗೆ ನೀಡಿದ್ದರು.

# ಬಸವಣ್ಣನವರ ಸಮಾನತೆ, ಕಾಯಕ ತತ್ವ ನಮಗೆಲ್ಲರಿಗೂ ಮಾದರಿ

• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**



ವಿಶ್ವಗುರು ಬಸವಣ್ಣನವರ ಸಮಾನತೆ, ಕಾಯಕವೇ ಕೈಲಾಸ ಮತ್ತು ಅನುಭವ ಮಂಟಪದ ತತ್ವಗಳನ್ನು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಮಾದರಿಯಾಗಬೇಕು ಎಂದು ಇಂದುಮತಿ ಗಾರಂಪಳ್ಳಿ ಹೇಳಿದರು. ಪಟ್ಟಣ್ಣದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಇಂದುಮತಿ ಗಾರಂಪಳ್ಳಿ ತಾಯಿಯವರ ಮನೆಯಲ್ಲಿ 893ನೇ ಜಯಂತಿ ಆಚರಣೆ ಅಂಗವಾಗಿ ಹಮ್ಮಿಕೊಂಡ

ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಜಾತಿ, ಮತ, ಭೇದವಿಲ್ಲದೆ ಸಮಾಜದ ಎಲ್ಲ ವರ್ಗದವರನ್ನು ಒಂದಾಗಿ ಕಂಡು, ಆಚರಣೆಯಲ್ಲಿ ತರುವುದೇ ಬಸವ ತತ್ವ ಮುಖ್ಯ ಉದ್ದೇಶ. ಮೂಢನಂಬಿಕೆಗಳನ್ನು ತೊರೆದು, ವೈಜ್ಞಾನಿಕ ಮತ್ತು ಮಾನವೀಯ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಬಸವಣ್ಣನವರ ಮತ್ತು ಶಿವಶರಣರ ವಚನಗಳನ್ನು ಪಠಿಸುವುದು, ಅವುಗಳ ಅರ್ಥೈಸಿಕೊಂಡು ಜೀವನವನ್ನು ತಾತ್ವಿಕತೆಯೊಂದಿಗೆ ಸಾಗಿಸಬೇಕು ಎಂದರು. ಚಂದ್ರಶೇಖರ ತಂಗಾ ಮಾತನಾಡಿ, 12ನೇ ಶತಮಾನದ ಬಸವಣ್ಣನವರ ಕಾಯಕ, ದಾಸೋಹ ಮತ್ತು ಸಮಾನತೆಯ ತತ್ವಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಆಶಯದೊಂದಿಗೆ ಬಸವ ಜಯಂತಿ ಆಚರಣೆ ಮಾಡುವುದು ಸಮಂಜಸವಾಗಿದೆ ಎಂದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಸಂಗಮೇಶ ಜವಾದಿ ರವರು ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ, ಮಾತನಾಡಿದರು. ಕಾರ್ಯಕ್ರಮದಲ್ಲಿ ಹೇಮಾ ಬಿಡಪ್ಪ, ಈಶ್ವರಮ್ಮ ಗಾರಂಪಳ್ಳಿ, ಶರಣಮ್ಮ ಗಾರಂಪಳ್ಳಿ, ಗುರುನಾಥ ಮಾಹಾಜನ್, ಶೌರ್ಯ ಜವಾದಿ, ಶ್ರಾವ್ಯ ಜವಾದಿ. ಸೂರ್ಯಕಾಂತ ಗುಡ್ಡಾ, ವೀರ ಮಾಹಾಜನ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಭ್ರಮದ ಬಸವ ಜಯಂತಿ ಶಾಂತಿ ಸೌಹಾರ್ದತೆಗೆ ಕರೆ

• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**



ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ಜಗಜ್ಯೋತಿ ಬಸವಣ್ಣನವರ 893ನೇ ಜಯಂತಿಯನ್ನು ಸೋಮವಾರ ಅತ್ಯಂತ ಸಡಗರ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು. ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾಯಕ ಯೋಗಿಗೆ ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪೊಲೀಸ್ ಇಲಾಖೆಯ ಅಧಿಕಾರಿಗಳಾದ ಮಹೇಶ ಚಾಂಡೇಶ್ವರೆ ಅವರು ಮಾತನಾಡಿ, ಬಸವಣ್ಣನವರ ತತ್ವಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ, ಅವು ಇಡೀ ಮಾನವಕುಲಕ್ಕೆ ದಾರಿದೀಪವಾಗಿವೆ. ಗ್ರಾಮದ ಪ್ರತಿಯೊಬ್ಬರೂ ಬಸವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಶಾಂತಿ ಮತ್ತು ಸೌಹಾರ್ದತೆಯಿಂದ ಬದುಕಬೇಕು. ಎಲ್ಲರೂ ಒಗ್ಗೂಡಿ ನಡೆದಾಗ ಮಾತ್ರ ಗ್ರಾಮದ ಅಭಿವೃದ್ಧಿ ಸಾಧ್ಯ," ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಯುವಕರು ಹಾಗೂ ಮಕ್ಕಳು ಕೇಸರಿ ಪೇಟ ಮತ್ತು ಶಾಲು ಧರಿಸಿ ಉತ್ಸಾಹದಿಂದ ಪಾಲ್ಗೊಂಡಿದ್ದರು. 'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ವಾಣಿಯೊಂದಿಗೆ ನಡೆಯಬೇಕು ಎನ್ನುವ ಸಂದೇಶ ಸಾರಲಾಯಿತು, ವಿಶ್ವಗುರು, ಜಗದ ಜ್ಯೋತಿ ಬಸವಣ್ಣ ನವರಿಗೆ ಜೈ ಎನ್ನು ಜೈ ಘೋಷಣೆ ಕಾರ್ಯಕ್ರಮ ಧ್ವನಿ ಎತ್ತರ ಮಾಡಿತು.

ಈ ಸಂದರ್ಭದಲ್ಲಿ ಯುವಕರಾದ ಸಂಗಮೇಶ ಬಿರಾದಾರ, ಪರಮೇಶ ರಾಂಪುರೆ, ಸಂತೋಷ ಬನವಾಸೆ, ಸುಮಿತ ಬನವಾಸೆ, ಗಣೇಶ ರಾಂಪುರೆ, ವಿರೇಶ ಹಿರೇಮಠ, ರಾಜಕುಮಾರ ಕುಂಬಾರಗಿರೆ, ಸುನಿಲ ಚಾಂಡೇಶ್ವರೆ, ಪ್ರವೀನ ಚಾಂಡೇಶ್ವರೆ, ಮಹೇಶ ಬಿರಾದಾರ, ಪರಮೇಶ ಬನವಾಸೆ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಮಾಹದಯ್ಯ ಸ್ವಾಮಿ ಪೂಜೆ ಕಾರ್ಯಕ್ರಮ ನೆರವೇರಿಸಿ ಕೊಟ್ಟರು.

# ಬಸ್‌ಗೆ ಬೊಲೆರೋ ಡಿಕ್ಕಿ ಚಾಲಕ ಸಾವು



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ತಾಲ್ಲೂಕಿನ ಮೈಲಾರ ಸಮೀಪ ಬೀದರ್ ನಿಂದ ಭಾಲ್ಕಿ ಕಡೆಗೆ ಹೊರಟಿದ್ದ ಕೆಎಸ್ಆರ್‌ಟಿಸಿ ಬಸ್ ಗೆ ಹಿಂದಿನಿಂದ ಬಂದ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದ್ದಾನೆ.

ಅಪಘಾತದಲ್ಲಿ ಗಾಯಗೊಂಡಿದ್ದ ಬೊಲೆರೋ ಗೂಡ್ಸ್ ವಾಹನದ ಚಾಲಕ ಪ್ರಕಾಶ ವೈಜಿನಾಥ (30)ಆಸ್ಪತ್ರೆ ಕರೆದೊಯ್ಯುತ್ತಿರುವಾಗ ದಾರಿ ಮಧ್ಯೆ ಸಾವನ್ನಪ್ಪಿದ್ದಾರೆ. ಗೂಡ್ಸ್ ವಾಹನದಲ್ಲಿದ್ದ ಶಿವಕುಮಾರ್ ಅಶೋಕ (20) ಗಾಯಗೊಂಡಿದ್ದು ಬೀದರ್ ನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಡಿಕ್ಕಿಯ ಹೊಡೆತಕ್ಕೆ ಗೂಡ್ಸ್ ವಾಹನದ ಮುಂಭಾಗ ಬಸ್ ಹಿಂಭಾಗದ ಒಳಗಡೆ ಸಿಲುಕಿಕೊಂಡಿತ್ತು. ಬಸ್ ನ ಹಿಂಬದಿಯ ಗಾಜು ಒಡೆದು ಪುಡಿ ಪುಡಿ ಆಗಿದೆ. ಮಾವಿನ ಹಣ್ಣುಗಳ ಕ್ಯಾರೆಟ್ ಬಸ್ ಒಳಗಡೆ ಬಿದ್ದ ಪರಿಣಾಮ ಬಸ್ ನ ಹಿಂಬದಿಯ ಸೀಟುಗಳ ಮೇಲೆ ಕುಳಿತಿದ್ದ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಅಪಘಾತದ ಹಿನ್ನೆಲೆಯಲ್ಲಿ ರಸ್ತೆಯ ಮೇಲೆ ಮಾವಿನ ಹಣ್ಣುಗಳು ಹರಡಿದ್ದರಿಂದ ಬೀದರ್-ಭಾಲ್ಕಿ ರಸ್ತೆಯಲ್ಲಿ ಸುಮಾರು ಹೊತ್ತು ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು.

ಸ್ಥಳೀಯರು, ಪ್ರಯಾಣಿಕರು ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ನಂತರ ಸ್ಥಳೀಯರನ್ನು, ಪ್ರಯಾಣಿಕರನ್ನು ರಸ್ತೆ ಮೇಲಿಂದ ಚದುರಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಯಿತು. ಈ ಸಂಬಂಧ ಧನ್ನೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಸಡಗರದ ಬಸವ ಜಯಂತಿ




• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**

ತಾಲೂಕಿನ ಮುಧೋಳ(ಬಿ) ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಸೋಮವಾರ ಜಗಜ್ಯೋತಿ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಭಕ್ತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಹಾವಗೀರವ ವಟಗೆ, "ಕಾಯಕವೇ ಕೈಲಾಸ" ಎಂಬ ತತ್ವದಡಿ ಸಮಾನತೆಯ ಸಮಾಜ ನಿರ್ಮಿಸಲು ಶ್ರಮಿಸಿದ ಬಸವಣ್ಣನವರ ವಿಚಾರಧಾರೆಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಿ.ಡಿ.ಓ. ದತ್ತಾತ್ರೇಯ ಪೂಜಾರಿ, ಪಿ.ಕೆ.ಪಿ.ಎಸ್. ಅಧ್ಯಕ್ಷ ಗುರುನಾಥ ವಟಗೆ ಸೇರಿದಂತೆ ಇನ್ನಿತರ ಪ್ರಮುಖರು ಹಾಗೂ ಗ್ರಾಮಸ್ಥರು ಇದ್ದರು.

# ಸಂಗೋಳಗಿಯಲ್ಲಿ 893ನೇ ಬಸವ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ತಾಲೂಕಿನ ಸಂಗೋಳಗಿ ಗ್ರಾಮ ಪಂಚಾಯತನಲ್ಲಿ ಸೋಮವಾರ 893ನೇ ಬಸವ ಜಯಂತಿ ಆಚರಣೆ ಮಾಡಲಾಯಿತು,

ಬಸವಣ್ಣನವರು ವಿಶ್ವದಲ್ಲಿ ಸಮಾನತೆ, ಸ್ವಾತಂತ್ರ, ಮೌಢತ್ಯೆ, ಅನ್ಯಾಯ, ವರ್ಗಬೇಧ, ವರ್ಣಬೇಧ, ಲಿಂಗಬೇಧ ಇತ್ತು ಆ ಸಂದರ್ಭದಲ್ಲಿ 893 ವರ್ಷಗಳ ಹಿಂದೆ ಜನ್ಮತಾಳಿ ಅಸ್ಪೃಶ್ಯತೆಗಳನ್ನು ನಿರ್ಮೂಲನೆ ಮಾಡಲು ಕಲ್ಯಾಣ ಕ್ರಾಂತಿ ಮೂಲಕ ಜಗತ್ತಿಗೆ ಸಮಾನತೆ ಸಾರಿದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಹಾಗೂ ಭಾವಚಿತ್ರಕ್ಕೆ ಪೂಜೆ ಮಾರ್ಲಾಪಣೆಯನ್ನು ಗ್ರಾಮ ಪಂಚಾಯತ್ ವತಿಯಿಂದ ನೆರವೇರಿಸಲಾಯಿತು,

ಇದೇ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಪೂಜಾಶ್ರೀ ಬಿರಾದಾರ, ಕಾರ್ಯದರ್ಶಿ ಕವಿತಾ, ಹಾಗೂ ರಾಷ್ಟ್ರೀಯ ಬಸವದಳ ಅಧ್ಯಕ್ಷರು ಹಾಗೂ ಗೌರವಾಧ್ಯಕ್ಷರು ,ಸದಸ್ಯರು ಗ್ರಾಮಸ್ಥರು ಬಸವ ಜಯಂತಿಯಲ್ಲಿ ಭಾಗವಹಿಸಿದರು,

# ಮೇ 4 ರಂದು ಮಹನೀಯರ ಮೂರ್ತಿಯ ಭೂಮಿ ಪೂಜೆ



• ಮಲ್ಲಮ್ಮ ನುಡಿವಾರ್ತೆ ,ಕುಕನೂರ

ಜಗಜ್ಯೋತಿ ಬಸವಣ್ಣನವರ ಡಾ. ಬಿ ಆರ್ ಅಂಬೇಡ್ಕರ್ ಅವರ ಸಂಗೊಳ್ಳಿರಾಯಣ್ಣನವರ ಮೂರ್ತಿ ಪ್ರಶಿಸ್ಥಾಪನೆಯ ಭೂಮಿ ಪೂಜೆ ಕಾರ್ಯಕ್ರಮ ಮೇ 4 ನಾಲ್ಕರಂದು ಅದ್ದೂರಿಯಾಗಿ ಜರುಗುಲಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ಕುಕನೂರ ಪಟ್ಟಣದ ಐಬಿಯಲ್ಲಿ ರವಿವಾರ ದಿವಸ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿಮಾತನಾಡಿದವರು, ಕುಕನೂರು ಪಟ್ಟಣದ ಸರ್ವ ಸಮಾಜದವರ ಅಭಿಪ್ರಾಯದಂತೆ ಮೂರು ಸ್ಥಳಗಳನ್ನು ನೋಡಿದ್ದು ಈಗಾಗಲೇ ಆ ಸ್ಥಳದಲ್ಲಿ ಭೂಮಿ ಪೂಜೆಹಮ್ಮಿಕೊಂಡಿದ್ದು,ಸರ್ಕಾರದಿಂದ

ಪ್ರತಿ ಮೂರ್ತಿಗೆ 40 ಲಕ್ಷರೂಪಾಯಿ ಸರ್ಕಾರದಿಂದ ಕೊಡಲಾಗಿದ್ದು ಜಾಗೀಯ ಕೂಡ ಪಟ್ಟಣ ಪಂಚಾಯತಿಯಿಂದ ನಿಗದಿಯಾಗಿದೆ , ಮೇ 4ರಂದು ಮೆರವಣಿಗೆ ಆಗುವ ವಿಧ ವಾದ್ಯಮಿಳಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಸಾಗಿ ಸಂಜೆಯ ಹೊತ್ತಿನಲ್ಲಿ ಭೂಮಿ ಪೂಜ ಕಾರ್ಯಕ್ರಮಕ್ಕೆ, ಸಚಿವರಾದ ಶಿವನಂದ ಪಾಟೀಲ್ ಸೇರಿದಂತೆ ವಿವಿಧ ಸಚಿವರು ಹಾಗೂ ವಿವಿಧ ಮುಖಂಡರು ಕೂಡ ಕಾರ್ಯಕ್ರಮದಲ್ಲಿ ಭಾಗಿಯಾಗುವವರು.

ಹಳೆ ಸರ್ಕಾರಿ ಆಸ್ಪತ್ರೆಯ ಹತ್ತಿರದಲ್ಲಿ ಜಗಜ್ಯೋತಿ ಬಸವಣ್ಣನ ಮೂರ್ತಿ ಪ್ರತಿಸ್ಥಾಪನೆ ಆಗುತ್ತಿದ್ದು 9 ಪೀಟ್ ಎತ್ತರವಿರುವ ಬಸವಣ್ಣವರ ಮೂರ್ತಿರಲಿದ್ದು, ಒಂದು ವಾಲ್ ನಿರ್ಮಾಣ ಮಾಡಿ ಹಾಗೂ ಸಾರ್ವಜನಿಕರು ಕುಳಿತುಕೊಳ್ಳಲು ಚೇರು ಹಾಗೂ ವಾಲ್ಗಳ ಮೇಲೆ ಬಸವಣ್ಣನವರ ವಚನಗಳನ್ನು ಕೆತ್ತನೆ ಮಾಡಲು ಒಂದು ವಾಲುಗಳನ್ನು ನಿರ್ಮಾಣ ಮಾಡಲಾಗುವುದು,ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಮೂರ್ತಿಯ ಸುತ್ತಮುತ್ತ ಪಾರ್ಲಿಮೆಂಟ್ ಚಿತ್ರವನ್ನು ನಿರ್ಮಿಸಲಾಗುವುದು, ಸಂಗೊಳ್ಳಿ ರಾಯಣ್ಣನ ಮೂರ್ತಿ ಯೊಂದಿಗೆ ಕೋಟೆ ಚಿತ್ರವನ್ನು ಕೂಡ ನಿರ್ಮಿಸಲಾಗುವುದು, ಅದಕ್ಕೂ

ಕೂಡ ಅನುದಾನಗಳನ್ನು ಸರ್ಕಾರ ಬಿಡುಗಡೆ ಮಾಡಿದೆ, ಕುಕನೂರು ಪಟ್ಟಣ ಪಂಚಾಯಿತಿಯ ನೂತನ ಕಟ್ಟಡ ಭೂಮಿ ಪೂಜೆ ಹಾಗೂ ಎಪಿಎಂಸಿ ನಿರ್ಮಾಣವಾಗಿರುವ ಕೋಲ್ಡ್ ಸ್ಟೋರೇಜ್ ಉದ್ಘಾಟನೆ ಕೂಡ ಅಂದೆ ಜರುಗೋಲಿದೆ ತಾಲೂಕಿನ ಸರ್ವ ಸಮಾಜದವರು ಈ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣಪ್ಪ ಹರಪನಹಳ್ಳಿ, ಹನುಮಂತ್ ಗೌಡ ಚಂಡೂರ್, ಸಂಗಮೇಶ್ ಗುತ್ತಿ, ಕೆರೆ ಬಸಪ್ಪ ನಿಡಗುಂದಿ, ರೈಮನ್ ಸಾಬ್ ಮಕಪ್ಪನವರ್, ರಾಮಣ್ಣ ಬಂಕದಮನಿ,ಗಗನ್ ನೋಟ್ಗಾರ್, ಪ್ರಶಾಂತ್ ಆರುಬೆರಳಿನ,ಮಹಾಂತೇಶ್ ಮುಧೋ[illegible],ಲ್ಲಪ್ಪ ಕಲ್ಮನಿ, ರಾಘವೇಂದ್ರ ಕಾತರಕಿ, ರಶೀದ್ ಅಹ್ಮದ್ ಉಮುಚ್ಚಿಗಿ, ಮಲ್ಲಪ್ಪಗುತ್ತಿ, ಈರಣ್ಣ ಶಿವಶಕ್ತಿ,ಮಂಜುನಾಥ್ ಕೋಲುರ್, ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ನಾಗೇಶ್, ಸೇರಿದಂತೆ ಕಾಂಗ್ರೆಸ್ ಮುಖಂಡರು ಪಟ್ಟಣ ಪಂಚಾಯತಿ ಸದಸ್ಯರು ಅಧಿಕಾರಿಗಳು ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಇತರರು ಉಪಸ್ಥಿತರಿದ್ದರು.

# ಈಜಲು ಹೋದ ವಿದ್ಯಾರ್ಥಿ ಕೆರೆಯಲ್ಲಿ ಮುಳುಗಿ ಸಾವು



• ಮಲ್ಲಮ್ಮ ನುಡಿ ವಾರ್ತೆ , ಕೊಪ್ಪಳ

ದದೇಗಲ್ ಸಮೀಪದ ಹಾಸ್ಟೆಲ್‌ನಲ್ಲಿ ಓದುತ್ತಿದ್ದ ಹಿರೇ ಮನ್ನಾಪುರ ಗ್ರಾಮದ ವಿದ್ಯಾರ್ಥಿಯೊಬ್ಬ ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ದುರ್ಘಟನೆ ಭಾನುವಾರ ನಡೆದಿದೆ.

ಬಿಸಿಲಿನ ತೀವ್ರತೆಯನ್ನು ತಾಳಲಾರದೇ ನಾಲ್ವರು ವಿದ್ಯಾರ್ಥಿಗಳು ಈಜಲು ತೆರಳಿದ್ದರು. ಈ ವೇಳೆ ಒಬ್ಬ ವಿದ್ಯಾರ್ಥಿಗೆ ಈಜು ಬರದೇ ಇರುವ ಕಾರಣ ಕೆರೆಯಲ್ಲಿ ಮುಳುಗಿದ್ದಾನೆ ಎಂದು ತಿಳಿದು ಬಂದಿದೆ.

ನೀರಿನಲ್ಲಿ ಮುಳುಗಿದ ವಿದ್ಯಾರ್ಥಿಯನ್ನು ಪತ್ತೆಹಚ್ಚಲು ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸಿದ್ದು, ಬಳಿಕ ಮೃತದೇಹವನ್ನು ಹೊರತೆಗೆದಿದ್ದಾರೆ ಎಂದು ತಿಳಿದು ಬಂದಿದೆ.

ಮೃತ ವಿದ್ಯಾರ್ಥಿಯನ್ನು ಆಕಾಶ ಎಂದು ಗುರುತಿಸಲಾಗಿದೆ. ಆತ ಹಾಸ್ಟೆಲ್‌ನಲ್ಲಿ ವಾಸವಾಗಿದ್ದನು.

ಈ ಘಟನೆಗೆ ಹಾಸ್ಟೆಲ್ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ ಎಂದು ವಿದ್ಯಾರ್ಥಿಯ ಪಾಲಕರು ಆರೋಪಿಸಿದ್ದಾರೆ. ಸಮರ್ಪಕ ಮೇಲ್ವಿಚಾರಣೆ ಹಾಗೂ ಭದ್ರತಾ ಕ್ರಮಗಳ ಕೊರತೆಯಿಂದ ಈ ದುರ್ಘಟನೆ ಸಂಭವಿಸಿದೆ ಎಂದು ದೂರಿದ್ದಾರೆ.

ಘಟನೆಯ ಮಾಹಿತಿ ತಿಳಿದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

# 10ನೇ ಘಟಿಕೋತ್ಸವ: ಅಭ್ಯರ್ಥಿಗಳಿಗೆ ಪದವಿ ಪ್ರದಾನ




• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕಕೇಂದ್ರಿಯವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ ಇದೇ ಏಪ್ರಿಲ್ 22 ರಂದು ವಿ.ವಿ. ಕ್ಯಾಂಪಸ್ ನಲ್ಲಿ ಆಯೋಜಿಸಿದ್ದು, ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟುಸತ್ಯನಾರಾಯಣ ಹೇಳಿದರು.

ಶನಿವಾರ ಕಡಗಂಚಿಯಲ್ಲಿರುವ ವಿ.ವಿ.ಯ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2.30 ಗಂಟೆಗೆ ವಿ.ವಿ. ಬಹುಪಯೋಗಿ ಭಾಂಗಣದಲ್ಲಿ ಘಟಿಕೋತ್ಸವ ನಡೆಯಲಿದ್ದು, ಕರ್ನಾಟಕದ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಸಹ ಭಾಗಿಯಾಗಲಿದ್ದಾರೆ ಎಂದರು. ಕಾರ್ಯಕ್ರಮಕ್ಕೆ ಉಪ ರಾಷ್ಟ್ರಪತಿಗಳ ಆಗಮಿಸುತ್ತಿರುವುದರಿಂದ ಹೆಚ್ಚಿನ ಭದ್ರತಾ ವ್ಯವಸ್ಥೆ ಮಾಡಲಾಗಿದ್ದು, ಶಿಷ್ಟಾಚಾರದಂತೆ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ, ಅಧಿಕಾರಿ ವರ್ಗದವರು,ಪಾಲಕರು ಕಡ್ಡಾಯವಾಗಿ ಗುರುತಿನ ಚೀಟಿಯೊಂದಿಗೆ ಭಾಗವಹಿಸಬೇಕು. ಘಟಿಕೋತ್ಸವದ ಯಶಸ್ವಿಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪ್ರೊ. ಬಟ್ಟುಸತ್ಯನಾರಾಯಣ ತಿಳಿಸಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ದೇಶದಲ್ಲಿಯೆ ಮುಂಚೂಣಿಯಾಗಿ ಬೆಳೆಯುತ್ತಿರುವ ವಿ.ವಿ.ಗಳಲ್ಲಿ ಒಂದಾಗಿದೆ. 34 ವಿಭಾಗಗಳನ್ನು ಹೊಂದಿದ್ದು, 34 ಯು.ಜಿ, 15 ಪಿ.ಜಿ. ಕೋರ್ಸ್ ಬೋಧನೆ ಮಾಡಲಾಗುತ್ತಿದೆ. ಪ್ರಸಕ್ತ 2026–27ರಿಂದ ಮತ್ತೆ 5 ಹೊಸ ಪದವಿ ಕೋರ್ಸ್ ಆರಂಭಿಸಲಾಗಿದೆ. ಪ್ರಸ್ತುತ ಸುಮಾರು 3,200 ವಿದ್ಯಾರ್ಥಿಗಳಿದ್ದು, 213 ಬೋಧಕ ಮತ್ತು 110 ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.ವಿ.ವಿ.ಯ ಗುಣಮಟ್ಟ ಶಿಕ್ಷಣ ಅಳತೆಗೆ ಅಲ್ಲಿನ ಬೋಧಕ ಸಿಬ್ಬಂದಿಗಳ ಪ್ರಾಜೆಕ್ಟ್ ಮೇಲೆ ಅವಲಿಂಬಿತವಾಗಿದ್ದು, ತಾವು ಅಧಿಕಾರ ವಹಿಸಿದ್ದಾಗ 100 ಜನ ಇದ್ದ ಸಂಶೋಧನಾ ಅಭ್ಯರ್ಥಿಗಳ ಸಂಖ್ಯೆ ಇದೀಗ 450ಕ್ಕೆ ತಲುಪಿದೆ. ಹೊಸದಾಗಿ ಎರಡು ವಸತಿ ನಿಲಯ ಸ್ಥಾಪಿಸಿದ್ದು, ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಬೇಕಾದ ಎಲ್ಲಾ ಪೂರಕ ವಾತಾವರಣ ಇಲ್ಲಿ ನಿರ್ಮಿಸಲಾಗಿದೆ. ಜಮ್ಮು ಕಾಶ್ಮೀರ, ಈಶಾನ್ಯ ರಾಜ್ಯಗಳಿಂದ ಸಹ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ ಎಂದರು.

ಸೋಮವಾರದಿಂದಲೆ ಪಿ.ಜಿ ಪರೀಕ್ಷೆ ನಡೆಯಲಿದ್ದು, ಮೇ 8ಕ್ಕೆ ಮುಗಿಯಲಿದೆ. ಮೇ ಅಂತ್ಯಕ್ಕೆ ಫಲಿತಾಂಶ ಘೋಷಿಸಲಾಗುವುದು. ವಿ.ವಿ ಕ್ಯಾಂಪಸ್ ನಲ್ಲಿ ನೀರಿನ ಸಮಸ್ಯೆ ಪರಿಹಾರಕ್ಕೆ ಅಮರ್ಜಾ ಅಲ್ಲದೆ ಪರ್ಯಾಯ ವ್ಯವಸ್ಥೆಯತ್ತವು ನಾವು ಹೆಜ್ಜೆ ಇಟ್ಟಿದ್ದೇವೆ. ಅಂತರ್ಜಲ್ ಹೆಚ್ಚಳಕ್ಕೆ ಮತ್ತು ಹಸರೀಕರಣಕ್ಕೆ ಆದ್ಯತೆ ನೀಡಿದ್ದು, ಇದಕ್ಕಾಗಿ ಸಿ.ಎಸ್. ಆರ್. ನಿಧಿಯಡಿ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಮುಂದಿನ 4–5 ವರ್ಷದಲ್ಲಿ ಕ್ಯಾಂಪಸ್ ಗಿಡಗಳಿಂದ ತುಂಬಿರಲಿದೆ ಎಂದರು. 24 ಜನರಿಗೆ ಪಿ.ಎಚ್.ಡಿ ಪ್ರದಾನ:ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಸುಮಾರು 769 ಜನ ಅಭ್ಯರ್ಥಿಗಳು ಒದವಿ ಒಡೆಯಲು ಅರ್ಹರಾಗಿದ್ದಾರೆ. ಇದರಲ್ಲಿ 197 ಜನ ಪದವಿ, 547 ಜನ ಸ್ನಾತಕೋತ್ತರ ಪದವಿ, 24 ಜನ ಪಿ.ಎಚ್.ಡಿ ಹಾಗು ಓರ್ವ ಅಭ್ಯರ್ಥಿ ಎಂ.ಫಿಲ್ ಪದವಿಗೆ ಅರ್ಹರಾಗಿದ್ದಾರೆ. ಇದರಲ್ಲಿ ಒಟ್ಟಾರೆ 460 ಅಭ್ಯರ್ಥಿಗಳು ಖುದ್ದಾಗಿ ಭಾಗವಹಿಸಿ ಘಟಿಕೋತ್ಸವದ ಪ್ರಮಾಣ ಪತ್ರ ಪಡೆಯಲು ಒಪ್ಪಿಗೆ ಸೂಚಿಸಿದ್ದಾರೆ. ಇನ್ನುಳಿದಂತೆ ಆಯಾ ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದ 22 ಜನರಿಗೆ ಚಿನ್ನದ ಪದಕ ನೀಡಲಾಗುತ್ತಿದ್ದು, ಮಧ್ಯಪ್ರದೇಶ ಮೂಲದ ಬಿ.ಟೆಕ್ ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಶನ್ಸ್ & ಇಂಜಿನೀಯರಿಂಗ್ ವಿದ್ಯಾರ್ಥಿ ದಿವ್ಯಾಂಶು ಸಕ್ಸೇನಾ ಅವರು ಪ್ರೊ. ಎ.ಎಂ.ಪಠಾನ್ ಚಿನ್ನದ ಪದಕ–ಕ್ಕೆ ಭಾಜನರಾಗಿದ್ದು ಬುಧವಾರ ಜರುಗುವ ಘಟಿಕೋತ್ಸವದಲ್ಲಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರೊ. ಬಟ್ಟು ಸತ್ಯನಾರಾಯಣ ತಿಳಿಸಿದರು.

ಸಂಶೋಧನೆಗೆ 80 ಲಕ್ಷ ರೂ. ಅನುದಾನ ಬಿಡುಗಡೆ:ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿಯು ವಿವಿಧ 7 ವಿಷಯಗಳ ಮೇಲೆ ಸಂಶೋಧನೆ ಕೈಗೊಳ್ಳಲು ವಿವಿಗೆ 80 ಲಕ್ಷ ರೂ. ಅನುದಾನ ನೀಡಿದ್ದು,

ಇದು ಸಿ.ಯು.ಕೆ ಪ್ರತಿಷ್ಠಿತ ಸಂಸ್ಥೆಯಾಗಿಗುರುತಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

# ಸಮಸಮಾಜಕ್ಕೆ ಬಸವಣ್ಣನ ಕೊಡುಗೆ ಅನನ್ಯ



• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ

ಸಮಸಮಾಜ ನಿರ್ಮಾಣಕ್ಕೆ ವಿಶ್ವಗುರು ಬಸವಣ್ಣನವರು ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ವಿಧಾಮ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಹೇಳಿದರು.

ನಗರದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಸೋಮವಾರ ನಡೆದ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ಬಸವಣ್ಣನವರು ರಚಿಸಿರುವ ಅನೇಕ ವಚನಗಳು ಮನುಕುಲದ ಏಳ್ಗೆಗೆ ನೆರವಾಗಿದ್ದು, ಅವರ ತತ್ವದರ್ಶಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ವಚನ ಸಾಹಿತ್ಯ ವಿಶ್ವದ ಮೊಟ್ಟಮೊದಲ ಬಂಡಾಯ ಸಾಹಿತ್ಯವಾಗಿದ್ದು, ನವ್ಯ ಕಾವ್ಯ ಪ್ರಕಾರವನ್ನೂ ಅದು ಒಳಗೊಂಡಿದೆ ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಮಾತನಾಡಿ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆಯಲು ವಚನ ಸಾಹಿತ್ಯದಲ್ಲಿನ ಅಂಶಗಳು ಪ್ರಮುಖ ಕಾರಣ. ಸಂಸ್ಕೃತದೊಂದಿಗೆ ಥಳಕು ಹಾಕಿಕೊಂಡಿದ್ದ ಕನ್ನಡ ಸಾಹಿತ್ಯ ಪರಂಪರೆಯನ್ನು ಧಿಕ್ಕರಿಸಿದ ಶರಣ–ರು, ದೇಸೀ ಸಾಹಿತ್ಯ ಪರಂಪರೆ ಅನುಷ್ಠಾನಕ್ಕೆ ತಂದರು ಎಂದರು.

ಮಹಿಳೆ, ದಮನಿತ, ಶೋಷಿತರ ಸಮಾನತೆಗೆ ಬಸವಣ್ಣ ಮತ್ತವರ ಶರಣರ ಬಳಗ ಮಹಾನ್ ಕ್ರಾಂತಿ ಮಾಡಿದೆ. ಬಸವಣ್ಣನ ಚಿಂತನೆಗಳು ಇಂದಿಗೂ ಪ್ರಸ್ತುತ. ಅವರ ವಚನ ಪ್ರತಿಪಾದಿತ ಮೌಲ್ಯಗಳು ಪ್ರತಿಯೊಬ್ಬರಲ್ಲೂ ಶಾಶ್ವತವಾಗಿ ಉಳಿಯಬೇಕು ಎಂದರು.

ಈ ಸಂದರ್ಭದಲ್ಲಿ ಅಫ್ಸರಮಿಯ, ಓಂಕಾರ ತುಂಬಾ, ಉಮೇಶ ಜಮಗಿ, ಮಲ್ಲಿಕಾರ್ಜುನ್ ಮಾಶೆಟ್ಟಿ, ಮಹೇಶ ಅಗಡಿ, ಲಕ್ಷ್ಮಣರಾವ ಬುಳ್ಳಾ, ಸಚ್ಚಿದಾನಂದ ಮಠಪತಿ, ರಾಜು ಟ್ರ್ಯಾಲಿ, ಬಸವರಾಜ ಶೇರಿಕಾರ, ಮಲ್ಲಿಕಾರ್ಜುನ್ ಮಹೇಂದ್ರಕರ್, ಸೈಯದ್ ಯಾಸೀನ್, ಸುರೇಶ ಘಾಂಗ್ರೆ, ದತ್ತು ಲದ್ದಿ, ಓಂಪ್ರಕಾಸ ಅಗಡಿ, ಉಮೇಶ ದಾಡಗಿ, ನರಸಪ್ಪ ಪರಸನೋರ್ ಸೇರಿ ಅನೇಕರಿದ್ದರು.

# ವಿಶ್ವಗುರು ಬಸವಣ್ಣನವರ ಸಂದೇಶ ಇಂದಿಗೂ ಪ್ರಸ್ತುತ



• ಮಲ್ಲಮ್ಮ ನುಡಿ ವಾರ್ತೆ, ಬೀದರ್

ಸಮಾನತೆ, ಮಾನವೀಯತೆ ಹಾಗೂ ಶ್ರಮದ ಮಹತ್ವವನ್ನು ಸಾರಿದ 12ನೇ ಶತಮಾನದ ಮಹಾನ್ ಸಮಾಜ ಸುಧಾರಕ ವಿಶ್ವಗುರು ಬಸವಣ್ಣನವರ ಸಂದೇಶಗಳು ಇಂದಿನ ಸಮಾಜದಲ್ಲಿಯೂ ಅತ್ಯಂತ ಪ್ರಸ್ತುತವಾಗಿವೆ. ಸಮಾಜದಲ್ಲಿ ಜಾತಿ ಪಾತ, ಅಸಮಾನತೆ, ಅಂಧಶ್ರದ್ಧೆ, ಶೋಷಣೆಗಳ ವಿರುದ್ಧ ಹೋರಾಡಿದ ಬಸವಣ್ಣನವರು ಸಮಾನತೆಯ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದರು ಎಂದು ಭಾರತೀಯ ಮಜ್ದೂರ್ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಣಪತಿ ಸಕ್ರೆಪನೋರ್ ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ನಗರದ ಅಂಬಿಗರ ಚೌಡಯ್ಯ ಸೇನೆಯ ಜಿಲ್ಲಾ ಕೇಂದ್ರ ಕಚೇರಿಯಲ್ಲಿ ನಡೆದ ವಿಶ್ವಗುರು ಬಸವಣ್ಣನವರ 893ನೇ ಜಯಂತಿ ಆಚರಣೆಯ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಯುವ ಸೇನೆಯ ಸಂಸ್ಥಾಪಕ ಅಧ್ಯಕ್ಷರಾದ ಸುನೀಲ ಭಾವಿಕಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಹತ್ವದ ಸಂದೇಶವು ಶ್ರಮಕ್ಕೆ ಗೌರವ ನೀಡುವ ಸಂಸ್ಕೃತಿಯನ್ನು ಬೆಳೆಸಿತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪರಿಶ್ರಮದಿಂದ ಬದುಕಬೇಕು ಹಾಗೂ ಶ್ರಮವನ್ನು ಪವಿತ್ರವೆಂದು ಪರಿಗಣಿಸಬೇಕು ಎಂಬುದನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ತಿಳಿಸಿದರು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ಬಸವಣ್ಣ ದೇವಸ್ಥಾನ ಜೀರ್ಣೋದ್ಧಾರಕ್ಕೆ ಒತ್ತಾಯಿಸಿ ಶಾಸಕರಿಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಕುಂಬಾರಪೇಟೆ ಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಅನುದಾನ ನೀಡುವಂತೆ ಬಸವೇಶ್ವರ ದೇವಸ್ಥಾನ ಸಮಿತಿಯಿಂದ ಲಿಂಗಸಗೂರ ಕ್ಷೇತ್ರದ ಶಾಸಕ ಮಾನಪ್ಪ ಡಿ. ವಜ್ಜಲ್ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಬಸವ ಜಯಂತಿ ಪ್ರಯುಕ್ತ ಬಸವೇಶ್ವರ ದೇವಸ್ಥಾನ ಸಭಾಂಗಣದಲ್ಲಿ ಕಳೆದ 10 ದಿನಗಳಿಂದ ಜರುಗುತ್ತಿರುವ ಶ್ರೀ ಗುರುಗುಂಟ ಅಮರೇಶ್ವರ ಪುರಾಣ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಾಸಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಸಮಿತಿ ಸದಸ್ಯರು ಬಸವೇಶ್ವರ ದೇವಸ್ಥಾನ ಸಮಿತಿಯ ಸಭಾಂಗಣವನ್ನು ಅಭಿವೃದ್ಧಿ ಪಡಿಸಲು ಟಿನ್ ಶೆಡ್ ನಿರ್ಮಾಣ ಹಾಗೂ ಪುರಾತನ ಕಾಲದ ಈಶ್ವರ ದೇವಸ್ಥಾನದ

ಜೀರ್ಣೋಧ್ಧಾರಕ್ಕಾಗಿ 10 ಲಕ್ಷ ಅನುದಾನವನ್ನು ನೀಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು ಹಂತ ಹಂತವಾಗಿ ಅನುದಾನವನ್ನು ಮೀಸಲಿರಿಸಿ ದೇಗುಲದ ಜೀರ್ಣೋದ್ಧಾರಕ್ಕೆ ಸಹಕರಿಸಲಾಗುವುದೆಂದು ಭರವಸೆ ನೀಡಿದರು.

ರಾಯಚೂರು ಜಿಲ್ಲಾ ಬಿಜೆಪಿ ಜಿಲ್ಲಾಧ್ಯಕ್ಷ ಲೆಕ್ಕಿಹಾಳ ಪಾಟೀಲ್, ನಗರ ಘಟಕದ ಅಧ್ಯಕ್ಷ ಕರಿಯಪ್ಪ ಯಾದವ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಪ್ಪ ಮಾಟೂರು,

ಶಿವಾನಂದ ಸುಂಕದ, ಬಸವರಾಜ ಬಳೆಗಾರ, ವೀರೇಶ ಖೇಣೇದ, ಮಹಾಂತೇಶ ಗದ್ದಿ, ಶರಣಪ್ಪ ಕುಂಬಾರ, ಚೆನ್ನಪ್ಪ ಕುಂಬಾರ, ಸಂಗಮೇಶ ಸರಗಣಾಚಾರಿ, ಅಮರೇಶಪ್ಪ ತಲೇಖಾನ, ವೀರಭದ್ರಯ್ಯ, ವೀರೇಶ, ಬಸವರಾಜ ಸೇರಿದಂತೆ ಇನ್ನಿತರರು ಇದ್ದರು.

## ಐಟಿಐ ವಿದ್ಯಾರ್ಥಿಗಳಿಂದ ನಿರೀಕ್ಷೆಗೂ ಮೀರಿದ

# ಕೌಶಲ್ಯ, 100 ಪ್ರಾಜೆಕ್ಟ್‌ಗಳ ಪ್ರದರ್ಶನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಿರೀಕ್ಷೆಗೂ ಮೀರಿದ ಕೌಶಲ್ಯ ಪ್ರದರ್ಶಿಸಿದ್ದಾರೆ. ಭವಿಷ್ಯದಲ್ಲಿ ಐಟಿಐ ಪಾಸಾದ ಅಭ್ಯರ್ಥಿಗಳಿಗೆ ಜೆಸ್ಕಾಂನಲ್ಲಿ ಅಪ್ರೆಂಟಿಶಿಪ್ ತರಬೇತಿ ಹಾಗೂ ಲೈನ್‌ಮನ್ ಹುದ್ದೆಗಳಲ್ಲಿ ಆದ್ಯತೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ ಹೇಳಿದರು.

ನಗರದಲ್ಲಿ ಶನಿವಾರ ಸರ್ಕಾರಿ ಕೈಗಾರಿಕಾತರಬೇತಿ(ಪುರುಷ)ಸಂಸ್ಥೆಯಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಪುರುಷ) ಕಲಬುರಗಿ ನೋಡಲ್ ಜಿಲ್ಲೆಯ ಸರಕಾರಿ ಮತ್ತು ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಯೋಜನೆಯಲ್ಲಿ ತಾಂತ್ರಿಕ ಕೌಶಲ್ಯ ಸ್ಪರ್ಧೆ /ಪ್ರದರ್ಶನ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಲ್ಲದೆ, ಸಂಸ್ಥೆಯ ಉನ್ನತೀಕರಣಕ್ಕೆ ಅಗತ್ಯವಿರುವ ಅನುದಾನಕ್ಕಾಗಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುವುದಾಗಿ ತಿಳಿಸಿದರು. ಖ್ಯಾತ ಉದ್ದಿಮಿ ಅರುಣಕುಮಾರ ಲೋಯಾ ಅವರು ಮಾತನಾಡಿ, ತರಬೇತಿದಾರರು ಕೇವಲ ನೌಕರಿಗಾಗಿ ಕಾಯದೆ, ತಾವೇ ಉದ್ಯಮ ಸ್ಥಾಪಿಸಿ ಇತರರಿಗೆ ಉದ್ಯೋಗದಾತರಾಗಬೇಕು ಎಂದು ಹೇಳಿದರು. ದಾವಣಗೆರೆ ಐ.ಟಿ.ಓ.ಟಿ ಜಂಟಿ ನಿರ್ದೇಶಕ ರವೀಂದ್ರನಾಥ ಎಸ್. ಬಾಳ್ಳಿ ಅವರು ಮಾತನಾಡಿ ತರಬೇತಿದಾರರ ಹಿತದೃಷ್ಟಿಯಿಂದ ಕೈಗಾರಿಕೆಗಳ ಜೊತೆ ಒಪ್ಪಂದ ಮಾಡಿಕೊಳ್ಳುವ ಅಗತ್ಯತೆಯನ್ನು ಪ್ರತಿಪಾದಿಸಿದರು.

ಜಿಲ್ಲೆಯ ವಿವಿಧ ಸರ್ಕಾರಿ ಹಾಗೂ ಅನುದಾನಿತ ಐಟಿಐ ಸಂಸ್ಥೆಗಳ ಸುಮಾರು 1000 ತರಬೇತಿದಾರರು ಈ ಬೃಹತ್ ಪ್ರದರ್ಶನದಲ್ಲಿ ಪಾಲ್ಗೊಂಡು ತಮ್ಮ ತಾಂತ್ರಿಕ ನೈಪುಣ್ಯತೆಯನ್ನು ಪ್ರದರ್ಶಿಸಿದರು. ಈ ಪ್ರದರ್ಶನದಲ್ಲಿ ಒಟ್ಟು 100 ತಾಂತ್ರಿಕ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಿಂದ 32, ಉತ್ಪಾದನಾ ವಿಭಾಗದಿಂದ 28, ಆಟೋಮೋಟಿವ್‌ನಿಂದ 19 ಸೇರಿದಂತೆ ಕನ್ಸ್ಟ್ರಕ್ಷನ್, ಐಟಿ ಹಾಗೂ ಇತರ ವಿಭಾಗಗಳ ಮಾದರಿಗಳು ಜನರ ಗಮನ ಸೆಳೆದವು. ಲಭ್ಯವಿರುವ ಕಡಿಮೆ ಸಂಪನ್ಮೂಲಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಯಾರಿಸಿದ ಈ ಪ್ರಾಜೆಕ್ಟ್‌ಗಳು ಅವರ ಪ್ರಾಯೋಗಿಕ ಜ್ಞಾನಕ್ಕೆ ಕನ್ನಡಿ ಹಿಡಿದಿದ್ದವು.



# ಯತ್ನಾಳ್ ಹೊಸ ಪಕ್ಷ ..?



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಮುಂದಿನ ತಿಂಗಳು ಒಳ್ಳೆಯ ಮುಹೂರ್ತ ನೋಡಿ, ಹೊಸ ರಾಜಕೀಯ ವಿಚಾರ ಪ್ರಾರಂಭ ಮಾಡುತ್ತೇನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ...

ಹೌದು ವಿಜಯಪುರ ನಗರದಲ್ಲಿ ಬಸವೇಶ್ವರ ವೃತ್ತದಲ್ಲಿ ಮಾಲಾರ್ಪಣೆ ನೆರವೇರಿಸಿ ಮಾದ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೊದಲು ಹಿಂದುತ್ವದ ಸಭೆ ಮಾಡುತ್ತೇನೆ ಕೋಲಾರ ಜಿಲ್ಲೆಯಲ್ಲಿ ಐತಿಹಾಸಿಕ ವಿಘ್ನೇಶ್ವರ ದೇವಸ್ಥಾನ ದಿಂದ ಸಭೆ ಪ್ರಾರಂಭ ಮಾಡಿದ ಬಳಿಕ ಇಡೀ ರಾಜ್ಯದ ಪ್ರವಾಸ ಮಾಡುವೆ ಎಂದಿದ್ದಾರೆ...

ಹಿಂದುತ್ವ, ನಿರುದ್ಯೋಗ, ಅಭಿವೃದ್ಧಿ ಮೂರು ಉದ್ದೇಶ ಹೊಂದಿ ಸಭೆಗಳನ್ನು ಮಾಡುತ್ತೇನೆ

ಮುಂದಿನ ದಿನಗಳಲ್ಲಿ ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಜನರ ಅಭಿಪ್ರಾಯ ನಡೆಯುತ್ತೇನೆ.

ಮೇ ತಿಂಗಳಲ್ಲಿ ಒಳ್ಳೆಯ ಮುಹೂರ್ತ ನೋಡಿ ರಾಜ್ಯದ್ಯಂತ ಪ್ರವಾಸ ಮಾಡಿ ಎಲ್ಲಾ ಜಿಲ್ಲಾ ಕೇಂದ್ರ ನಂತರ ತಾಲೂಕು ಕೇಂದ್ರ ಪ್ರವಾಸ ಮಾಡುತ್ತಾ ಹಿಂದೂಪರ ಚಿಂತನೆ ಉಳ್ಳವರು, ನಿರುದ್ಯೋಗಿ ಯುವಕರ, ಅಭಿವೃದ್ಧಿ ಚಿಂತನೆ ಪರ ಇರುವ ಜನರ ಸಭೆ ನಡೆಸುವುದಾಗಿ ತಿಳಿಸಿದರು

ಪಕ್ಷದ ಚಿಹ್ನೆಯನ್ನು ಚುನಾವಣೆ ಆಯೋಗ ಯಾವುದನ್ನು ಕೊಡುತ್ತಾರೆ ಕಾದು ನೋಡಬೇಕು, ಮೊದಲು ಇಡೀ ರಾಜ್ಯದ ಜನರ ಅಭಿಪ್ರಾಯ ಪಡೆದುಕೊಳ್ಳುತ್ತೇನೆ ಮುಂದೇನು ಮಾಡಬೇಕು ನಂತರ ನಿರ್ಣಯ ಮಾಡುತ್ತೇನೆ ಎಂದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ತಿಳಿಸಿದರು...

# ಜಗಜ್ಯೋತಿ ವಿಶ್ವಗುರು ಶ್ರೀ ಬಸವ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ**

ಇಂದು ಗಂಗಾವತಿ ನಗರದಲ್ಲಿ ಜರುಗಿದ ಜಗಜ್ಯೋತಿ ವಿಶ್ವಗುರು ಶ್ರೀ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ ಅವರು ಪಾಲ್ಗೊಂಡು ಮಾತನಾಡಿದರು.

ಮೊದಲಿಗೆ ಮುರಹರಿ ನಗರದಲ್ಲಿ ಆಯೋಜಿಸಲಾದ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಬಸವೇಶ್ವರ ವೃತ್ತದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು. ಬಳಿಕ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಸಮೀಪದಲ್ಲಿರುವ ಶ್ರೀ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಂಸದರಾದ ಶಿವರಾಮೇಗೌಡ್ರು, ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಮಾಜಿ ಜಿಲ್ಲಾಧ್ಯಕ್ಷರಾದ ವಿರೂಪಾಕ್ಷಪ್ಪ ಸಿಂಗನಾಳ್, ಗ್ರಾಮೀಣ ಮಂಡಲ ಅಧ್ಯಕ್ಷರಾದ ಡಿ.ಕೆ ಆಗೋಲಿ, ಮಾಜಿ ಕಾಡಾ ಅಧ್ಯಕ್ಷರುಗಳಾದ ತಿಪ್ಪೇರುದ್ರಸ್ವಾಮಿ, ಗಿರೇಗೌಡ್ರು ಮುಖಂಡರಾದ ಮನೋಹರಗೌಡ ಹೇರೂರು, ವೀರೇಶ್ ಬಲಕುಂದಿ, ಸಿದ್ದರಾಮಯ್ಯ ಸ್ವಾಮಿ, ಪ್ರಸಾದ್, ಜೋಗದ ದುರ್ಗಪ್ಪ ದಳಪತಿ, ವಿಶ್ವನಾಥ್ ಕೆಸರಟ್ಟಿ, ಜಿಲಾನಿ ಪಾಷಾ, ದಿಲೀಪ್ ಕುಮಾರ ವಂದಾಳ, ಷಣ್ಮುಖಪ್ಪ, ಕಾಳಪ್ಪ, ಅರಳಿ ಶೇಖರಪ್ಪ, ಬಸವರಾಜು, ಶರಣಪ್ಪ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಬಳಿಕ ಇದೇ ವೇಳೆಯಲ್ಲಿ ಗಂಗಾವತಿ ನಗರದ ಬಿಜೆಪಿ ಕಚೇರಿಯಲ್ಲಿ ಆಚರಿಸಲಾದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ ಅವರು ಪಾಲ್ಗೊಂಡು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಪಕ್ಷದ ಪಕ್ಷದ ಎಲ್ಲಾ ಪದಾಧಿಕಾರಿಗಳು, ಮುಖಂಡರು, ಮಹಿಳೆಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಸವ ವಚನಗಳು ಇಂದಿಗೂ ಪ್ರೇರಣೆ: ಖಾಸಮಠ ಶ್ರೀಗಳ ಕರೆ



• **ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್**

893ನೇ ಬಸವ ಜಯಂತಿ ಅಂಗವಾಗಿ ಗುರುಮಠಕಲ್ ಪಟ್ಟಣದ ಮಹಾತ್ಮ ಬಸವೇಶ್ವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುರುಮಠಕಲ್ ಖಾಸಮಠದ ಶ್ರೀಗಳಾದ ಶ್ರೀ ಮನಿಪ್ರ ಶಾಂತವೀರ ಗುರು ಮುರುಘ ರಾಜೇಂದ್ರ ಮಹಾ ಸ್ವಾಮಿಗಳು ಅವರು ನಾಮಫಲಕಕ್ಕೆ ಪೂಜೆ ಸಲ್ಲಿಸಿ ಬಸವ ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಬಸವೇಶ್ವರ ಅವರು ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ, ಅಂಧಶ್ರದ್ಧೆ ವಿರೋಧ ಮತ್ತು ಮಾನವೀಯ ಮೌಲ್ಯಗಳನ್ನು ಸಾರಿದ ಮಹಾನ್ ಕ್ರಾಂತಿಕಾರಿಯಾಗಿದ್ದರು ಎಂದರು.

ಬಸವಾದಿ ಶರಣರ ಚಿಂತನೆಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶ್ರೀಗಳು ಹೇಳಿದರು. ಯುವಕರು ಬಸವ ತತ್ವಗಳನ್ನು ಅರಿತು ಸಮಾಜಮುಖಿ ಜೀವನ ನಡೆಸಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಉರಗರಕ್ಷಕರಾದ ಅಂಜಪ್ಪ ಅವರಿಗೆ ಸಮಾಜ ಸೇವೆಗಾಗಿ ಸನ್ಮಾನಿಸಲಾಯಿತು.

ವೀರಶೈವ ಲಿಂಗಾಯತ ಸಮಾಜದ ಬಾಂಧವರು, ವಿವಿಧ ಸಮಾಜಗಳ ಗಣ್ಯರು ಹಾಗೂ ರಾಜಕೀಯ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಬಸವೇಶ್ವರರ ತತ್ವಗಳಿಗೆ ಗೌರವ ಸಲ್ಲಿಸಿದರು.

# ಮಂಗ ದಾಳಿ: ನಾಲ್ವರಿಗೆ ಗಾಯ

• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮದಲ್ಲಿ ಕಳೆದ ಮೂರು ದಿನಗಳಲ್ಲಿ ನಾಲ್ವರ ಮೇಲೆ ಮಂಗ ದಾಳಿ ಮಾಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಖುಷಿ ಶ್ರೀಕಾಂತ, ಸಿದ್ದಾರ್ಥ ಶಿವಪ್ಪ, ದಸರಾಂತ ಗಿರಪ್ಪ, ವೀರೇಶ ಶಾಂತಪ್ಪ ಮೇಲೆ ಮಂಗ ದಾಳಿ ಮಾಡಿದೆ.

ತೊಡೆ, ಮೊಣಕಾಲು ಸೇರಿದಂತೆ ದೇಹದ ಭಾಗಗಳ ಮೇಲೆ ದಾಳಿ ಮಾಡಿ ಗಾಯಗೊಳಿಸಿದೆ.

ಅರಣ್ಯ ಸಿಬ್ಬಂದಿ ಭಾನುವಾರ ಇಡೀ ದಿನ ಮಂಗವನ್ನು ಸೆರೆ ಹಿಡಿಯಲು ಪ್ರಯತ್ನಿಸಿದರು. ಆದರೆ, ಮಂಗ ಮನೆ ಸಮೀಪದ ಗಿಡದ ತುತ್ತ ತುದಿಯ ಮೇಲೆ ಕುಳಿತಿರುವುದರಿಂದ ಅದನ್ನು ಸೆರೆ ಹಿಡಿಯಲು ಆಗಲಿಲ್ಲ. ಇನ್ನೂ ಪ್ರಯತ್ನ ಮುಂದುವರಿಸಿದ್ದೇವೆ ಎಂದು ಉಪ ವಲಯ ಅರಣ್ಯ ಅಧಿಕಾರಿ ಶಾಂತಕುಮಾರ್ ತಿಳಿಸಿದರು.



ಬಸವಕಲ್ಯಾಣ :ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಬಸವ ಜಯಂತಿ ನಿಮಿತ್ಯ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ವಿಶ್ವಗುರು ಬಸವಣ್ಣನವರಿಗೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಬಾಬುಹೊನ್ನಾ ನಾಯಕ, ಮಲ್ಲಿನಾಥ ಹಿರೇಮಠ ಹಾರಕೂಡ, ಹೇಮಲತಾ ಎಂ. ಹಿರೇಮಠ, ಅಲ್ಲಮ ಪ್ರಭು ಹಿರೇಮಠ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಬಸವಣ್ಣ ಅವರ ತತ್ವ, ಆದರ್ಶ ಪ್ರತಿಯೊಬ್ಬರು ಪಡೆದುಕೊಳ್ಳಲು ಗುರುಶಾಂತ ಕರೆ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ**

ಜಾತೀಯತೆ ತೊಡೆದು ಹಾಕಲು 12ನೇ ಶತಮಾನದಲ್ಲೇ ಆರಂಭಿಸಿದ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ಅವರ ತತ್ವ, ಆದರ್ಶಗಳನ್ನು ಯುವ ಪೀಳಿಗೆ ಉಳಿಸಲು ಮುಂದಾಗಬೇಕು ಎಂದು ಕಾರ್ಯನಿರ್ವಾಹಕ ಅಭಿಯಂತರರಾದ ಗುರುಶಾಂತ ವಾರದ್ ಪಟ್ಟಣದ ಕೆಇಬಿ ಆವರಣದಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ನುಡಿದರು. ಜಾತಿ, ಮತ, ಪಂಥಗಳ ಬೇಧವಿಲ್ಲದೇ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಬದುಕು ಕಟ್ಟಿಕೊಳ್ಳುವುದು ಅಗತ್ಯ. ಧ್ಯಾನದಲ್ಲಿ ಲೀನವಾಗಿ ಸಮಾಜವನ್ನು ಕುರಿತು ಚಿಂತನೆ ಮಾಡಬೇಕು. ಸೇವೆಯ ಮೂಲಕ ಎಲ್ಲ ಶರಣರು ಸಮಾಜಮುಖಿ ಕೆಲಸ ಮಾಡ ಬೇಕು, ಕೊಳಚೆ ಪ್ರದೇಶಗಳ ನಿರ್ಮೂಲನ ವಾದರೆ ಪರಿಸರ ಹೇಗೆ ಸ್ವಚ್ಛವಾಗುತ್ತದೋ ಹಾಗೆ ಮನಸ್ಸಿನ ನೈರ್ಮಲ್ಯಗಳನ್ನು ತೊಳೆದು ಅಲ್ಲಿ ನಿರ್ಮಲವಾದ ಭಕ್ತಿ, ಸೇವೆಯನ್ನು ರೂಢಿಸಿಕೊಳ್ಳಬೇಕು.

ಸಮರ್ಪಣಾ ಭಾವ ದಿಂದ ಸಮಾಜಕ್ಕೆ ಒಳಿತಾಗುವ ಕಾರ್ಯ ಗಳನ್ನು ಮಾಡಬೇಕು ಎಂದು ಗುರುಶಾಂತ ವಾರದ್ ಹೇಳಿದರು.ಲೆಕ್ಕಾಧಿಕಾರಿ ಗಣಪತಿ ಖೇಣಿಕರ್ ಮಾತನಾಡಿ,ಬಸವಣ್ಣವರು ಕಾಯಕದಲ್ಲಿ ದೇವರನ್ನು ಕಾಣಿರಿ ಎಂದು ಬೋಧಿಸಿದ ಮಹಾನ್ ದೇವ ಮಾನವ. ಮನುಷ್ಯ ತಾನು ಮಾಡುತ್ತಿರುವ ಕಾಯಕವನ್ನು ಪ್ರೀತಿಯಿಂದ ಕಾಣಬೇಕು. ನಾವು ಮಾಡುವ ಕಾಯಕದಲ್ಲಿ ದೇವರು ಅಡಗಿದ್ದಾನೆ ಎಂಬುದನ್ನು ನಾವು ಅರಿಯಬೇಕು. ಮಾನವಕುಲ ಸಹೋದರರಂತೆ ಕಾಣಬೇಕು. ಮನುಷ್ಯ ತನ್ನನ್ನು ತಾನು ಶುದ್ಧಿಕರಣ ಮಾಡಿಕೊಳ್ಳಬೇಕು ಎಂದು ಹೇಳಿದರು. ಇಂದಿನ ಯುವಕರು ಬಸವಣ್ಣನವರ ವಚನಗಳನ್ನು ನಿತ್ಯ ಪಠಿಸುವುದರಿಂದ ಮತ್ತು ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ಮಕ್ಕಳ ಮನಸ್ಸು ಪರಿಶುದ್ಧವಾಗುತ್ತದೆ. ಬಸವಣ್ಣನವರು ನಮಗೆ ದಾರಿ ದೀಪ. ಅವರು ನುಡಿದಂತೆ ನಡೆದವರು ಎಂದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಾಂತರರಾದ ರಮೇಶ ಮೈನಾಳೆ, ರಾಹುಲ್ ಹಿಜಾರೆ, ಸಂಘದ ಹಿರಿಯ ನಾಯಕ ಶಂಕರ ಪಸಾರ್ಗಿ, ಕಿರಿಯ ಇಂಜಿನಿಯರ್ ಇಬ್ರಾನ್ ಸಾಬ್, ನಾಗಪ್ಪ ಖಂಡಳಕತ್, ವೀರಯ್ಯ ಸ್ವಾಮಿ, ಸಿದ್ದಲಿಂಗ ಸ್ವಾಮಿ, ಪ್ರಥ್ವೀರಾಜ್ ಕಲ್ಲೂರ, ಶಿವಕುಮಾರ ಒಳಸಂಗೆ, ಶ್ರೀನಿವಾಸ್ ಎಂ.ಟಿ, ಸಂತೋಷ ಮುಸ್ತಾರ್ಗಿ, ಮಹೇಶ ಹುಡೇದ್, ಬಸವರಾಜ ಹತ್ತಿ, ಅಶೋಕ ಮಲ್ಲಶೆಟ್ಟಿ, ಮಂಜುನಾಥ ಲಗಶೆಟ್ಟಿ, ದೇವರಾಜ ಪಾಟೀಲ, ತುಕಾರಾಮ್ ಜಲಸಂಗಿ, ಕೇಂದ್ರ ಸಮಿತಿ ಸದಸ್ಯರಾದ ಥಾಮಸ್ ಕಟ್ಟಿಮನಿ, ಕಲ್ಯಾಣ ಸಂಸ್ಥೆ ರಮೇಶ್ ಸಂಗಮ್, ಕಾರ್ಯನಿರ್ವಾಹಕ ಅಭಿಯಾಂತರರು ಜಗನಾಥ ಖೇ–ರೋಜಿ, ಸಹಾಯಕ ಲೆಕ್ಕಾಧಿಕಾರಿ ರವಿಚಂದ್ರ, ಕಾರ್ಯದರ್ಶಿ ಶ್ರೀಕಾಂತ, ಮಹಿಳಾ ಸಂಘದ ಅಧ್ಯಕ್ಷೆ ಖುಷಿಯಾ ಹಾಗೂ ಇನ್ನಿತರರು ಇದ್ದರು.

# ಮಾಲಿನ್ಯದಿಂದ ಜೀವ ಹರಣವಾದರೆ ಅಭಿವೃದ್ಧಿ ಯಾರಿಗಾಗಿ: ಪ್ರಭುದೇವ ಸ್ವಾಮಿಗಳು

• **ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ**

171ನೇ ದಿನದ ಬಲ್ಡೋಟ ಹಟಾವೋ ಧರಣಿ ಸತ್ಯಾಗ್ರಹವನ್ನು ಬಸವ ಭಾಷೆ ಪ್ರವಚನ ಮಾಡಿದ ಬೀದರ ಲಿಂಗಾಯತ ಮಹಾಮಠ ಪೂಜ್ಯ ಶ್ರೀ ಮ.ನಿ.ಪ್ರ. ಪ್ರಭುದೇವ ಮಹಾಸ್ವಾಮಿಗಳು ಬೆಂಬಲಿಸಿ ಮಾತನಾಡಿದರು. ತಾವು ಪ್ರವಚನ ಆರಂಭ ಮಾಡಿದ ದಿನದಿಂದ ಕೊಪ್ಪಳ ಜನರ ಭಾವವನ್ನು ಗಮನಿಸುತ್ತಿದ್ದೇನೆ. ಅವರು ಏನೋ ಕಳೆದು ಹೋಗುತ್ತಿದೆ ಎನ್ನುವ ಮುಖಭಾವ ಕಾಣುತ್ತಿದೆ. ಪ್ರವಚನ ಆಯೋಜಕರು ನನಗೆ ಬಾಧಿತ ಹಳ್ಳಿಯ ಪರಿಸ್ಥಿತಿ ಹೇಳಿದ್ದಾರೆ. ಇಲ್ಲಿನ ವಾತಾವರಣ ಶುದ್ಧವಾಗಿಲ್ಲ. ಧೂಳು, ಹೊಗೆ, ಬೂದಿಯ ಮಾಲಿನ್ಯ ತುಂಗಭದ್ರಾ ನೀರು ವಿಷಗೊಳಿಸಿದೆ ಎಂದು ಗೊತ್ತಾಗಿದೆ. ಅದೇ ನೀರು ಕುಡಿದು ಜನರು ಆರೋಗ್ಯದಿಂದ ಇರಲು ಹೇಗೆ ಸಾಧ್ಯ. 54 ಸಾವಿರ ಹೂಡಿಕೆ ಎಂದರೆ ಖುಷಿಪಡುವ ವಿಚಾರವಲ್ಲ. ಇದರಿಂದ ಉಂಟಾಗುವ ಮಾಲಿನ್ಯಕ್ಕೆ ಯಾರು ಹೊಣೆಯಾಗುತ್ತಾರೆ. ಪ್ರಕೃತಿಯೇ ದೊಡ್ಡ ದೇವರು, ಪ್ರಕೃತಿ ಉಳಿದರಷ್ಟೇ ಜೀವಾತ್ಮರು ಉಳಿಯುತ್ತಾರೆ. ಜೀವಾತ್ಮರ ಜೀವ ಹೋಗುವಾಗ ಅಭಿವೃದ್ಧಿಗೆ ಅರ್ಥವಿಲ್ಲ. ಅಂತಹ ಅಭಿವೃದ್ಧಿ ಯಾರೂ ಒಪ್ಪುವುದಿಲ್ಲ. ನಾನು ಮುಂದಿನ ದಿನಗಳಲ್ಲಿ ಕೊಪ್ಪಳಕ್ಕೆ ಬಂದು ಬಾಧಿತ ಹಿರೇಬಗನಾಳ, ಹಾಲವರ್ತಿ, ಕುಣಿಕೇರಿ, ಕಾಸನಕಂಡಿಗೆ ಭೇಟಿ ನೀಡುತ್ತೇನೆ. ಈ ಹೋರಾಟ ಸಾತ್ವಿಕ ಶಕ್ತಿಯಿಂದ ಸಾಗುತ್ತಿದ್ದು ಜೀವಾತ್ಮರ ಜೀವ ಉಳಿಯಲು ಹೋರಾಟ ಗೆಲ್ಲುತ್ತದೆ. ಸರಕಾರ ಬೇಗ ಗಮನಿಸಿ ಮಾಲಿನ್ಯ ಮಾಡುವ ಕಾರ್ಖಾನೆಗಳನ್ನು ಇಲ್ಲಿಂದ ತೊಲಗಿಸಲಿ ಎಂದರು.

ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು, ರಾಜೇಶ ಸಸಿಮಠ, ಹನುಮೇಶ ಕಲಮಂಗಿ, ಮಹಿಳಾ ನಾಯಕಿಯರಾದ ಜ್ಯೋತಿ ಎಂ. ಗೊಂಡಬಾಳ, ಸರೋಜಾ ಬಾಕಳೆ, ಕಾವ್ಯಾ ಗಡಾದ, ವಿದ್ಯಾ ನಾಲ್ವಾಡ, ಸುಪ್ರೀತ ಪತಂಗೆ, ಸಲೀಮಾ ಜಾನ್, ಪ್ರಸಾದ ಹಿರೇಮಠ, ಜಂಟಿ ಕ್ರಿಯಾ ವೇದಿಕೆ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ. ಗೊಂಡಬಾಳ, ಪ್ರಕಾಶಕ ಡಿ.ಎಂ.ಬಡಿಗೇರ, ರವಿ ಕಾಂತನವರ, ಸುಭಾನ ಸಾಬ್ ನೀರಲಗಿ, ರಾಜಶೇಖರ ಏಳುಬಾವಿ, ರಾಜ್ಯ ರೈತ ಸಂಘದ ಭೀಮಸೇನ ಕಲಕೇರಿ, ಮಹಾದೇವಪ್ಪ ಮಾವಿನಮಡು, ರೇವಣಪ್ಪ ಕುರಿ, ಶಿವಪ್ಪ ಹಲಗೇರಿ, ಹುಸೇನಮ್ಮ ದೊಡ್ಡಮನಿ, ಯಮನೂರಪ್ಪ ಹಾಲಳ್ಳಿ, ಗಾಳೆಪ್ಪ ಪೂಜಾರ, ಪಂಪಣ್ಣ ಚಿಂತಪಲ್ಲಿ, ಹುಸೇನಮ್ಮ ಮಾಳಿಗಿಮನಿ, ದುರುಗಮ್ಮ ಕುರುಗೋಡು, ವೆಂಕಣ್ಣ ತಳವಾರ, ಸುಂಕಮ್ಮ ಪಡಚಿಂತಿ, ರತ್ನಮ್ಮ ದೊಡ್ಡಮನಿ, ಗಂಗಪ್ಪ ಡಂಬಳ, ಭೀಮಪ್ಪ ಯಲಬುರ್ಗಾ, ವಿಜಯಮಹಾಂತೇಶ ಹಟ್ಟಿ ಮುಂತಾದವರು ಇದ್ದರು.




# ಅದ್ದೂರಿಯಾಗಿ ನಡೆದ ಶ್ರೀ ಭೀಮಾಂಬಿಕಾದೇವಿಯ ಪಂಚಕಳಸದ ರಥೋತ್ಸವ



• **ಮಲ್ಲಮ್ಮ ನುಡಿ ವಾರ್ತೆ, ಕುಕನೂರ**

ತಾಲೂಕಿನ ಭಟಪನಹಳ್ಳಿಯ ಶ್ರೀ ಭೀಮಾಂಬಿಕಾದೇವಿಯ ಪಂಚಕಳಸದ ರಥೋತ್ಸವ ಅದ್ದೂರಿಯಾಗಿ ಜರುಗಿತು.ಶ್ರೀ ಭೀಮಾಂಬಿಕಾದೇವಿಯ ಮಠದಲ್ಲಿ 29 ನೇ ಜಾತ್ರಾ ಮೊಹೋತ್ಸವ ಅಂಗವಾಗಿ ಪುರಾಣ ಕಾರ್ಯಕ್ರಮ ಸಾಗಿ ಬಂದವು. ಪ್ರತಿದಿನ ಬೆಳಗಿನ ಜಾವ ಶ್ರೀ ಭೀಮಾಂಬಿಕಾದೇವಿಗೆ ಪೂಜಾ ವಿಧಾನಗಳು ಜರುಗಿ ಬೆಳಿಗ್ಗೆ12.30 ಕ್ಕೆ ಸಾಮೂಹಿಕ ವಿವಾಹಗಳು ಜರುಗಿದವು. ಕಾಗಿನೆಲೆಯ ಜಗದ್ಗುರು ನಿರಂಜನಾನಂದಾಪುರಿ ಸ್ವಾಮೀಜಿ,ಶಿರಹಟ್ಟಿಯ ಫಕೀರಸ್ವಾಮೀಜಿ, ಕುಕನೂರಿನ ಡಾ.ಮಹಾದೇವ ಸ್ವಾಮೀಜಿ, ಯಲಬುರ್ಗಾದ ಬಸವಲಿಂಗೇಶ್ವರ ಸ್ವಾಮೀಜಿ ,ಮಂಗಳೂರಿನ ಸಿದ್ದಲಿಂಗ ಸ್ವಾಮೀಜಿ, ತುರ್ವಿಹಾಳದ ಮಾದಯ್ಯ ಸ್ವಾಮೀಜಿ, ದಮ್ಮೂರಿನ ಹನುಮಂತಪ್ಪಜ್ಜ ಧರ್ಮರ,ಮಲ್ಲನಕೇರಿಯ ಚೆನ್ನಬಸವ ಸ್ವಾಮೀಜಿ, ಕಂಪಸಾಗರದ ನಾಗಭೂಷಣ ಸ್ವಾಮೀಜಿ ಸೇರಿದಂತೆ ಗುರು ಹಿರಿಯರು ನವ ದಂಪತಿಗಳಿಗೆ ಶುಭಕೋರಿದರು.ಈ ವೇಳೆ ಭಟಪನಹಳ್ಳಿಯ ಶ್ರೀ ಭೀಮಾಂಬಿಕಾದೇವಿಯ ಜಾತ್ರಾ ಮಹೋತ್ಸವ ಸಮಿತಿಯ ಪದಾಧಿಕಾರಿಗಳು ಹಾಗು ಗ್ರಾಮದ ಗುರು ಹಿರಿಯರು,ರೈತರು ಹಾಗು ಕೊಪ್ಪಳ, ಬಳ್ಳಾರಿ, ಗದಗ, ಧಾರವಾಡ ,ಹುಬ್ಬಳ್ಳಿ ಜಿಲ್ಲೆಯ ಸುತ್ತಮುತ್ತಲಿನ ಭಕ್ತರು ಭಾಗವಹಿದ್ದರು.ನಂತರ

# ಜಗಜ್ಯೋತಿ ಬಸವೇಶ್ವರ ಜಯಂತಿ ವೈಭವದಿಂದ ಆಚರಣೆ



• **ಮಲ್ಲಮ್ಮ ನುಡಿ, ಹುಣಸಗಿ**

ತಾಲೂಕಿನ ಕೊಡೇಕಲನ ಬಸಪ್ರಭು ಪದವಿ ಮಹಾ ವಿದ್ಯಾಲಯ ಹಾಗೂ ಬಸವ ಜ್ಯೋತಿ ಕೈಗಾರಿಕೆ ತರಬೇತಿ ಕೇಂದ್ರದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ಸಲ್ಲಿಸಲಾಯಿತು. ನಿವೃತ್ತ ಶಿಕ್ಷಕರಾದ ಚಂದ್ರಶೇಖರ ವಕ್ರಾಣಿ ಮುಖ್ಯ ಅತಿಥಿ–ಯಾಗಿ ಮಾತನಾಡಿ, ಬಸವಣ್ಣನವರು ಸಮಾನತೆ, ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳನ್ನು ಸಾರಿದ ಮಹಾನ್ ಸಮಾಜ ಸುಧಾರಕರಾಗಿದ್ದಾರೆ ಎಂದು ಹೇಳಿದರು. ಅವರ ಚಿಂತನೆಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನವಾಗಿವೆ ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಅಧ್ಯಕ್ಷರಾದ ಸಂಘನಗೌಡ ಬಿರಾದಾರ ಮಾತನಾಡಿ, ಬಸವಣ್ಣನವರು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯ ಸ್ಥಾಪನೆಗೆ ಶ್ರಮಿಸಿದ ಮಹಾನ್ ಕ್ರಾಂತಿಕಾರಿಯಾಗಿದ್ದು, ಅವರ ಬೋಧನೆಗಳು ಎಲ್ಲರಿಗೂ ಪ್ರೇರಣೆಯಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಸಾಪ ಕೊಡೇಕಲ್ ವಲಯ ಘಟಕ ಅಧ್ಯಕ್ಷರಾದ ಕೋರಿ ಸಂಗಯ್ಯ, ಶಿಕ್ಷಕಿ ನೀಲಮ್ಮ, ಪ್ರಾಚಾರ್ಯರಾದ ರವಿಕುಮಾರ ಬಂಟನೂರು, ಶಶಿಕುಮಾರ ಜಾದವ, ಜೆ.ಟಿ.ಓ ಸಂತೋಷ ಕೆ–ಂಡದ ಹಾಗೂ ಬಸವಂತರಾಯ ಮರಲಬಾವಿ ಉಪಸ್ಥಿತರಿದ್ದರು.

# ಉಸ್ತುವಾರಿ ಸಚಿವರಿಂದ ಜಗಜ್ಯೋತಿ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ

• **ಮಲ್ಲಮ್ಮ ನುಡಿ ವಾರ್ತೆ, ವಿಜಯಪುರ**

ಬಸವ ಜಯಂತಿ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ.ಪಾಟೀಲ ಅವರು ಸೋಮವಾರ ಬೆಳಿಗ್ಗೆ ನಗರದ ಬಸವೇಶ್ವರ ವೃತ್ತದಲ್ಲಿರುವ ವಿಶ್ವಗುರು ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ವಿಶ್ವ ಗುರು ಬಸವಣ್ಣನವರು ಜನಿಸಿದ ವಿಜಯಪುರ ಜಿಲ್ಲೆಯಲ್ಲಿ ಬಸವಣ್ಣನವರ ಜಯಂತಿಯನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಇವರ ಜಯಂತಿಯನ್ನು ಎಲ್ಲ ಸಮುದಾಯದವರೆಲ್ಲ ಸೇರಿ ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಬಸವನಬಾಗೇವಾಡಿಯಿಂದ ಬಸವಜ್ಯೋತಿ ಯಾತ್ರೆಯೂ ಆಗಮಿಸುತ್ತಿದೆ ಎಂದರು.

ನಗರದಲ್ಲಿ ಬಸವಣ್ಣನವರ ಭವ್ಯ ಮೆರವಣಿಗೆಯೂ ನಡೆಯಲಿದೆ.

ಇಡೀ ವಿಶ್ವಕ್ಕೆ ತಮ್ಮ ವಚನಗಳ ಮೂಲಕ ಉತ್ತಮ ಸಂದೇಶ ನೀಡಿದ ಬಸವಣ್ಣನವರು ಶ್ರೇಷ್ಠ ದಾರ್ಶನಿಕರು, ಅವರಿಗೆ ಜನ್ಮನೀಡಿದ ಹಾಗೂ ಅವರ ಕರ್ಮಭೂಮಿ ಬಸವಕಲ್ಯಾಣ ಸೇರಿದಂತೆ ಎಲ್ಲೆಡೆಯೂ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ.ಕೆ,ಜಿಲ್ಲಾಪಂಚಾಯತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಲಕ್ಷ್ಮಣ ನಿಂಬರಗಿ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು,ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.



# ಬಸವ ಜಯಂತಿ: ಸಪ್ತ ಭಜನೆ



• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಬಳ್ಳಾರಿ,: ತಾಲೂಕಿನ ಶಂಕರಬಂಡೆ ಗ್ರಾಮದಲ್ಲಿ ಕಳೆದ 52 ವರ್ಷಗಳಿಂದ ಬಸವ ಜಯಂತಿ ಅಂಗವಾಗಿ ಗ್ರಾಮದ ಶ್ರೀ ಶಂಕರಲಿಂಗೇಶ್ವರ ದೇವಸ್ಥಾನದಲ್ಲಿ

ಸಪ್ತ ಭಜನೆ ನಡೆಸುತ್ತಾ ಬಂದಿದ್ದು. ಈ ವರ್ಷ ಏ.13 ರಿಂದ ಈ ಭಜನೆ ಕಾರ್ಯಕ್ರಮ ಆರಂಭಿಸಿದೆ.

ಜಿಲ್ಲೆಯ ಹಾಗು ನೆರೆಯ ಆಂದ್ರ ಪ್ರದೇಶದ 35 ಹಳ್ಳಿಗಳ ಭಜನಾ ಮಂಡಳಿಗಳಿಂದ ಏಳು ದಿನಗಳ ಕಾಲ ಹಗಲು ರಾತ್ರಿ ಶಿವನಾಮ ಸ್ಮರಣೆಯ ಭಜನೆ ದಾಸೋಹದೊಂದಿಗೆ.

ಕುಣಿತದಿಂದ ಕೂಡಿದ ಭಜನಾ ಹಾಡುಗಾರಿಕೆ ನೋಡುಗರ ಕಣ್ಮನ ಸೆಳೆಯುತ್ತದೆ

ಹಗಲು ರಾತ್ರಿಯ ಈ ಕಾರ್ಯಕ್ರಮವು ಭಕ್ತಿಯ ಪರಾಕಷ್ಟೇಯಿಂದ ಕೂಡಿದೆ. ನಾಳೆ ಬೆಳಿಗ್ಗೆ ಗಂಗಾಪೂಜೆಯ ಮೂಲಕ ಸಪ್ತ ಭಜನೆ ಮುಗಿಯಲಿದೆ. ನಂತರ ವಿಶೇಷ ಪೂಜೆ ಪ್ರಸಾದ ವಿತರಣೆ ನಡೆಯಲಿದೆಂದು ಭಕ್ತ ಸಮೂಹ ತಿಳಿಸಿದೆ.

# ಜಾತಿ ನಿರ್ಮೂಲನೆಗಾಗಿ ಸಾರಿದ ಬಸವಣ್ಣ ಜಯಂತಿಗೆ ಸೀಮಿತವಾಗಿದೆ: ನಂಜುಂಡಸ್ವಾಮಿ



• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ

ಜಾತಿ ನಿರ್ಮೂಲನೆಗಾಗಿ 12ನೇ ಶತಮಾನದಲ್ಲೇ ಸಾರಿದ ಬಸವಣ್ಣ ನಮ್ಮೆಲ್ಲರ ಆದರ್ಶವಾಗಬೇಕಿತ್ತು ಆದರೆ ಜಯಂತಿಗೆ ಸೀಮಿತವಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾ ಸಭಾ ಮುಖಂಡ ಬೇಕ್ರೆ ನಂಜುಂಡಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಆಡಳಿತ ಭವನದಲ್ಲಿ ನಾಡ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಸೋಮವಾರ ಏರ್ಪಡಿಸಿದ ಜಗಜ್ಯೋತಿ ಶ್ರೀ ಬಸವೇಶ್ವರ ರವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ವಿಶ್ವ ಜ್ಞಾನಿ ಎನಿಸಿಕೊಂಡ ಬಸವಣ್ಣ ರವರ ಸಂದೇಶಗಳನ್ನು ಎಲ್ಲಾ ಭಾಷೆಗಳಲ್ಲೂ ಭಾಷಾಂತರ ಮಾಡಿ ಪುಸ್ತಕಗಳನ್ನು ಮುದ್ರಿಸಿ ಹಂಚಲಾಗುತ್ತಿದೆ.

ಅಲ್ಲದೆ ವಿದೇಶಿಗಳಲ್ಲಿ ಅವರ ವಿಚಾರಧಾರೆ ಪ್ರಸ್ತುತವಾಗಿದೆ ಮತ್ತು ಮನುಕುಲ ಒಂದು ಕಾಯಕ ದೊಂದಿಗೆ ಜೀವನ ನಡೆಸಿ ಸುಳ್ಳು ಮೋಸ ವಂಚನೆಗಳಿಗೆ ಎಲ್ಲೂ ಅವಕಾಶವಾಗಬಾರದು ಎಂದು ತಮ್ಮ ವಚನಗಳ ಮೂಲಕ ಸಂದೇಶ ಸಾರಿದ್ದು ಅದರಂತೆ ಎಲ್ಲರೂ ಪಾಲಿಸಬೇಕೆಂದು ನಂಜುಂಡಸ್ವಾಮಿ ತಿಳಿಸಿದರು.

ಮಾಜಿ ತಾ ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಟಿ ಈರಯ್ಯ ಮಾತನಾಡಿ ಸಂವಿಧಾನ ಶಿಲ್ಪಿ ಡಾಕ್ಟರ್ ಬಿಆರ್ ಅಂಬೇಡ್ಕರ್ ರವರಿಗೆ ಬಸವಣ್ಣನವರೇ ಪ್ರೇರಣೆಯಾಗಿದ್ದು ಅಂದೆ ಸಮಾನತೆಗಾಗಿ ಎಲ್ಲಾ ಜಾತಿ ಜನಾಂಗದವರನ್ನು ಲಿಂಗಧಾರಣೆ ಆಗಿರುವವರಿಂದಲೇ ಜಾತಿಯತೆ ನಡೆಯುತ್ತಿರುವುದು ಅತ್ಯಂತ ವಿಷಾದನೀಯವಾಗಿದೆ.

ಮನುವಾದಿಗಳ ತಪ್ಪು ಸಂದೇಶ ಎಷ್ಟರಮಟ್ಟಿಗೆ ಜನಸಾಮಾನ್ಯರಲ್ಲಿ ಬೀರೂರಿದೆ ಎಂಬುದಕ್ಕೆ ಬಸವ ಜಯಂತಿಯನ್ನು ಮೂಕ ಪ್ರಾಣಿಯಾದ ಜಾನುವಾರುಗಳನ್ನು ಪೂಜೆ ಮಾಡುವ ಮೂಲಕ ಬಸವಣ್ಣನವರ ಹೆಸರನ್ನು ಅಸ್ಥಿರತೆಗೊಳಿಸುವ ಸಂಚು ಇದಾಗಿದೆ ಎಂಬುದನ್ನು ಅರಿಯಬೇಕಿದೆ ಮತ್ತು ಬಸವಣ್ಣನವರ ವಿರುದ್ಧ ನಡೆದ ಕುತಂತ್ರವು ಅವರನ್ನು ಹೇಗೆ ಅಂತ್ಯಗೊಳಿಸಿತ್ತು ಎಂಬುದರ ಬಗ್ಗೆ ಅರಿತು ಜಾಗೃತವಾಗಬೇಕಾಗಿದೆ ಎಂದು ತಿಳಿಸಿದರು.

ತಾಲೂಕು ತಹಶೀಲ್ದಾರ್ ನಿಸರ್ಗ ಪ್ರಿಯ ಜೆ ಮಾತನಾಡಿ ಬಸವಣ್ಣನವರ ದಿಟ್ಟತನದ ನಿಲುವುಗಳು ಎಲ್ಲರಿಗೂ ಆದರ್ಶವಾಗಿದ್ದು ಎಲ್ಲ ವರ್ಗದ ಜನರು ಪಾಲಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಚೆಸ್ಕಾಂ ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಗುರು ಬಸವರಾಜ್ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣೆಗೌಡ. ಮಾಜಿ ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಆವೃತ್ತಿ ಚಂದ್ರಶೇಖರ್. ಲಿಂಗಾಯತ ಸಮುದಾಯದ ಅಧ್ಯಕ್ಷ ಹಿಟ್ನಳ್ಳಿ ಪರಮೇಶ್. ನಿರ್ದೇಶಕ ಕುಮಾರಸ್ವಾಮಿ ಮಾತನಾಡಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭದ ಪ್ರಧಾನ ಕಾರ್ಯದರ್ಶಿ, ನಾಗರಾಜ್ ಕೆಲ್ಲೂರು. ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಕೆ ಹೊಲದಪ್ಪ. ಪಿ ಎನ್ ಡಿ ಬ್ಯಾಂಕ್ ನಿರ್ದೇಶಕ ಮಂಜುನಾಥ್. ಮಾಜಿ ಪುರಸಭಾ ಸದಸ್ಯರಾದ ಎಚ್ ಎಸ್ ಮಂಜುನಾಥ್. ನಿರಂಜನ್ ವೀರಶೈವ ಮಹಾಸಭಾ ಉಪಾಧ್ಯಕ್ಷ ಗಿರೀಶ್. ಪ್ರಭುದೇವ್. ಮಹಾಸಭಾ ನಿರ್ದೇಶಕರಾದ ಲತಾ ತೋಟಪ್ಪ. ಸಮುದಾಯದ ಮುಖಂಡರಾದ ಕೆಂಪಣ್ಣ. ನಂದೀಶ್ ಹಾಜರಿದ್ದರು.

# ಪಟ್ಟದ್ದೇವರ, ಅಗ್ರವಾಲ್ ಅವರ ಸೇವಾ ಕಾರ್ಯ ಮಾದರಿ : ಅನಂತ ಬಿರಾದಾರ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಅಮೃತಮಹೋತ್ಸವದಸಂಭ್ರಮದಲ್ಲಿರುವ ಅನುಭವ ಮಂಟಪದ ಅಧ್ಯಕ್ಷರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಹಾಗೂ ಸೂರ್ಯ ಫೌಂಡೇಶನ್ ಸಂಸ್ಥಾಪಕರಾದ ಪದ್ಮಶ್ರೀ ಜಯಪ್ರಕಾಶ ಅಗ್ರವಾಲ್ ಅವರ ಸೇವಾ ಕಾರ್ಯ ಮಾದರಿಯಾಗಿವೆ ಎಂದು ಐ.ಎನ್.ಓ ರಾಷ್ಟ್ರೀಯ ಅಧ್ಯಕ್ಷರಾದ ಅನಂತ ಬಿರಾದಾರ ಅವರು ಹೇಳಿದರು.

ನಗರದ ಗುರುನಾನಕ್ ದೇವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೂರ್ಯ ಫೌಂಡೇಶನ್, ಇಂಟರ್ನ್ಯಾಷನಲ್ ನ್ಯಾಚುರೋಪತಿ ಆರ್ಗನೈಸೇಶನ್, ಪತಂಜಲಿ ಹಾಗೂ ಗುರುನಾನಕ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ವತಿಯಿಂದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಹಾಗು ಪದ್ಮಶ್ರೀ ಜಯಪ್ರಕಾಶ ಅಗ್ರವಾಲ ಅವರ ಅಮೃತ ಮಹೋತ್ಸವದ ನಿಮಿತ್ತ ಹಮ್ಮಿಕೊಂಡ ಆರೋಗ್ಯ ಜನಜಾಗೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ರಕ್ತದಾನ ಶಿಬಿರ ಹಾಗೂ ಸಸಿ ನೆಟ್ಟು ಅವರು ಮಾತನಾಡಿದರು.

ರಕ್ತದಾನ ಬಗ್ಗೆ ಹಾಗೂ ಪರಿಸರ ರಕ್ಷಣೆ ಉಳಿಸುವುದರ ಜೊತೆಗೆ ಜನರ ಆರೋಗ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದರು.

ರಕ್ತದಾನದಿಂದ ರಕ್ತದೊತ್ತಡ, ಮಧುಮೇಹದಂತಹ ರೋಗಗಳು ನಿಯಂತ್ರಣಕ್ಕೆ ಬರುವುದರ ಜತೆಗೆ ಆತ್ಮತೃಪ್ತಿ ಸಿಗುತ್ತದೆ ಎಂದು ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ ಹೇಳಿದರು.

ರಕ್ತದಾನ ಮಾಡಿ ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ತಪ್ಪು ಕಲ್ಪನೆಗಳಿದ್ದು ಅದನ್ನು ಹೋಗಲಾಡಿಸಬೇಕಿದೆ ಹೆಚ್ಚು ಜನರು ಸೇರುವ ಕೇಂದ್ರಗಳಲ್ಲಿ ನಿಯಮಿತವಾಗಿ ರಕ್ತದಾನ ಶಿಬಿರ ಆಯೋಜಿಸಿದರೆ ದೇಶದಲ್ಲಿನ ರಕ್ತದ ಕೊರತೆ ನೀಗಿಸಬಹುದು ತುರ್ತಾಗಿ ಬೇಕಾಗುವ ರಕ್ತವು ಅಮೂಲ್ಯ ಜೀವ ಉಳಿಸುವ ವಸ್ತುವಾಗಿದೆ ಇದನ್ನರಿತು ಸಮಾಜದ ಪ್ರತಿಯೊಬ್ಬ ಆರೋಗ್ಯವಂತರು ರಕ್ತದಾನ ಮಾಡುವ ಮೂಲಕ ಮಾದರಿಯಾಗಬೇಕೆಂದರು.

ಐ.ಎನ್.ಓ ಹಾಗೂ ಸೂರ್ಯ ಫೌಂಡೇಶನ್ ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ ಮಾತನಾಡಿ ಅನುಭವ ಮಂಟಪದ ಅಧ್ಯಕ್ಷರು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಾಗೂ ಸೂರ್ಯ ಫೌಂಡೇಶನ್ ಸಂಸ್ಥಾಪಕರಾದ ಪದ್ಮಶ್ರೀ ಜಯಪ್ರಕಾಶ್ ಅಗ್ರವಾಲ್ ಅವರ ಅಮೃತ ಮಹೋತ್ಸವದ ನಿಮಿತ್ತ ಆರೋಗ್ಯ ಜನಜಾಗೃತಿ ಅಭಿಯಾನದ ಮೂಲಕ ಜಿಲ್ಲೆಯಾದ್ಯಂತ 75 ಕಡೆ ಯೋಗ ಹಾಗೂ ಪ್ರಾಕೃತಿಕ ಚಿಕಿತ್ಸೆ ಜಾಗೃತಿ ಶಿಬಿರ, ರಕ್ತದಾನ ಶಿಬಿರ, ಸಸಿ ನೆಡುವ ಹಮ್ಮಿಕೊಂಡು ಪೂಜ್ಯರಿಗೆ ಗೌರವ ಸಲ್ಲಿಸುವ ಕೆಲಸ ಮಾಡಿದೆ ಎಂದರು.

ಈ ಸಂದರ್ಭದಲ್ಲಿ ಆಯುರ್ವೇದ ಮಂಡಳಿ ಅಧ್ಯಕ್ಷರಾದ ಡಾ.ಅಲ್ಲಮಪ್ರಭು ಗುಡ್ಡಾ, ಗುರುನಾನಕ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಅಧ್ಯಕ್ಷರಾದ ಡಾ.ಸರ್ದಾರ್ ಬಲಬೀರಸಿಂಗ್, ಜಿಎನಡಿ ಇಂಜಿನಿಯರಿಂಗ ಕಾಲೇಜಿನ ಪ್ರಾಚರ್ಯರಾದ ಡಾ.ವೀಣಾ, ಜ್ಞಾನ ಸುಧಾ ಶಿಕ್ಷಣ ಸಂಸ್ಥೆಯ ಪೂರ್ಣಿಮಾ ಜಿ, ಐ.ಎನ್.ಓ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ ಸ್ವಾಮಿ, ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ, ರಾಜ್ಯ ಕಾರ್ಯದರ್ಶಿ ಯೋಗೆಂದ್ರ ಯದಲಾಪುರೆ, ರಾಜ್ಯ ಕೋಶಾಧ್ಯಕ್ಷ ಡಾ.ಮನ್ಮತಯ್ಯಾ ಸ್ವಾಮಿ, ಜಿಲ್ಲಾಧ್ಯಕ್ಷ ಗೋರಖನಾಥ ಕುಂಬಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ಪಾಟೀಲ, ಜಿಲ್ಲಾ ಸಂಚಾಲಕಿ ಡಾ.ಮಂಜುಳಾ ಮುಚಳಂಬೆ, ಜಿಲ್ಲಾ ಉಪಾಧ್ಯಕೆ ರೂಪಾ ಪಾಟೀಲ, ಕರ್ನಲ್ ಆರ್.ಡಿ ಸಿಂಗ್, ಸೇರಿದಂತೆ ಇತರರಿದ್ದರು.



# ಇಂದು ಶ್ರೀ ಶಂಕರಾಚಾರ್ಯ ಜಯಂತ್ಯುತ್ಸವ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಜಿಲ್ಲಾಡಳಿತ, ಜಿಲ್ಲಾ ಪಂಚಯತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ: 21–04–2026 ರಂದು ಸಾಯಂಕಾಲ 4.30 ಗಂಟೆಗೆ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಶ್ರೀ ಶಂಕರಾಚರ್ಯ ಜಯಂತ್ಯುತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬೀದರನ ವಿವೇಕಾನಂದ ಆಶ್ರಮದ ಪೂಜ್ಯಶ್ರೀ ಜ್ಯೋತಿರ್ಮಯಾನಂದ ಮಹಾರಾಜರು ವಹಿಸಲಿದ್ದಾರೆ.ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ, ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ನಾರಾಯಣರಾವ್, ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ ಜಿ.ನಮೋಶಿ, ಭೀಮರಾವ ಪಾಟೀಲ್, ಡಾ.ಎಂ.ಜಿ.ಮೂಳೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ (ಕಾಡಾ) ಭೀಮರಾಯನಗುಡಿ ಕಲಬುರಗಿಯ ಅಧ್ಯಕ್ಷ ಬಾಬು ಹೊನ್ನನಾಯ್ಕ, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅವರುಗಳು ಭಾಗವಹಿಸಲಿದ್ದಾರೆ.

# ವಾರ್ತಾ ಇಲಾಖೆಯಲ್ಲಿ ಬಸವ ಜಯಂತಿ



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಜಗಜ್ಯೋತಿ ಶ್ರೀ ಬಸವೇಶ್ವರರ 893ನೇ ಜಯಂತ್ಯುತ್ಸವವನ್ನು ಜಿಲ್ಲಾಡಳಿತ ಭವನದಲ್ಲಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಏಪ್ರಿಲ್ 20ರಂದು ಆಚರಿಸಲಾಯಿತು.

ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಅವರು ಜಗಜ್ಯೋತಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಾರ್ತಾ ಇಲಾಖೆಯ ಪ್ರಥಮ ದರ್ಜೆ ಸಹಾಯಕರಾದ ಭರತ್‌ಕುಮಾರ, ಸಿಬ್ಬಂದಿ ತಿಪ್ಪಯ್ಯ ನಾಯ್ಡು ಎನ್., ಹೊರಗುತ್ತಿಗೆ ಸಿಬ್ಬಂದಿ ಮಂಜುನಾಥ, ಅಪ್ರೆಂಟಿಶಿಪ್ ತರಬೇತುದಾರರಾದ ಕಿರಣ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು

# ಬಸವಣ್ಣನವರ 893ನೇ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

12ನೇ ಶತಮಾನದಲ್ಲಿ ಸಾಮಾನ್ಯರಾಗಿ ಹುಟ್ಟಿ, ಅಸಾಮಾನ್ಯರಾಗಿ ಬೆಳೆದು, ಕ್ರಾಂತಿ ಪುರುಷನಾಗಿ ಕಂಗೊಳಿಸಿ ಸಮಾಜದಲ್ಲಿನ ಅಂಕುಡೊಂಕುಗಳನ್ನು ಸರಿಪಡಿಸಲು ತತ್ವಜ್ಞಾನಿಯಾಗಿ ಬೆಳೆದ ಮಹಾ ಚೇತನ ಬಸವಣ್ಣನವರ 893ನೇ ಜಯಂತೋತ್ಸವ ಪಟ್ಟಣದ ಬಸವೇಶ್ವರ ವೃತ್ತ ಆವರಣದಲ್ಲಿ ಬಸವ ಸಮಿತಿ ವತಿಯಿಂದ ಬಸವೇಶ್ವರರ ವೃತ್ತಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಸವ ಜಯಂತೋತ್ಸವ ಸಮಿತಿ ಅಧ್ಯಕ್ಷ ವೀರೇಶ್ ತುಗಾಂವ, ತಹಶೀಲ್ದಾರ್ ಮಂಜುನಾಥ್ ಪಂಚಾಳ, ವಲಯ ಅರಣ್ಯಾಧಿಕಾರಿ ಶ್ರೀಕಾಂತ ರಾಠೋಡ, ಪೊಲೀಸ್ ವೃತ್ತ ನಿರೀಕ್ಷಕ ಶ್ರೀನಿವಾಸ ಅಲ್ಲಾಪುರ್, ಪುರಸಭೆ ಮುಖ್ಯಾಧಿಕಾರಿ ಸತೀಶ ಗುಡ್ಡೆ,

ವೈದ್ಯಾಧಿಕಾರಿ ಡಾ. ವಿಜಯ್ ಹಿರಸ್ಕರ್, ಆರಕ್ಷಕ ಉಪ ನಿರೀಕ್ಷಕ ಬಸಲಿಂಗಪ್ಪ ಗೋಧಿಹಾಳ, ಪ್ರಮುಖರಾದ ಅಶೋಕ ಸ್ವಾಮಿ, ಮಲ್ಲಿಕಾರ್ಜುನ ಪಾಟೀಲ್, ರಮೇಶ ಪಾರಾ, ಬಸವರಾಜ ಪಾಟೀಲ್, ಕರಬಸಪ್ಪ ಗಡಮಿ, ಕಲ್ಯಾಣರಾವ ಜಾಬಾ, ವಿಠಲರಾವ ಪಟ್ಟಣಕ್ಕರ್, ಶ್ರೀಕಾಂತ ಮಟ್ಟಿ, ಇಂದುಮತಿ ಗಾರಂಪಳ್ಳಿ, ಪ್ರಶಾಂತ ಮೈನಳ್ಳಿ, ಸಚಿನ ಮಠಪತಿ, ರಾಜದೀಪ್ ಜಾಬಾ, ನರಸಪ್ಪ ನರನಾಳ, ರಾಜಕುಮಾರ ಹಡಪದ, ಪ್ರವೀಣ ರಾಜಾಪುರ್, ಶ್ರೀಕಾಂತ ಪುಲೇ, ಅನೀಲಕುಮಾರ ಸಿಂಧೆ, ಶರಣಬಸಪ್ಪ ಕಾಳಗಿ, ದತ್ತು ಹಲಗಿ, ವೀರಪ್ಪ ಹೊಸಳ್ಳಿ, ಕಿರಣ ಹಮ್ಮಿಲಪುರಕರ್, ಪ್ರಭುಮುದನ್ನಾಳಕ್ಕರ್ ಸೇರಿದಂತೆ ಬಸವಾಭಿಮಾನಿಗಳು ಉಪಸ್ಥಿತರಿದ್ದರು.

# ದರ್ಶನ ಸಮಯ ಬದಲಾವಣೆ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬೇಸಿಗೆ ಬಿಸಿಲಿನ ತಾಪಮಾನವು ಹೆಚ್ಚಾಗುತ್ತಿರುವುದರಿಂದ, ಭಕ್ತರು ಆರೋಗ್ಯದ ಹಿತದೃಷ್ಟಿಯಿಂದ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕರಾಂಪೂರ ಗ್ರಾಮದ ಅಂಜನಾದ್ರಿ ಬೆಟ್ಟದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ದರ್ಶನ ಸಮಯ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಆದೇಶ ಹೊರಡಿಸಿದ್ದಾರೆ.

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕರಾಂಪೂರದ ಅಂಜನಾದ್ರಿ ಬೆಟ್ಟದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕೊಪ್ಪಳ ಜಿಲ್ಲೆ ಮತ್ತು ಹೊರಜಿಲ್ಲೆ, ಹೊರ ರಾಜ್ಯಗಳಿಂದ ಭಕ್ತರು ಆಗಮಿಸುತ್ತಾರೆ. ವಿಶೇಷವಾಗಿ ಪ್ರತಿ ಶನಿವಾರ ಮತ್ತು ರವಿವಾರದಂದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು, ಕಳೆದ 2 ರಿಂದ 3 ತಿಂಗಳಿನಲ್ಲಿ ಇಬ್ಬರು ಭಕ್ತರು ಜಯೇಶ ತಂದೆ ಸುರೇಶ ಯಾದವ ವಯಸ್ಸು 17 ವರ್ಷ ಸಾ: ಹುಲಗಿ ಹಾಗೂ ಅರ್ಜುನ ಭಾಯಿ ತಂದೆ ರಾಮಾಜಿಭಾಯಿ ವಯಸ್ಸು 54 ವರ್ಷ ಸಾ: ಪದನ ಜಿ: ಕುಜ್ (ಗುಜರಾತ್) ಎಂಬುವವರು ದೇವಸ್ಥಾನದ 575 ಮೆಟ್ಟಿಲುಗಳನ್ನು ಏರಿ ಮೇಲೆ ಹೋದ ನಂತರ ಉಸಿರಾಡಲು ತೊಂದರೆಯಾಗಿ ಮೃತಪಟ್ಟಿರುತ್ತಾರೆ. ಅಲ್ಲದೇ ಏಪ್ರಿಲ್ 01 ರಂದು ಮದ್ಯಾಹ್ನ 1 ಗಂ–ಟೆಯ ಸುಮಾರಿಗೆ ಆಂಜನೇಯ ದೇವಸ್ಥಾನಕ್ಕೆ ಆಗಮಿಸಿದ್ದ ಭಕ್ತನೊಬ್ಬ ಗರ್ಭಗುಡಿಯಲ್ಲಿ ಕುಳಿತು ದರ್ಶನ ಮುಗಿಸುತ್ತಿದ್ದಂತೆ ಬಿಸಿಲಿನ ತಾಪಕ್ಕೆ ಕುಸಿದು ಬಿದ್ದು ಸಾವನ್ನಪ್ಪಿದ ಘಟನೆ ಜರುಗಿದ್ದು, ಮೃತನನ್ನು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಗುಳ್ಳದಳ್ಳಿ ಗ್ರಾಮದ ನಿವಾಸಿ ಕೃಷ್ಣ ರಾಜಪ್ ಜಿ.ಎಸ್ ವಯಸ್ಸು 57 ವರ್ಷ ಎಂದು ಗುರುತಿಸಲಾಗಿದೆ.



ಬಸವಕಲ್ಯಾಣ : ಇಲ್ಲಿನ ಗವಿಮಠದಲ್ಲಿ ಶ್ರೀ ಮಹಾತ್ಮಾ ಬಸವೇಶ್ವರ ಜಯಂತಿ ಮಹೋತ್ಸವ ನಿಮಿತ್ತವಾಗಿ ಪೂಜ್ಯ ಶ್ರೀ ಷ.ಬ್ರ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಬಸವ ಜಯಂತಿ ಆಚರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶಿವಕುಮಾರ ಶೇಟಗಾರ, ಉಮಾಕಾಂತ ಪಾಟೀಲ್ ಮಂಠಾಳ, ಮಲ್ಲಿಕಾರ್ಜುನ ಲೊಡ್ಡೆ, ಉಮಾಕಾಂತ ರಗಟೆ, ರಾಜಕುಮಾರ ಮಿರಗಾಳಿ, ವಿಶ್ವನಾಥ ಸಂಗನಬಟ್ಟೆ, ಶಿವಪುತ್ರ ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಸಂಭ್ರಮದ ಬಸವೇಶ್ವರ ತೊಟ್ಟಿಲೋತ್ಸವ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ವಿಶ್ವಗುರು ಶ್ರೀ ಬಸವೇಶ್ವರ ಜಯಂತಿ ಉತ್ಸವದ ಹಿನ್ನೆಲೆಯಲ್ಲಿ ಸೋಮವಾರ ಪಟ್ಟಣದಲ್ಲಿರುವ ಬಸವಣ್ಣನವರು ಜನಿಸಿದ ಬಸವ ಜನ್ಮ ಸ್ಮಾರಕದಲ್ಲಿ ತೊಟ್ಟಿಲೋತ್ಸವ ಸಂಭ್ರಮದಿಂದ ಜರುಗಿತು. ಸಾಕಷ್ಟು ರೀತಿಯಲ್ಲಿ ಸಿಂಗಾರಗೊಂಡಿದ್ದ ಕಾರ್ಯಕ್ರಮವನ್ನು ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಈ ಚಿತ್ರಣವನ್ನು ಕಣ್ತುಂಬಿಕೊಂಡು ಪುನೀತರಾದರು. ಬಾಲ ಬಸವನನ್ನು ತೊಟ್ಟಿಲು ಹಾಕಿ ಸಂಭ್ರಮಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಿದ್ದಲಿಂಗ ಸ್ವಾಮೀಜಿ , ಕೃಷಿ ಮಾರುಕಟ್ಟೆ ಹಾಗೂ ಜವಳಿ ಸಚಿವ ಶಿವಾನಂದ ಎಸ್ ಪಾಟೀಲ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಗುರುನಾಥ್ ಸಿ ದಡ್ಡೆ, ತಾಲೂಕ ದಂಡಾಧಿಕಾರಿ ವಾಯ್. ಎಸ್ ಸೋಮನಕಟ್ಟಿ, ತಾಪಂ ಇಓ ವೆಂಕಟೇಶ ವಂದಾಲ, ಮುಖಂಡರಾದ ಈರಣ್ಣ. ಚ. ಪಟ್ಟಣಶೆಟ್ಟಿ, ರವಿಗೌಡ ಚಿಕ್ಕೊಂಡ, ವಿನೂತ ಕಲ್ಲೂರ ದೇಸಾಯಿ, ಬಸವರಾಜ ಗೊಳಸಂಗಿ, ಡಾ. ಬಸವರಾಜ ಕೋಟಿ, ರವಿ ಎಂ ರಾಠೋಡ ಸೇರಿದಂತೆ ಅನೇಕ ಮುಖಂಡರುಗಳು, ಅಧಿಕಾರಿಗಳು, ಬಸವ ಅಭಿಮಾನಿಗಳು ಭಾಗವಹಿಸಿದ್ದರು.ನಂತರ ಪಾಯಸ ಪಲಾವ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು . ಬೆಳಗ್ಗೆ ವಿರಕ್ತಮಠದಲ್ಲಿ ಷಟಸ್ಥಲ ಧ್ವಜಾರೋಹಣ ಹಾಗೂ ಬಸವೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ದೇವಸ್ಥಾನದ ಬಸವ ಜನ್ಮ ಸ್ಮಾರಕದವರೆಗೆ ಆಗಮಿಸಿತು.

# ಅದ್ದೂರಿ ಬಸವ ಜಯಂತಿ: ಎತ್ತಿನ ಬಂಡಿ ಮೇಲೆ ಬಸವಣ್ಣನವರ ಭಾವಚಿತ್ರ ಮೆರವಣಿಗೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ:

ಪಟ್ಟಣದಲ್ಲಿ ಸೋಮವಾರ ವಿಶ್ವ ಗುರು ಬಸವಣ್ಣನವರ ಜಯಂತಿಯನ್ನು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಯಿತು. ವಿಶ್ವಗುರು ಬಸವಣ್ಣನವರ ವಿಚಾರಧಾರೆಗಳನ್ನು ಸಾರುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಎತ್ತಿನ ಬಂಡಿಯ ಮೇಲೆ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ನಡೆಸಲಾಯಿತು. ಕಾರ್ಯಕ್ರಮಕ್ಕೆ ಹಿರಿಯ ಮುಖಂಡರಾದ ಪ್ರಕಾಶ ಟೋಣ್ಣೆ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಕೇವಲ ಒಂದು ಮತವಲ್ಲ, ಅದೊಂದು ಜೀವನಪದ್ಧತಿ. ಅಂದಿನ ಕಾಲದಲ್ಲಿದ್ದ ಜಾತೀಯತೆ, ಅಸ್ಪೃಶ್ಯತೆ ಮತ್ತು ಮೌಢ್ಯಗಳ ವಿರುದ್ಧ ಅವರು ಧ್ವನಿ ಎತ್ತಿದರು. ಹುಟ್ಟಿನಿಂದ ಯಾರೂ ಮೇಲಲ್ಲ, ಕೀಳಲ್ಲ; ಬದಲಾಗಿ ಪ್ರತಿಯೊಬ್ಬರೂ ಸಮಾನರು ಎಂದು ಸಾರಿದರು.

ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವ ಇಂದಿನ ಸಮಾಜಕ್ಕೆ ದಾರಿದೀಪವಾಗಿದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಹರಿಕಾರರಾದ ಅವರ ವಿಚಾರಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು," ಎಂದು ಕರೆ ನೀಡಿದರು.

ಸಂಭ್ರಮದ ಮೆರವಣಿಗೆ: ಸಿಂಗರಿಸಿದ ಎತ್ತಿನ ಬಂಡಿಯಲ್ಲಿ ಬಸವಣ್ಣನವರ ಭಾವಚಿತ್ರವನ್ನು ಇಟ್ಟು ಮೆರವಣಿಗೆ ಸಾಗುತ್ತಿದ್ದಾಗ ಭಕ್ತರು ಜಯಘೋಷಗಳನ್ನು ಹಾಕಿದರು. ಮೆರವಣಿಗೆಯುದ್ದಕ್ಕೂ ಕೇಸರಿ ಶಾಲು ಧರಿಸಿದ ನೂರಾರು ಯುವಕರು ಮತ್ತು ಹಿರಿಯ ಮುಖಂಡರು ಭಾಗವಹಿಸಿ ಹಬ್ಬದ ವಾತಾವರಣ ನಿರ್ಮಿಸಿದ್ದರು. ಸಾಂಪ್ರದಾಯಿಕ ವಾದ್ಯಗೋಷ್ಠಿಗಳು ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿದವು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗ್ರಾಮದ ಪ್ರಮುಖರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



# ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ



• ಮಲ್ಲಮ್ಮ ನುಡಿವಾರ್ತೆ, ಪಿರಿಯಾಪಟ್ಟಣ

ನೂತನವಾಗಿ 6 ಕೋಟಿ ರೂ ವೆಚ್ಚದ ಕುವೆಂಪು ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಸಾಂಪ್ರದಾಯಿಕವಾಗಿ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ್ ಭೂಮಿ ಪೂಜೆ ನೆರವೇರಿಸಿದರು.

ಪಟ್ಟಣದ ಹೊರವಲಯದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಶಂಕು ಸ್ಥಾಪನೆ ಆಗುತ್ತಿರುವ ಮುನ್ನಾ ದಿನವಾದ ಸೋಮವಾರ ಬಸವ ಜಯಂತಿ ಅಂಗವಾಗಿ ತಮ್ಮ ಪುತ್ರ ಹಾಗೂ ಸಂಘದ ಪದಾಧಿಕಾರಿಗಳ ಈ ಪೂಜ್ಯ ಕಾರ್ಯ ನಡೆಸಲಾಯಿತು.

ಮಂಗಳವಾರದ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಹೆಚ್ಚು ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಹಾಗೂ ಶಂಕು ಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಂತೆ ಕ್ಷೇತ್ರದ ಜನತೆಗೆ ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸರ್ಕಾರದ ಐದು ಗ್ಯಾರಂಟಿಗಳ ಅನುಷ್ಠಾನ ಸಮಿತಿ ತಾ ಅಧ್ಯಕ್ಷ ಕೆ ವಿ ನಿತಿನ್ ವೆಂಕಟೇಶ್. ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಬಿಜೆ ಬಸವರಾಜ್. ಕಾನೂರು ಗೋವಿಂದೇಗೌಡ. ಶ್ರೀನಿವಾಸ್. ಕುಂಚಪ್ಪ ಕಾರ್ನಾಡ್. ಸೇರಿದಂತೆ ಹಲವಾರು ಪಾಲ್ಗೊಂಡಿದ್ದರು.


# ಎನ್.ಡಿ.ಎ. ಮಸಲತ್ತಿಗೆ ಇಂಡಿಯಾ ಉತ್ತರ ಕೊಡುತ್ತದೆ: ಜ್ಯೋತಿ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ



ಮಹಿಳೆ ಹೆಸರಲ್ಲಿ ಡಿಲಿಮಿಟೇಶನ್ ಜಾರಿ ಮಾಡಲು ಹೋಗಿ ಜಾರಿ ಬಿದ್ದ ಬಿಜೆಪಿ ಮತ್ತು ಎನ್.ಡಿ.ಎ ಕೂಟ ಮಹಿಳೆಯರನ್ನು ಎತ್ತಿಕಟ್ಟಲು ಕಥೆ ಹೆಣೆಯಲು ಹೊರಟಿದೆ ಎಂದು ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಎಂ. ಗೊಂಡಬಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅವರು ಈ ಕುರಿತು ಹೇಳಿಕೆ ನೀಡಿದ್ದು, ಎನ್.ಡಿ.ಎ ಜೊತೆಗೆ ಸೇರಿರುವ ಜೆಡಿಎಸ್ ಸೇರಿದಂತೆ ಎಲ್ಲಾ ಎನ್.ಡಿ.ಎ. ಕೂಟದ ಪಕ್ಷಗಳಿಗೆ ಕೇವಲ ಮುಂದಿನ ಚುನಾವಣೆ ಚಿಂತೆಯಾಗಿದ್ದು, ಸೋಲುವ ಭೀತಿಯಲ್ಲಿ ಮಹಿಳೆಯರ ಹೆಸರಲ್ಲಿ ರಾಜಕೀಯ ತಂತ್ರಗಾರಿಕೆ ಹೆಣದಿತ್ತು, ಇಂಡಿಯಾ ಒಂದಾಗಿ ಅದನ್ನು ವಿಫಲಗೊಳಿಸಿದೆ. ಮಹಿಳಾ ಮೀಸಲಾತಿ ತಿದ್ದುಪಡಿ ವಿರುದ್ಧ ಪ್ರತಿಭಟಿಸಿದ್ದ ಡಿಎಂಕೆ ಪಕ್ಷಕ್ಕೆ ಮತ್ತು ತಮಿಳಿಗರಿಗೆ 'ಕಾಲಾ ಟಿಕಾ' ಎಂದು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ ಅವರ ಮನಸ್ಥಿತಿ ಹೇಗಿದೆ ಎಂಬುದಕ್ಕೆ ಸಣ್ಣ ಸಾಕ್ಷಿ.



ಬಸವಕಲ್ಯಾಣ: ಇಲ್ಲಿನ ಶ್ರೀ ಮಹಾತ್ಮಾ ಬಸವೇಶ್ವರ 76 ನೇಯ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಸೋಮವಾರ ಶ್ರೀ ಬಸವೇಶ್ವರ ದೇವಸ್ಥಾನ ಬಿಡಿಪಿಸಿ ನಿರ್ದೇಶಕಿ ಪುಷ್ಪಾವತಿ ಮಾಮಾ . ಶಾಮ ರಗಟೆ. ರಂಜನಾ ದುರ್ಗೆ. ಜೈ ಶ್ರೀ ಖೂಬಾ ಅಲ್ಲದೆ ವೈರಾಗ್ಯನಿಧಿ ಅಕ್ಕಮಹಾದೇವಿಯ ಮಂಟಪ ಹೊಸಪೇಟೆ ಓಣೆಯ ಅಧ್ಯಕ್ಷರು ಹಾಗೂ ಸದಸ್ಯರು. ಅನೇಕ ಮಹಿಳೆಯರ ಸಮ್ಮುಖದಲ್ಲಿ ಅದ್ದೂರಿಯಾಗಿ ತೊಟ್ಟಿಲು ಕಾರ್ಯಕ್ರಮ ಜರುಗಿತು. ಮೊದಲು ವಚನ ಗಾಯನ ಬೀದರ ಆಕಾಶವಾಣಿ ಕಲಾವಿದರಾದ ಶಿವಕುಮಾರ ಪಾಂಚಳ ಹಾಗೂ ಸಂಗಡಿಗರಿಂದ ವಚನ ನೃತ್ಯ ಬೀದರ ನಾಟ್ಯ ಶ್ರೀ ನೃತ್ಯಲಾಯ ರಾಣಿ ಸತ್ಯ ಮೂರ್ತಿ ಅವರಿಂದ ವಚನ ನೃತ್ಯ ಸಾಗಿ ಬಂದವು. ಜೋತಿ ತೂಗಾವೆ ಸಂಚಾಲನೆ. ಬಸವರಾಜ ಖಂಡಾಳೆ. ಸ್ವಾಗತ.(ಮಲ್ಲಮ್ಮ ನುಡಿ ಚಿತ್ರ).

# ಕುರ್ಚಿ ಇಲ್ಲದೇ ನೆಲದ ಮೇಲೆ ಕುಳಿತ ಹಿರಿಯರು



• ಮಲ್ಲಮ್ಮ ನುಡಿ ವಾರ್ತೆ , ಬಸವನಬಾಗೇವಾಡಿ

ವಿಶ್ವಗುರು ಶ್ರೀ ಬಸವೇಶ್ವರ ಜಯಂತಿ ಉತ್ಸವದ ಹಿನ್ನೆಲೆಯಲ್ಲಿ ಸೋಮವಾರ ಪಟ್ಟಣದಲ್ಲಿರುವ ಬಸವಣ್ಣನವರು ಜನಿಸಿದ ಬಸವಜನ್ಮ ಸ್ಮಾರಕದಲ್ಲಿ ತೊಟ್ಟಿಲೋತ್ಸವ ಸಂಭ್ರಮದಿಂದ ಜರುಗಿತು. ಇಲ್ಲಿಗೆ ಅಪಾರ ಸಂಖ್ಯೆಯಲ್ಲಿ ಬಸವ ಅಭಿಮಾನಿಗಳು ಆಗಮಿಸಿದ್ದರು. ಕುರ್ಚಿ ವ್ಯವಸ್ಥೆ ಇಲ್ಲದೇ ಅಲ್ಲಲ್ಲಿ ನೆರಳು ಇದ್ದಲ್ಲಿ ಬೆಂಚುಗಳ ಮೇಲೆ ಕುಳಿತರೆ, ಅನೇಕರು ಧ್ವಜದ ಕಟ್ಟೆಯ ಹಾಗೂ ನೆಲದ ಮೇಲೆ ಕುಳಿತುಕೊಂಡು ವಿಶ್ರಾಂತಿಗೈದರು ಹಾಗೂ ಪ್ರಸಾದ ಸವಿದರು. ಪ್ರತಿ ವರ್ಷ ಪ್ರಾಧಿಕಾರವು ತೊಟ್ಟಿಲೋತ್ಸವ ಕಾರ್ಯಕ್ರಮದ ಮುನ್ನ ಭಕ್ತರಿಗೆ ಕೂಡ್ರಲು ಒಂದಿಷ್ಟು ಕುರ್ಚಿ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಈ ವ್ಯವಸ್ಥೆ ಈ ಬಾರಿ ಯಾಕೆ ಆಗಿಲ್ಲ ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಕೂಡಲು ತುಂಬಾ ಸಮಸ್ಯೆ ಆಗುತ್ತದೆ ಎಂದು ಪತ್ರಿಕೆಗೆ ಓರ್ವ ಹಿರಿಯ ನಾಗರಿಕರು ತಿಳಿಸಿದರು.

# ಉಪತಹಶಿಲ್ದಾರರಿಂದ ಬಸವೇಶ್ವರರ ಭಾವ ಚಿತ್ರಕ್ಕೆ ಮಾಲಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ , ಮುದಗಲ್

ಇಲ್ಲಿನ ನಾಡ ಕಾರ್ಯಾಲಯದಲ್ಲಿ ಜಗಜ್ಯೋತಿ ಬಸವೇಶ್ವರ ಭಾವ ಚಿತ್ರಕ್ಕೆ ಉಪತಹಶಿಲ್ದಾರ ತುಳಜಾರಾಮಸಿಂಗ ಪೂಜೆ ಸಲ್ಲಿಸಿ, ಮಾಲಾರ್ಪಣೆ ಸೋಮವಾರ ಮಾಡಿದರು.

ಜಗಜ್ಯೋತಿ ಬಸವೇಶ್ವರರ 12ನೇ ಶತಮಾನದ ಮಹನ್ ಸಮಾಜ ಸುಧಾರಕ, ವಚನಕಾರ ಹಾಗೂ ಮಾನವತಾವಾದಿ ಬಸವಣ್ಣನವರ ಜನ್ಮದಿನದಂದು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು ಸಮಾನತೆ, ಕಾಯಕತ್ವ ಮತ್ತು ವಚನ, ಭ್ರಾತೃತ್ವದ ಸಂದೇಶ ಸಾರಿದ ಬಸವಣ್ಣನವರ ಆದರ್ಶಗಳು ಎಂದೆಂದಿಗೂ ನಮಗೆ ಪ್ರೇರಣೆ ಎಂದು ಬಸವ ಜಯಂತಿ ಶುಭಾಶಯಗಳು ತಿಳಿಸಿದರು.

ಈ ವೇಳೆ ದ.ಸಂ.ಸ ತಾಲೂಕ ಸಂಚಾಲಕ ಶರಣಪ್ಪ ಕಟ್ಟಿಮನಿ, ಮುನಿರ ಪಾಷ, ಸುರೇಶ ಕೆ.ವಿ, ಶಿವುಕುಮಾರ, ವೆಂಕಣ್ಣ ದೇಶಪಾಂಡೆ ಸೇರಿದಂತೆ ಇತರರಿದ್ದರು.

# ಬಸವ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಬಸವ ಜಯಂತಿ ನಿಮಿತ್ತ ತಾಲುಕಿನ ಹಸ್ಮಕಲ್ ಗ್ರಾಮದಲ್ಲಿ ಶ್ರೀ ಬಹುರೂಪಿ ಚೌಡಯ್ಯ ಹಗಲುವೇಷ ಕಲಾವಿದರ ಟ್ರಸ್ಟ್ ಹಸ್ಮಕಲ್ ಇವರ ಸಂಯುಕ್ತ ಆಶ್ರಯದಲ್ಲಿ ಬಸವ ಜಯಂತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಕಾರ್ಯಕ್ರಜರಗಿತು. ಈ ವೇಳೆ,ಮಾರಲದಿನ್ನಿ ಶ್ರೀ ಗಳಾದ

ಅಮರೇಶ್ವರ ಶರಣರು ಮಾತನಾಡಿ, ಜಗಜ್ಯೋತಿ ಬಸವೇಶ್ವರರ ತತ್ವ, ಆದರ್ಶಗಳನ್ನು ಸಮಾಜದಲ್ಲಿ ಎಲ್ಲರೂ ಅಳವಡಿಸಿಕೊಂಡಲ್ಲಿ ಮಾತ್ರ ಬಸವ ಜಯಂತಿ ಅರ್ಥಪೂರ್ಣವೆನಿಸುತ್ತದೆ ಎಂದುರು.

ಈ ವೇಳೆ, ಶ್ರೀ ಅಮರೇಶ್ವರ ಶರಣರು ಮಾರಲದಿನ್ನಿ, ತಮ್ಮಣ್ಣ ಶರಣರು ಮಾರಲದಿನ್ನಿ , ಶ್ರೀ ವರ ಸ್ವಾಮಿ ಶರಣರು ಮಾರಲದಿನ್ನಿ ಶ್ರೀರಂಗಪ್ಪ ಮಾಸ್ತರ್ ತಡಕಲ್ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರು ರಾಯಚೂರು

ಜಂಬಣ್ಣ ಹಸಮಕಲ್ ಕಾರ್ಯದರ್ಶಿಗಳು ಅಮರೇಶ ಹಸಮಕಲ್ ಹಾಗೂ ನಿರುಪಾದಪ್ಪ ನಂಜಲದಿನ್ನಿ ಸೇರಿದಂತೆ ಅನೇಕ ಕಲಾವಿದರ ಇದ್ದರು

# ನಗರದಲ್ಲಿ ಬಸವೇಶ್ವರ ಪುತ್ಥಳಿ: ಪ್ರಶಾಂತ್



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ಬಸವೇಶ್ವರ (ಹಳೇ ಕೆಇಬಿ) ಸರ್ಕಲ್ ನಲ್ಲಿ ಅಶ್ವಾರೂಡ ಬಸವೇಶ್ವರನ ಕಂಚಿನ ಪುತ್ಥಳಿಯನ್ನು ತಮ್ಮ ಕುಟುಂಬದ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಸಮಾಜದ ಸಹಕಾರದಿಂದ ಮುಂದಿನ ವರ್ಷದ ಬಸವ ಜಯಂತಿಯೊಳಗೆ ಪ್ರತಿಷ್ಠಾಪನೆ ಮಾಡಲಿದೆಂದು ನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ವೀರಶೈವ ಲಿಂಗಾಯತ ಸಮಾಜದ ಮುಖಂಡ ಅಲ್ಕಂ ಪ್ರಶಾಂತ್ ಅವರು ಹೇಳಿದ್ದಾರೆ.

ಬಸವ ಜಯಂತಿ ಆಚರಣೆ ಸಂಬಂಧ ನಗರದ ಶರಣ ಕರಡೀಶ್ ನಿಲಯದಲ್ಲಿ ಕರೆದಿದ್ದ ಸಮಾಜದ ಸಭೆಯಲ್ಲಿ ಈ ವಿಷಯ ತಿಳಿಸಿದ ಅವರು. ಬಸವೇಶ್ವರ ಸರ್ಕಲ್ ಗೆ ಹೊಂದಿಕೊಂಡಂತೆ ಒಂದು ಭಾಗದಲ್ಲಿ ನಮ್ಮ ಗಡಗಿ ಮನೆತನದ ನಿವೇಶನ ಇದೆ. ಇಲ್ಲಿ ಈಗಾಗಲೇ ಬಸವೇಶ್ವರ ವೃತ್ತ ಎಂದು ನಾಮಕರಣ ಮಾಡಿದ ಫಲಕ ಅಳವಡಿಸಿದೆ ಕಳೆದ ಬಸವ ಜಯಂತಿ ಸಂದರ್ಭದಲ್ಲಿ. ಇಲ್ಲಿ ವೀರಶೈವ ಲಿಂಗಾಯತ ಸಮಾಜವೂ ಬಸವೇಶ್ವರ ಪುತ್ಥಳಿ ಸ್ಥಾಪನೆ ಮಾಡಲು ಬಯಸಿತ್ತು. ಆದರೆ ಈ ಕಾರ್ಯ ಈವರೆಗೆ ಆಗದ ಕಾರಣ, ನಮ್ಮ ಕುಟುಂಬದಿಂದ ಈ ಪುತ್ಥಳಿ ಸ್ಥಾಪನೆಗೆ ಸಂಕಲ್ಪ ಮಾಡಿದೆ. ಒಬ್ಬರೇ ಮಾಡುವುದಕ್ಕಿಂತ ಸಮಾಜದಿಂದ ಮಾಡುವುದು ಶ್ರೇಯಸ್ಸು ಎಂದು ನಾನು ಭಾವಿಸಿರುವೆ. ಸಮಾಜದವರು ಆರ್ಥಿಕವಾಗಿ ಸಹಕಾರ ನೀಡಲಿ. ನೀಡದೇ ಇದ್ದರೂ ಸಹ ತಾವು ಬಸವೇಶ್ವರ ಪುತ್ಥಳಿ ಪ್ರತಿಷ್ಠಾಪನೆ ಮಾಡಲು ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಭೆ ಸೇರಿದ್ದ ಸಮಾಜದ ಮುಖಂಡರು ಸಮ್ಮತಿ ನೀಡಿದರು. ಅಲ್ಲದೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಂಗಾವತಿ ವೀರೇಶ್ ಅವರು ಮಹಾಸಭಾದಿಂದ ಐದು ಲಕ್ಷ ರೂಗಳನ್ನು ನೀಡಲಿದೆಂದು ಘೋಷಣೆ ಮಾಡಿದರು.ಸಮಾಜದ ಮುಖಂಡರುಗಳಾದ ಸಿರಿಗೇರಿ ಪನ್ನರಾಜ್, ಸಂಗನಕಲ್ಲು ಹಿಮಂತರಾಜ್, ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಬಿಚ್ಚುಗಲ್ಲು ಪಂಚಾಕ್ಷರಪ್ಪ. ಕ-ರೇಗೌಡ, ಕೋರಿ ವಿರುಪಾಕ್ಷಿ, ವೀರಶೈವ ತರುಣ ಸಂಘದ ಅಧ್ಯಕ್ಷ ನಂದೀಶ್ ಮಠಂ, ಮಹಾಲಿಂಗಯ್ಯ(ರಾಜಣ್ಣ) ಹೆಚ್.ತಿಮ್ಮನಗೌಡ, ಮೀನಳ್ಳಿ ಚಂದ್ರಶೇಖರ, ಡಾ.ರೇಣುಕಾ ಮಂಜುನಾಥ, ಅಪ್ಪಯ್ಯ, ಎಂ.ಚಂದ್ರಮೌಳಿ, ಗಾಳಿ ರಾಜಶೇಖರ, ಕೇಣಿ ಬಸವರಾಜ್ , ಎಸ್.ಮಲ್ಲನಗೌಡ, ಗೌರಿಶಂಕರ ಸ್ವಾಮಿ, ಜಾಲಿಹಾಳ್ ಶ್ರೀಧರ್, ಡಿ.ಅರುಣ್ ಕುಮಾರ್, ಸಿದ್ಮಲ್ ಮಂಜುನಾಥ ಮೊದಲಾದವರು ಇದ್ದರು.

# ವರ್ತಮಾನವನ್ನು ನಿರ್ವಹಣೆ ಮಾಡುವುದೇ ಭವಿಷ್ಯ: ಬಸವಲಿಂಗ ಸ್ವಾಮಿ




• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ವರ್ತಮಾನವನ್ನು ಸರಿಯಾಗಿ ನಿರ್ವಹಣೆ ಮಾಡುವುದೇ ಉತ್ತಮವಾದ ಭವಿಷ್ಯ ನಿರ್ಮಾಣಕ್ಕೆ ಅನುಕೂಲವಾಗಲಿದೆಂದು ಕೊಟ್ಟೂರು ಸಂಸ್ಥಾನ ಮಠದ ಬಸವಲಿಂಗ ಸ್ವಾಮಿಗಳು ಹೇಳಿದ್ದಾರೆ.

ನಗರದಲ್ಲಿನ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠದಲ್ಲಿ ಅಕ್ಕನ ಬಳಗದ ಸಹಯೋಗದಲ್ಲಿ ನಿನ್ನೆ ನಡೆದ ಶಿವಾನುಭವ ಸಂಪದದಲ್ಲಿ ಆಶೀರ್ವಾದ ಮಾಡಿದ ಶ್ರೀಗಳು, ವರ್ತಮಾನವನ್ನು ಆಧರಿಸಿ ಭವಿಷ್ಯ ನಿರ್ಮಾಣ ಆಗಲಿದೆ. ಅಂದರೆ, ವರ್ತಮಾನದಲ್ಲಿ ಸತ್ಯ, ಧರ್ಮ, ಅಹಿಂಸೆ, ನೀತಿ ಮತ್ತು ಆಚಾರ – ವಿಚಾರಗಳನ್ನು ಪಾಲಿಸಿದಲ್ಲಿ ಉತ್ತಮವಾದ ಭವಿಷ್ಯ ಸಹಜವಾಗಿಯೇ ರೂಪುಗೊಳ್ಳಲಿದೆ ಎಂದರು.

ಗುತ್ತಿಗೆದಾರ ಎಂ.ಚಂದ್ರಶೇಖರಗೌಡ ಮಾತನಾಡಿ 'ಧರ್ಮೋ ರಕ್ಷತಿ ರಕ್ಷಿತಃ' ವಿಷಯದ ಉಪನ್ಯಾಸ ನೀಡಿ, ದೇಶ – ಕಾಲವನ್ನು ಮೀರಿದ್ದು ಧರ್ಮ. ಧಾರಣ ಮತ್ತು ಪೋಷಣದ ಆಚರಣೆ-ಯೇ ಧರ್ಮ. ಧರ್ಮವನ್ನು ಬಿತ್ತಿದಾಗಲೇ ಧರ್ಮದ ಫಲ ಸಿಗುತ್ತದೆ. ಧರ್ಮ ಪದಕ್ಕೆ ವಿಶಾಲಾರ್ಥವಿದೆ. ಧರ್ಮದ ವ್ಯಾಪ್ತಿಯು ಅಗಣಿತವಾಗಿದೆ. ಇಹ – ಪರದ ಚಿಂತನೆಗಳ ತಿರುಳು ಧರ್ಮವಾಗಿದೆ ಎಂದರು.

ಭಾರತೀಯ ರೆಡ್ಕ್ರಾಸ್ನ ಬಳ್ಳಾರಿ ಜಿಲ್ಲಾ ಘಟಕದ ಕಾರ್ಯದರ್ಶಿ ಎಂ.ಎ. ಷಕೀಬ್ ಮಾತನಾಡಿ, ನಿಸ್ವಾರ್ಥ ಸೇವೆಯು ಆತ್ಮತೃಪ್ತಿಯನ್ನು ನೀಡುತ್ತದೆ. ಸಂಕಷ್ಟದಲ್ಲಿರುವವರಿಗೆ ನೆರವಾಗುವುದೂ ಧರ್ಮದ ಪಾಲನೆ ಮಾಡಿದಂತೆ. ಭಾರತೀಯ ರೆಡ್ಕ್ರಾಸ್ ಸಂಸ್ಥೆಯು ಪ್ರಾಥಮಿಕ ಚಿಕಿತ್ಸೆ ಮತ್ತು ಸಿಪಿಆರ್ ತರಬೇತಿಗಳನ್ನು ವಿದ್ಯಾರ್ಥಿಗಳಿಗೆ – ಆಸಕ್ತಿಗೆ ಉಚಿತವಾಗಿ ನೀಡುತ್ತಿದೆ. ಎಲ್ಲರೂ ಸದುಪಯೋಗ ಪಡೆ'ದುಕೊಳ್ಳಬೇಕೆಂದರು. ವೀರಶೈವ ವಿದ್ಯಾವರ್ಧಕ ಸಂಘದ ಹಾನಗಲ್ಲು ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ನ ಉಪನ್ಯಾಸಕರಾದ ಟಿ.ಹೇಮಂತ್ ಕುಮಾರ್ ಅವರು, ಆಧ್ಯಾತ್ಮವಿಲ್ಲದ ವಿದ್ಯೆ, ರಾಮನಿಲ್ಲದ ಅಯೋಧ್ಯೆ ಇದ್ದಂತೆ. ಕಾರಣ ಪ್ರತಿಯೊಬ್ಬರೂ ವಿದ್ಯೆಯ ಜೊತೆಯಲ್ಲಿ ಆಧ್ಯಾತ್ಮ, ಮಾನವೀಯತೆ, ಧರ್ಮಪಾಲನೆಗೆ ಹೆಚ್ಚಿನ ಗಮನ ನೀಡಬೇಕೆಂದರು.

ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರಜ್ಞಾ ಕೆ.ವಿ. ಅವರು, ಮಹಿಳಾ ಆತ್ಮಾಭಿಮಾನದ ಸಂಕೇತವೇ ಅಕ್ಕಮಹಾದೇವಿ. ಮಹಿಳಾ ಸ್ವಾತಂತ್ರ್ಯ, ಭಕ್ತಿ, ಶ್ರದ್ಧೆ, ಅಂತಃಕರಣಗಳನ್ನು ಅಳವಡಿಸಿಕೊಂಡು ಸಾಧನಾ ಮಾರ್ಗದತ್ತ ಹೆಜ್ಜೆ ಹಾಕಿ ಅನೇಕರಿಗೆ ಆದರ್ಶವಾಗಿದ್ದಾರೆಂದರು.

ಅಕ್ಕನ ಬಳಗದ ಸುರೇಖಾ ಮಲ್ಲನಗೌಡ ಮತ್ತು ಕೆ. ಪಾರ್ವತಿ ಅವರು ಪ್ರಾರ್ಥನೆ ಸಲ್ಲಿಸಿದರು. ಅಕ್ಕನ ಬಳಗದ ಎಚ್.ಎಂ. ಶಕುಂತಲ ಅವರು ಕಾರ್ಯಕ್ರಮ ನಿರೂಪಿಸಿದರು. ಕುಮಾರಿ ಕೆ. ಮನಸ್ವಿ ಅವರು ವಂದನಾರ್ಪಣೆ ಸಲ್ಲಿಸಿದರು.

# ಬಸವ ಜಯಂತಿ ಅಂಗವಾಗಿ ಜಿಲ್ಲಾಡಳಿತದಿಂದ ಪುಷ್ಪನಮನ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಮಹಾಮಾನವತವಾದಿ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜನ್ಮದಿನೋತ್ಸವದ ಅಂಗವಾಗಿ ಸೋಮವಾರ ನಗರದ ಹೆಚ್.ಆರ್. ಗವಿಯಪ್ಪ ವೃತ್ತದ ಬಳಿಯಿರುವ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಜಿಲ್ಲಾಡಳಿತದಿಂದ ಗೌರವ ನಮನ ಸಮರ್ಪಿಸಿ, ಶ್ರದ್ಧಾಭಕ್ತಿಯಿಂದ ಪುಷ್ಪನಮನ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು, 12ನೇ ಶತಮಾನದಲ್ಲೇ ಸಮಾನತೆ, ಏಕತೆ ಮತ್ತು 'ಕಾಯಕವೇ ಕೈಲಾಸ' ಎಂಬ ಉದಾತ್ತ ತತ್ವಗಳನ್ನು ಸಾರಿದ ಮಹಾನ್ ಚೇತನರು. ಬಸವಣ್ಣನವರ ಹಾದಿಯಲ್ಲಿ ಇಂದು ನಾವೆಲ್ಲರೂ ಸಾಗಬೇಕಿದೆ ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಮಾತನಾಡಿ, ವಿಶ್ವಗುರು, ಶ್ರೇಷ್ಠ ವಚನಕಾರ ಹಾಗೂ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲ್ಪಟ್ಟಿರುವ ಬಸವಣ್ಣನವರ ಜನ್ಮದಿನೋತ್ಸವವನ್ನು ನಾಡಿನಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ, ಎಲ್ಲರನ್ನು ಒಂದೇ ಎಂಬ ಏಕತಾ ಭಾವಕ್ಕೆ ತಂದ ಪುಣ್ಯಾತ್ಮರು ಎಂದು ಹೇಳುತ್ತಾ, ಜಿಲ್ಲೆಯ ಜನತೆಗೆ ಬಸವ ಜಯಂತಿ ಶುಭಾಶಯಗಳನ್ನು ತಿಳಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಸೇರಿದಂತೆ ಅಧಿಕಾರಿಗಳು, ಮಹಾನಗರ ಪಾಲಿಕೆ ಸದಸ್ಯರು, ವಿವಿಧ ಗಣ್ಯರು ಮತ್ತು ಸಾರ್ವಜನಿಕರು ಇದ್ದರು.

# ಬಸವಣ್ಣ ದೇವಸ್ಥಾನದ ಜಾತ್ರೆ ಸಂಪನ್ನ



• ಮಲ್ಲಮ್ಮ ನುಡಿ ವಾರ್ತೆ , ಮುದಗಲ್

ಪಟ್ಟಣದ ಕುಂಬಾರ ಪೇಟೆ ಬಸವಣ್ಣ ದೇವಸ್ಥಾನದ ಜಾತ್ರಾ ಮಹೋತ್ಸವವು ಸೋಮವಾರ ಅದ್ಧೂರಿಯಾಗಿ ಸಂಪನ್ನಗೊಂಡಿತು.

ಬೆಳಿಗ್ಗೆ ಬಸವಣ್ಣ ದೇವಸ್ಥಾನದಲ್ಲಿ ಬಸವಣ್ಣ ಶೀಲಾಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಾಲಾರ್ಪಣೆ ಹಾಗೂ ನಾಮಾವಳಿ ಬಳಿಕ ಮಹಾಮಂಗಳಾರತಿ ನಡೆಯಿತು. ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. 11ದಿನಗಳ ಕಾಲ ನಂದವಾಡಗಿ ಅಭಿನವ ಚನ್ನಬಸವ ಶಿವಾಚಾರ್ಯ ಶಿವಯೋಗಿಗಳ ಅಮೃತ ವಾಣಿಯಲ್ಲಿ ಶ್ರೀ ಗುರುಗುಂಟಾ ಅಮರೇಶ್ವರ ಚರಿತ್ರೆ ಪುರಾಣ ಪಠಾಣ, ಮಹಾಮಂಗಳ ಮಾಡಿದರು. ಜಾತ್ರಾ ಮಹೋತ್ಸವ ನಿಮಿತ್ಯ ವಿವಿಧ ಧಾರ್ಮಿಕ ವೇಷ, ವೀರಗಾಸೆ ಭೂಷಣಗಳು, ಸೇರಿದಂತೆ ಸಕಲ ವಾದ್ಯ ಮೇಳದೊಂದಿಗೆ ಕುಂಭ ಹೊತ್ತ ಮಹಿಳೆಯರಿಂದ ಪಟ್ಟಣದ ಬಿದಿಗಳಲ್ಲಿ ಸಂಚರಿಸಲಾಯಿತು ಹಾಗೂ ಟ್ರ್ಯಾಕ್ಟರ್ ವಾಹನದಲ್ಲಿ ಜಗ ಜ್ಯೋತಿ ಬಸವೇಶ್ವರ ಭಾವಚಿತ್ರ ಮೆರವಣಿಗೆ ನಡೆಯಿತು. ನಂತರ ಭಕ್ತರಿಗಾಗಿ ಅನ್ನ ಸಂತರ್ಪಣೆ ನಡೆಸಲಾಯಿತು. ಸಾಯಂಕಾಲ ವಿವಿಧ ಹೂಗಳು ಮತ್ತು ಹಸಿರು ತೋರಣಗಳಿಂದ ಅಲಂಕರಿಸಿದ ಭವ್ಯ ರಥಕ್ಕೆ ಶ್ರೀಗಳು, ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಿದರು. ಬಸವೇಶ್ವರರ ಜಯಘೋಷ ಕೂಗುತ್ತ ಭಕ್ತರು ಹಗ್ಗ ಹಿಡಿದು ರಥವನ್ನು ಎಳೆಯುತ್ತಿದ್ದಂತೆ ನೆರೆದ ಭಕ್ತಸಾಗರ ಹೂಹಣ್ಣು-ಉತ್ತತ್ತಿಯನ್ನು ರಥಕ್ಕೆ ಎಸೆದು ಭಕ್ತಿ ಮೆರೆದರು. ಚಲಿಸಿದ ರಥ ಮೇಸ್ತ್ರಿ ಪೇಟೆ ಕರಿ ಬಸವಣ್ಣ ಹಾಗೂ ಈಶ್ವರ ದೇವಸ್ಥಾನ ಪಾದಗಟ್ಟೆಗೆ ಸಾಗಿ ಎದುರು ಬಸವಣ್ಣನಿಗೆ ಪೂಜೆ ಸಲ್ಲಿಸಿದ ನಂತರ ಮರಳಿ ರಥವನ್ನು ಯಥಾಸ್ಥಾನಕ್ಕೆ ತಂದು ಮುಕ್ತಾಯಗೊಳಿಸಲಾಯಿತು.

ಬಸವೇಶ್ವರ ದೇವಸ್ಥಾನದ ಕಮಿಟಿ ಅಧ್ಯಕ್ಷ ಮಲ್ಲಪ್ಪ ಮಾಟುರ, ಶಿವಾನಂದ ಸುಂಕದ, ರಾಘವೇಂದ್ರ ಜಿ. ಶಿವರಾಜ, ಸುರೇಶ, ಅಮರೇಶಪ್ಪ ತಲೆಖಾನ್, ವೀರೇಶ ಖಣೆದ, ಮಹಾಂತೇಶ ಗದ್ದಿ, ಅಮರಪ್ಪ ಕುಂಬಾರ, ವೀರಯ್ಯಸ್ವಾಮಿ ಹಳೆಪೇಟೆ, ಚನ್ನಬಸವ ಚಕ್ರಸಾಲಿ, ಶರಣಬಸವ, ಡಾ. ರಾಘವಾಂಕ ಶರ್ಮಾ ದೇವಸ್ಥಾನದ ಕಮಿಟಿ ಸದಸ್ಯರು ಸೇರಿದಂತೆ ಜಾತ್ರೆಗೆ ಸುತ್ತಲಿನ ಹಲವು ಗ್ರಾಮಗಳ ಭಕ್ತರು ಭಾಗವಹಿಸಿ ಹರಕೆ ತೀರಿಸಿದರು.

# ಕಾಂಗ್ರೆಸ್ ಕಚೇರಿಯಲ್ಲಿ ವಿಶ್ವಗುರು ಅಣ್ಣ ಬಸವಣ್ಣನವರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ವಿಶ್ವಗುರು, ಜಗಜ್ಯೋತಿ, ಸಾಂಸ್ಕೃತಿಕ ನಾಯಕ ಅಣ್ಣ ಬಸವಣ್ಣನವರ ಜಯಂತಿಯನ್ನು, ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಅಲ್ಲಂ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ವೇಳೆ ಅಧ್ಯಕ್ಷರು ಮತ್ತು ಮುಖಂಡರುಗಳು ಸೇರಿ ವಿಶ್ವಗುರು ಅಣ್ಣ ಬಸವಣ್ಣನವರು ಸರ್ವಾಧಿಕಾರ ಮತ್ತು ರಾಜವತ್ವಕ್ಕಂತ ಇರುವ ಸಂಧರ್ಭದಲ್ಲಿಯೇ ಪ್ರಜಾಪ್ರಭುತ್ವ ಮೂಲ ತತ್ವವನ್ನು ಈಡೀ ಪ್ರಪಂಚಕ್ಕೆ ಭೋದಿಸಿದ ಮಹಾನು ಪ್ರಜಾಪ್ರಭುತ್ವವಾದಿ ಅಣ್ಣ ಬಸವಣ್ಣನವರು ಮತ್ತು ಅವರ ಭೋದನೆಗಳನ್ನು ಅನುಸರಿಸಿದರೆ, ನಮ್ಮ ಸಮಾಜವು ಉತ್ತಮ, ಧರ್ಮನಿರಪೇಕ್ಷ, ಸುರಕ್ಷಿತವಾಗಿದ್ದು ಮೋಕ್ಷವನ್ನು ಪಡೆಯಲು ಸಾಧ್ಯ ಎಂದು ಮಾತನಾಡಿದರು.

ಈ ಸಂಧರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ನ ಹಿರಿಯ ನಾಯಕರಾದ ಶ್ರೀ ಕಲ್ಲುಕಂಭ ಪಂಪಾಪತಿ, ಎಲ್. ಮಾರೆಣ್ಣ, ಕೆಪಿಸಿಸಿ ಪ್ರಧಾನಕಾರ್ಯದರ್ಶಿಯಾದ ಶ್ರೀ ಹುಮಯೂನ್ ಖಾನ್, ಲಿಡ್ಕರ್ ಅಧ್ಯಕ್ಷರಾದ ಶ್ರೀ ಮುಂಡ್ರಿಗಿ ನಾಗರಾಜ್, ಮಹಾಪೌರರಾದ ಶ್ರೀ ಪಿ.ಗಾದೆಪ್ಪ, ಕ್ರೈಸ್ತ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕರಾದ ಶ್ರೀ ಜಿ.ಜೆ.ರವಿಕುಮಾರ್, ಕಾರ್ಯಾಧ್ಯಕ್ಷರಾದ ಶ್ರೀ ಭೋಯಪಾಟಿ ವಿಷ್ಣುವರ್ಧನ್, ಉಪಾಧ್ಯಕ್ಷರಾದ ಶ್ರೀ ಕೆ. ಶ್ರೀನಿವಾಸುಲು, ಮುಂಚೂಣಿ ಘಟಕಗಳ ಅಧ್ಯಕ್ಷರುಗಳಾದ ಶ್ರೀಮತಿ ಎಂ.ಎಸ್.ಮಂಜುಳ, ಕನೇಕಲ್ ಮಾಬೂಸಾಬ್, ಅಲ್ಲಿವೇಲು ಸುರೇಶ್, ಮಂಜುನಾಥ್, ಅತ್ತವುಲ್ಲ, ಅಖಿಲ್ ಅಹಮ್ಮದ್, ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ಶ್ರೀ ವೆಂಕಟಲಕ್ಷ್ಮಿ ನಾರಾಯಣ, ಪಾಲಿಕೆ ಸದಸ್ಯರಾದ ಶ್ರೀ ಕುಬೇರ, ಮುಖಂಡರುಗಳಾದ ಶ್ರೀ ವಿರಸೇನ ರೆಡ್ಡಿ, ಸತೀಶ್ ಚಕ್ರವರ್ತಿ, ರಾಮಾಂಜಿ, ಶ್ರೀಮತಿ ಬಿ.ಎ.ಮಲ್ಲೇಶ್ವರಿ, ಪರ್ವಿನ್ ಭಾನು, ರಾಜಶೇಖರ್, ಆಫ್ರೀನ್, ವಿಜಯ ಕುಮಾರಿ, ಲಿಂಗರಾಜ್, ಈರಮ್ಮ, ಸುನೀತಾ, ಉಮ್ಮಿ, ಶ್ರೀಲತಾ ಮತ್ತು ಇತರರು ಉಪಸ್ಥಿತರಿದ್ದರು.

# ಕಲ್ಯಾಣ ಕ್ರಾಂತಿ ಇಂದಿನ ಸಮಾಜಕ್ಕೂ ಪ್ರಸ್ತುತ: ಈಶ್ವರ ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ, ಬೀದರ



12ನೇ ಶತಮಾನದಲ್ಲಿ ಬಸವಣ್ಣನವರು ನಡೆಸಿದ ಕಲ್ಯಾಣ ಕ್ರಾಂತಿ ಇಂದಿನ ಆಧುನಿಕ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

"ಯಾರು ಮೇಲಲ್ಲ, ಯಾರು ಕೀಳಲ್ಲ" ಎಂಬ ತತ್ವದಡಿ ಜಾತಿರಹಿತ, ಲಿಂಗಭೇದವಿಲ್ಲದ ಸಮ ಸಮಾಜವನ್ನು ಕಟ್ಟಲು ಬಸವಣ್ಣನವರು ಶ್ರಮಿಸಿದ್ದರು. ಮೌಢ್ಯತೆ, ಕಂದಾಚಾರ ಮತ್ತು ಅಸ್ಪೃಶ್ಯತೆಯ ವಿರುದ್ಧ ಅವರು ಅಂದೇ ಸಮರ ಸಾರಿದ್ದರು. ಇಂದಿಗೂ ಸಮಾಜದಲ್ಲಿ ನೆಲೆಸಿರುವ ಅಸಮಾನತೆಯನ್ನು ಹೋಗಲಾಡಿಸಲು ಬಸವ ತತ್ವವೇ ಮದ್ದಾಗಿದೆ.

ಜಗತ್ತಿನಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳೆಯರಿಗೆ ಸಮಾನ ಗೌರವ ಮತ್ತು ಹಕ್ಕನ್ನು ನೀಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಆದರೆ, ಇಂದಿನ ದಿನಗಳಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ಮತ್ತು ಅತ್ಯಾಚಾರಗಳನ್ನು ಗಮನಿಸಿದರೆ, ನಾವು ಬಸವ ತತ್ವದಿಂದ ದೂರ ಸರಿಯುತ್ತಿದ್ದೇವೆಯೇ ಎಂಬ ಪ್ರಶ್ನೆ ಕಾಡುತ್ತಿದೆ.

ಯುವಜನತೆ ಮತ್ತು ಸಾಮಾಜಿಕ ಮಾಧ್ಯಮಗಳ ಪ್ರಭಾವ ಇಂದಿನ ಯುವ ಪೀಳಿಗೆಯು ವಿದ್ಯಾಭ್ಯಾಸದಲ್ಲಿ ಮುಂಚೂಣಿಯಲ್ಲಿದ್ದರೂ, ದಾರಿತಪ್ಪುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಒಂದು ಅಧ್ಯಯನದ ಪ್ರಕಾರ 30% ಯುವಕರು ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇನ್ನು 30% ಯುವಜನತೆ ಇಂಟರ್ನೆಟ್, ಫೇಸ್‌ಬುಕ್ ಮತ್ತು ರೀಲ್ಸ್‌ಮದದಲ್ಲಿ ಮುಳುಗಿ ಮಾನಸಿಕವಾಗಿ ದುರ್ಬಲರಾಗುತ್ತಿದ್ದಾರೆ. ಇದು ಕುಟುಂಬ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು, ಸಮಾಜ ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.

ಜಾಗತಿಕ ಯುದ್ಧ ಮತ್ತು ಶಾಂತಿಯ ಅಗತ್ಯ: ಇಸ್ರೇಲ್-ಇರಾನ್, ರಷ್ಯಾ-ಉಕ್ರೇನ್ ಯುದ್ಧಗಳು ಜಗತ್ತಿನಾದ್ಯಂತ ಅಶಾಂತಿಯನ್ನುಂಟು ಮಾಡುತ್ತಿವೆ. ನಮ್ಮ ದೇಶದ ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷಗಳು ಮನುಕುಲಕ್ಕೆ ಕಪ್ಪುಚುಕ್ಕೆಯಾಗಿವೆ. ಇಂತಹ ಸಂದರ್ಭದಲ್ಲಿ ಬಸವಣ್ಣನವರ "ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ" ಎನ್ನುವ ಸಹೋದರತ್ವದ ಸಂದೇಶ ಸಾರುವ ಅವಶ್ಯಕತೆ ಇದೆ. ಆಸ್ತಿ, ಹಣ ಮತ್ತು ಸ್ವಾರ್ಥಕ್ಕಾಗಿ ಸಂಬಂಧಗಳನ್ನು ಕೊಲೆ ಮಾಡುತ್ತಿರುವ ಈ ಕಾಲದಲ್ಲಿ, ನೈತಿಕ ಶಿಕ್ಷಣ ಮತ್ತು ಬಸವಣ್ಣನವರ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದೊಂದೇ ಸಮಾಜದ ಸಕಲ ಸಮಸ್ಯೆಗಳಿಗೆ ಮದ್ದಾಗಿದೆ. "ಸರ್ವೇ ಜನಾ ಸುಖಿನೋ ಭವಂತು" ಎಂಬ ಆಶಯದೊಂದಿಗೆ ಎಲ್ಲರೂ ಬದುಕೋಣ ಎಂದರು.

ನಮ್ಮ ಸರ್ಕಾರ ಅನುಭವ ಪಂಟಪ ನಿರ್ಮಾಣಕ್ಕೆ ನಮ್ಮ ಸರ್ಕಾರ ಬದ್ಧವಾಗಿದ್ದು. ಈಗಾಗಲೇ 280 ಕೋಟಿ ಬಿಡುಗಡೆ ಮಾಡಿದೆ ಇನ್ನು 250 ಕೋಟಿ ಬೇಕಾಗುವ ಸಾಧ್ಯತೆ ಇದೇ ಅವುಗಳನ್ನು ಅಂದುಕೊಂಡದಂತೆ ನಡೆದರೆ ಮುಂದಿನ ಬಸವ ಜಯಂತಿ ಒಳಗಾಗಿ ಲೋಕಾರ್ಪಣೆಗೊಳಿಸಲಾಗುವುದು. ನಾನು ಮುತುವರ್ಜಿ ವಹಿಸಿ ಬೆಂಗಳೂರಿನಲ್ಲಿ 153 ಎಕರೆ ನಿರ್ಮಾಣವಾಗುತ್ತಿರುವ ಸಸ್ಯ ಉದ್ಯಾನವನಕ್ಕೆ ಬಸವೇಶ್ವರರ ಹೆಸರಿಟ್ಟಿದ್ದೇನೆ ಎಂದರು.

ಪೌರಾಡಳಿತ ಹಾಗೂ ಹಜ್ ಖಾತೆ ಸಚಿವ ರಹೀಮ್ ಖಾನ್ ಮಾತನಾಡಿ, ಬಸವಣ್ಣನವರ ಸಂದೇಶ ಮತ್ತು ವಚನ ಸಿದ್ಧಾಂತಗಳು ಕೇವಲ ಮಾತಿಗೆ ಸೀಮಿತವಾಗದೆ, ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು. ಬೀದರ್ ಜಿಲ್ಲೆಯ ಜನರು ಈ ಬಸವಣ್ಣನವರ ತತ್ವಾದರ್ಶಗಳನ್ನು ಶೇ. 100ರಷ್ಟು ಪಾಲಿಸಿದಾಗ ಮಾತ್ರ ವಿಶ್ವಗುರು ಬಸವಣ್ಣನವರ ಆಶಯಗಳು ಜಗತ್ತಿಗೆ ತಲುಪಲು ಸಾಧ್ಯ," ಎಂದು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಅವರು ತಿಳಿಸಿದರು.

ಬೀದರ ದಕ್ಷಿಣ ಕ್ಷೇತ್ರದ ಶಾಸಕ ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಜಗತ್ತಿನ ವಿವಿಧ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧಗಳು ಮತ್ತು ದೇಶದ ಒಳಗಿನ ಜನಾಂಗೀಯ ಸಂಘರ್ಷಗಳು ಮನುಕುಲವನ್ನು ಅತಂತ್ರಗೊಳಿಸಿವೆ. ಇಂತಹ ಸಂದರ್ಭದಲ್ಲಿ ಬಸವಣ್ಣನವರ "ದಯೆಯೇ ಧರ್ಮದ ಮೂಲವಯ್ಯ" ಎನ್ನುವ ಮೌಲ್ಯಗಳು ಜಗತ್ತಿಗೆ ಶಾಂತಿಯ ದಾರಿದೀಪವಾಗಿವೆ ಎಂದರು.

ವೇದಿಕೆ ಕಾರ್ಯಕ್ರಮ ಚಾಲನೆಗೂ ಮುನ್ನ ಬಸವಣ್ಣನವರ ಭಾವಚಿತ್ರ ಮೆರವಣಿಗೆಯೂ ನಗರದ ಬಸವೇಶ್ವರ ವೃತ್ತದ ಬಳಿ ಗಣ್ಯರ ಸಮ್ಮುಖದಲ್ಲಿ ಚಾಲನೆಗೊಂಡು ಭಗತ್ ಸಿಂಗ್ ವೃತ್ತ, ಅಂಬೇಡ್ಕರ್ ವೃತ್ತ, ರೋಟರಿ ವೃತ್ತ ಮಾರ್ಗದಿಂದ ಸಾಗಿ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ರಂಗಮಂದಿಕ್ಕೆ ತಲುಪಿತು.

ಅತಿಥಿ ಉಪನ್ಯಾಸ ನೀಡಿ ಮಾತನಾಡಿದ ಶ್ರೀ ಚರಮೂರ್ತಿ ಚರಂತೇಶ್ವರ ವಿರಕ್ತಮಠ ಬಸವಬೆಳವಿಯ ಶ್ರೀ ಶರಣಬಸವ ಮಹಾಸ್ವಾಮಿ, ಬಸವ ಜಯಂತಿಯ ಆಚರಣೆಯು ಶರಣ ಸಂಸ್ಕೃತಿಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. 1913ರಲ್ಲಿ ದಾವಣಗೆರೆಯ ವಿರಕ್ತ ಮಠದಲ್ಲಿ ಪೂಜ್ಯ ಮೃತ್ಯುಂಜಯ ಸ್ವಾಮಿಗಳು ಮತ್ತು 'ಕರ್ನಾಟಕದ ಗಾಂಧಿ' ಹರಡೇಕರ್ ಮಂಜಪ್ಪನವರ ನೇತೃತ್ವದಲ್ಲಿ ಈ ಆಚರಣೆಗೆ ಚಾಲನೆ ನೀಡಲಾಯಿತು.

ಅಂದಿನ ಕಾಲದಲ್ಲಿ ಬಸವಣ್ಣನವರ ತತ್ವಗಳು ಮತ್ತು ವಚನ ಸಾಹಿತ್ಯವು ಕೇವಲ ಮಠಗಳ ಗದ್ದಿಗೆಗಳಿಗೆ ಹಾಗೂ ಪಂಡಿತರ ಓದಿಗೆ ಸೀಮಿತವಾಗಿದ್ದವು; ಜನಸಾಮಾನ್ಯರಿಗೆ ಅವರ ವೈಚಾರಿಕ ಕ್ರಾಂತಿಯ ಅರಿವು ಹೆಚ್ಚಾಗಿ ಇರಲಿಲ್ಲ. ಮುಂಬೈನಲ್ಲಿ ಇತರ ಮಹಾತ್ಮರ ಜಯಂತಿ ಆಚರಣೆಗಳಿಂದ ಪ್ರೇರಿತರಾದ ಹರಡೇಕರ್ ಮಂಜಪ್ಪನವರು, ಬಸವಣ್ಣನವರ ವಿಚಾರಗಳನ್ನು ಜನಮಾನಸಕ್ಕೆ ತಲುಪಿಸಲು ನಿರ್ಧರಿಸಿದರು. ಐತಿಹಾಸಿಕ ದಾಖಲೆಗಳ ಆಧಾರದ ಮೇಲೆ ಅಕ್ಷಯ ತೃತೀಯ ದಿನದಂದೇ ಬಸವಣ್ಣನವರು ಜನಿಸಿದರೆಂದು ನಿಶ್ಚಯಿಸಿ, ಅಂದಿನಿಂದ ಹಳ್ಳಿ-ಹಳ್ಳಿಗಳಲ್ಲಿ ಪ್ರವಚನ ಹಾಗೂ ಸಮಾರಂಭಗಳ ಮೂಲಕ ಶರಣರ ಸಮಾನತೆಯ ಸಂದೇಶವನ್ನು ಪಸರಿಸಲಾಯಿತು. ಈ ಪ್ರಯತ್ನದ ಫಲವಾಗಿ ಇಂದು ಬಸವ ಜಯಂತಿಯು ಸಾಮಾಜಿಕ ಬದಲಾವಣೆಯ ಮತ್ತು ವೈಚಾರಿಕತೆಯ ಸಂಕೇತವಾಗಿ ಜಗತ್ತಿನಾದ್ಯಂತ ಆಚರಿಸಲ್ಪಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ರವೀಂದ್ರ ದಾಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಸಿಂಧೆ, ತಹಸೀಲ್ದಾರ್ ಗ್ರೇಡ್ -2 ಜಿಯಾವೋದ್ದಿನ್, ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ರಾಜನೀಶ್ ವಾಲಿ, ಪ್ರಧಾನ ಕಾರ್ಯದರ್ಶಿ ಶಶಿಧರ ಹೊಸಳ್ಳಿ, ಮಹಿಳಾ ಘಟಕದ ಅಧ್ಯಕ್ಷೆ ದೇವಿಕಾ ಅಶೋಕ ನಾಗೋರೆ, ಸಮಾಜದ ಹಿರಿಯರಾದ ಶಿವಶರಣಪ್ಪ ವಾಲಿ, ಪ್ರಮುಖರಾದ ಶ್ರೀಕಾಂತ್ ಸ್ವಾಮಿ, ಶಾಮಣ್ಣ ಬಾವಗಿ, ಸುರೇಶ ಚನ್ನಶೆಟ್ಟಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಜಿಲ್ಲಾ ಕೇಂದ್ರದಲ್ಲಿ ಏ.24 ರಂದು ಡಾ.ರಾಜ್ ಕುಮಾರ್ ಜನ್ಮದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ಏ.24 ರಂದು ಜಿಲ್ಲಾ ಕೇಂದ್ರದಲ್ಲಿ ಡಾ.ರಾಜ್ ಕುಮಾರ್ ಜನ್ಮ ದಿನಾಚರಣೆ ಕಾರ್ಯಕ್ರಮ ಅದ್ದೂರಿಯಾಗಿ ಆಚರಿಸಲಾಗುವುದು.

ಡಾ.ರಾಜ್ ಕುಮಾರ್ ಜನ್ಮದಿನಾಚರಣೆ ಅಂಗವಾಗಿ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಡಾ.ರಾಜ್‌ಕುಮಾರ್ ಅವರು ಕನ್ನಡ ನಾಡು–ನುಡಿ, ಭಾಷೆ, ಸಂಸ್ಕೃತಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಹಾಡುಗಳು, ಸಿನಿಮಾಗಳು ಇಂದಿಗೂ ಯುವ ಪೀಳಿಗೆಗೆ ಸ್ಫೂರ್ತಿದಾಯಕವಾಗಿದ್ದು, ಇದೇ ಏ.24 ರಂದು ಜಿಲ್ಲಾ ಕೇಂದ್ರದಲ್ಲಿ ಡಾ.ರಾಜ್ ಕುಮಾರ್ ಅವರ ಜನ್ಮದಿನಾಚರಣೆಯನ್ನು ಸಂಭ್ರಮದಿಂದ ಆಚರಿಸೋಣ ಎಂದು ಹೇಳಿದರು.

ಏ.24 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಡಾ.ರಾಜ್ ಕುಮಾರ್ ಉದ್ಯಾನವನದಲ್ಲಿರುವ



ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಪುಷ್ಪನಮನ ಮಾಡಲಾಗುವುದು. ಅಂದು ಸಂಜೆ 06 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಡಾ.ರಾಜ್ ಕುಮಾರ್ ಅವರ ಸಿನಿ ಹಾಡುಗಳ ಪ್ರಸ್ತುತಪಡಿಸುವ ಗೀತ–ಗಾಯನ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಡಾ.ರಾಜ್ ಕುಮಾರ್ ಅವರು ಕನ್ನಡ ನಾಡು–ನುಡಿಗಾಗಿ ನೀಡಿದ ಕೊಡುಗೆ, ಅವರ ಜೀವನ ಚರಿತ್ರೆ, ಯಶೋಗಾಥೆ ಕುರಿತು ಈಗಿನ ಪೀಳಿಗೆಗೆ ಮನದಟ್ಟು ಮಾಡಲು ಚುಟುಕು ಉಪನ್ಯಾಸ ನೀಡಲು ವಿಶೇಷ ಉಪನ್ಯಾಸಕರನ್ನು ನಿಯೋಜಿಸಬೇಕು ಎಂದು ಸೂಚಿಸಿದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳು, ಸ್ಥಳೀಯ–ಸಂಸ್ಥೆಗಳ ಪದಾಧಿಕಾರಿಗಳು, ಕನ್ನಡ ಪರ ಸಂಘಟನೆಗಳ ಮುಖಂಡರು, ಡಾ.ರಾಜ್ ಕುಮಾರ್ ಅಭಿಮಾನಿ ಸಂಘದ ಪದಾಧಿಕಾರಿಗಳು ಹಾಗೂ ಮತ್ತೀತರರನ್ನು ಆಹ್ವಾನಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಕನ್ನಡ ಪರ ಸಂಘಟನೆಗಳ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಡಾ.ರಾಜ್‌ಕುಮಾರ್ ಉದ್ಯಾನವನದ ಅಧ್ಯಕ್ಷರೂ ಆಗಿರುವ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರು ಮಾತನಾಡಿ, ಉದ್ಯಾನವನದಲ್ಲಿರುವ ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲು ಸಿಎಸ್‌ಆರ್ ಅನುದಾನದಡಿ ಶಾಶ್ವತವಾದ ಮೆಟ್ಟಿಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಇದೇ ವೇಳೆ ಕನ್ನಡ ಪರ ಸಂಘಟನೆಗಳ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜನೆ ಕುರಿತಂತೆ ತಮ್ಮ ಸಲಹೆ–ಸೂಚನೆ ನೀಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ.ಗುರುರಾಜ ಸೇರಿದಂತೆ ಕನ್ನಡ ಪರ ಸಂಘಟನೆಗಳ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಮತ್ತೀತರರು ಉಪಸ್ಥಿತರಿದ್ದರು.

# ಕುಕುನೂರು ಪಟ್ಟಣ ಪಂ ವತಿಯಿಂದ ಅಂಗಡಿ ಶಡ್ಗಳ ತೆರವು ಕಾರ್ಯಾಚರಣೆ



ಮಲ್ಲಮ್ಮನುಡಿವಾರ್ತೆ ಕುಕನೂರು:

ಪಟ್ಟಣದಲ್ಲಿ ಹಾಗೂ ಬಸವಣ್ಣನವರ ಪುತ್ಥಳಿ ನಿರ್ಮಾಣದ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯಿತಿ ರಸ್ತೆ ಬದಿ ಅಂಗಡಿ ಮತ್ತು ಶೆಡ್‌ಗಳ ತೆರವು ಕಾರ್ಯಾಚರಣೆ ಕೈಗೊಂಡಿದೆ. ಇದರಿಂದ ದಶಕಗಳಿಂದ ಇದೇ ವ್ಯಾಪಾರವನ್ನು ನಂಬಿಕೊಂಡಿದ್ದ ನೂರಾರು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. "ಸ್ವಚ್ಛತೆ ಇರಲಿ, ಆದರೆ ನಮ್ಮ ಹೊಟ್ಟೆ ಮೇಲೆ ಹೊಡೆಯಬೇಡಿ" ಎಂಬ ವ್ಯಾಪಾರಸ್ಥರ ಆಕ್ರಂದನ ಕೇಳಿಬರುತ್ತಿದೆ.

ಶನಿವಾರ ನಡೆದ ಕಾರ್ಯಾಚರಣೆಯಲ್ಲಿ ಟೀ ಅಂಗಡಿಗಳು, ಹೋಟೆಲ್‌ಗಳು, ಸೈಕಲ್ ಅಂಗಡಿಗಳು ಸೇರಿದಂತೆ ಹಲವು ರಸ್ತೆಬದಿ ಮಳಿಗೆಗಳನ್ನು ತೆರವುಗೊಳಿಸಲಾಯಿತು. ಹಲವು ವರ್ಷಗಳಿಂದ ಜೀವನೋಪಾಯವಾಗಿದ್ದ ಈ ಅಂಗಡಿಗಳು ನೆಲಸಮವಾಗಿವೆ.

> "ಪಟ್ಟಣ ತೀವ್ರವಾಗಿ ಬೆಳೆಯುತ್ತಿದಂತೆ ಜನಸಂಖ್ಯೆ ಹಾಗೂ ವಾಹನ ಸಂಚಾರ ಹೆಚ್ಚಳದಿಂದ ಟ್ರಾಫಿಕ್ ಸಮಸ್ಯೆ ಮತ್ತು ಅಪಘಾತಗಳ ಪ್ರಮಾಣ ಹೆಚ್ಚುತ್ತಿದೆ. ಈ ಹಿನ್ನೆಲೆ ಜಿಲ್ಲಾಧಿಕಾರಿ ಹಾಗೂ ಸುಪ್ರೀಂ ಕೋರ್ಟ್ ಆದೇಶಗಳ ಅನ್ವಯ, ಫುಟ್‌ಪಾತ್ ಮತ್ತು ರಸ್ತೆ ಆಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿರುವ ಶೆಡ್‌ಗಳು ಹಾಗೂ ಅಂಗಡಿ ಮುಗ್ಗಟ್ಟುಗಳನ್ನು ತೆರವುಗೊಳಿಸುವ ಕ್ರಮ ಕೈಗೊಳ್ಳಲಾಗಿದೆ. ಕಳೆದ ಒಂದು ತಿಂಗಳಿನಿಂದ ವ್ಯಾಪಾರಸ್ಥರಿಗೆ ನೋಟಿಸ್ ನೀಡಿ ಮನವರಿಕೆ ಮಾಡಲಾಗಿದ್ದು, ಬಹುತೇಕರು ಸಹಕಾರ ನೀಡಿದ್ದಾರೆ.
>
> ರಸ್ತೆ ಅಗಲೀಕರಣ ಹಾಗೂ ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ ಈ ಕ್ರಮ ಅನಿವಾರ್ಯವಾಗಿದೆ. ಹೆಚ್ಚಿನ ವ್ಯಾಪಾರಸ್ಥರು ಸ್ವಯಂ ಪ್ರೇರಿತವಾಗಿ ತಮ್ಮ ಅಂಗಡಿಗಳನ್ನು ತಾವೇ ತೆರವುಗೊಳಿಸುತ್ತಿದ್ದು, ಮುನ್ಸಿಪಲ್ ಕಾಯ್ದೆಯಡಿ ಸಾರ್ವಜನಿಕ ಸ್ಥಳಗಳ ಅನಧಿಕೃತ ಆಕ್ರಮಣ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.'
>
> **ನಾಗೇಶ್**
> ಮುಖ್ಯಾಧಿಕಾರಿಗಳು, ಪ. ಪಂ. ಕುಕನೂರ

ಮೇ 4ರಂದು ಇದೇ ಸ್ಥಳದಲ್ಲಿ ಶಾಸಕ ಬಸವರಾಜ್ ರಾಯರೆಡ್ಡಿ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಜಗಜ್ಯೋತಿ ಬಸವಣ್ಣ, ಸಂಗೊಳ್ಳಿ ರಾಯಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗಳ ಶಂಕುಸ್ಥಾಪನೆ ನಡೆಯಲಿದ್ದು, ಈ ಸ್ಥಳದಲ್ಲಿ ಬಸವಣ್ಣನವರ ಸ್ಮಾರಕ ನಿರ್ಮಾಣ ಉದ್ದೇಶಿಸಿ ತೆರವು ಕಾರ್ಯಾಚರಣೆ ನಡೆಯುತ್ತಿದೆ ಎಂದು ತಿಳಿದುಬಂದಿದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಅಂಗಡಿಗಳ ಹಿಂಭಾಗದಲ್ಲೇ ಸ್ಮಾರಕ ನಿರ್ಮಾಣವಾಗಲಿದೆ ಎನ್ನಲಾಗಿದೆ.

ಒಂದು ಕಡೆ ಸಾಲ ಪಡೆದು ವ್ಯಾಪಾರ ನಡೆಸುತ್ತಿದ್ದ ಸಣ್ಣ ವ್ಯಾಪಾರಿಗಳು ಈಗ ಅಂಗಡಿಗಳಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದು, ಸಾಲ ತೀರಿಸುವುದೇ ದೊಡ್ಡ ಸಮಸ್ಯೆಯಾಗಿದೆ. "20–30 ವರ್ಷಗಳಿಂದ ಇದೇ ಜಾಗದಲ್ಲಿ ವ್ಯಾಪಾರ ನಡೆಸುತ್ತಿದ್ದೇವೆ. ನಮಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು, ಈ ಕುರಿತು ವ್ಯಾಪಾರಸ್ಥರು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸ್ಥಳಕ್ಕೆ ಆಗಮಿಸಿದ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ. ಇಲ್ಲವಾದರೆ ಬದುಕು ಕಷ್ಟಕರವಾಗಲಿದೆ," ಎಂದು ವ್ಯಾಪಾರಸ್ಥರು ತಿಳಿಸಿದರು.

# ಪತ್ರಕರ್ತ ಶಿವಾನಂದ ತಗಡೂರು ಅವರಿಗೆ ಬಸವ ಜಯಂತಿಯಲ್ಲಿ ಅಭಿನಂದನೆ



ಮಲ್ಲಮ್ಮ ನುಡಿ ವಾರ್ತೆ ಮೈಸೂರು

ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರು ಅಭಿನಂದಿಸಿದರು.ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಒಟ್ಟಾಗಿ ಸಂಘಟಿಸಿದ್ದ ಈ ಕಾರ್ಯಕ್ರಮದಲ್ಲಿ ಪದ್ಮಶ್ರೀ ಡಾ.ಎಸ್.ಜಿ.ಸುಶೀಲಮ್ಮ, ಐಎಎಸ್ ಅಧಿಕಾರಿ ನಿತೇಶ್ ಪಾಟೀಲ್, ಐಪಿಎಸ್ ಅಧಿಕಾರಿ ಸೀಮಾ ಲಾಟ್ಕರ್, ಚಿನ್ನಸ್ವಾಮಿ ವಡ್ಡಗೆರೆ ಸೇರಿದಂತೆ ಒಂಬತ್ತು ಗಣ್ಯರನ್ನು ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮಿಜಿ, ದೇವನೂರು ಮಠದ ಸ್ವಾಮೀಜಿ,

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮತ್ತಿತರರು ಭಾಗವಹಿಸಿದ್ದರು.

# ಏಪ್ರಿಲ್ 24ಕ್ಕೆ ರೈತ ಉತ್ಪಾದಕ ಸಂಸ್ಥೆಗಳು ಸಮಾವೇಶ-2026

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಕೃಷಿ ಇಲಾಖೆ, ನಬಾರ್ಡ್ ಹಾಗೂ ಕೆ–ಟೆಕ್ ಸಹಯೋಗದೊಂದಿಗೆ ಇದೇ ಏಪ್ರಿಲ್ 24 ರಂದು ಬೆಳಿಗ್ಗೆ 10 ಗಂಟೆಗೆ ಕಲಬುರಗಿ ನಗರದ ಜೆಸ್ಕಾಕ್ಲಬ್‌ನಲ್ಲಿ ರೈತ ಉತ್ಪಾದಕ ಸಂಸ್ಥೆಗಳು (FPOಗಳು) ಮತ್ತು ನವೋದ್ಯಮಗಳ ಸಮಾವೇಶ – 2026 ಕಾರ್ಯಕ್ರಮ ಆಯೋಜಿಸಲಾಗಿದೆ.

ಕಲ್ಯಾಣ ಕರ್ನಾಟಕದಲ್ಲಿ ಪ್ರಾದೇಶಿಕ ಉಪಕ್ರಮ ಭಾಗವಾಗಿ ಇದೇ ಮೊದಲ ಬಾರಿಗೆ ರೈತ ಉತ್ಪಾದಕ ಸಂಸ್ಥೆಗಳು (FPOಗಳು) ಮತ್ತು ನವೋದ್ಯಮಿಗಳ ನಡುವಿನ ಅನುಭಾವತ್ಮಕ ಕಾರ್ಯಕ್ರಮ ಇದಾಗಿದ್ದು, ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆ ವರೆಗೆ ನಡೆಯಲಿದೆ. ವಿವಿಧ ವಿಷಯಗಳ ಮೇಲೆ ತಜ್ಞರು ಮಾತನಾಡಲಿದ್ದಾರೆ. ಕೃಷಿ ಉತ್ಪನ್ನ ಖರೀದಿಗಿರುವ ಅವಕಾಶ, ಮಾರುಕಟ್ಟೆ ವಿಸ್ತರಣೆ, ನೆಟ್ ವರ್ಕ್ ಲಿಂಕೇಜ್ ಚೈನ್, ಇಂಡಸ್ಟ್ರಿಗಳೊಂದಿಗೆ ಸಂವಾದ ನಡೆಯಲಿದೆ. ಇದಲ್ಲದೆ ಬೆಸ್ಟ್ ಎಫ್.ಪಿ.ಓ ಗಳಿಗೆ ಸ್ಟಾರ್ಟ್ ಅಪ್ ಅವಾರ್ಡ್ ಸಹ ನೀಡಲಾಗುತ್ತಿದೆ.

---

**ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ ಹಾಗೂ ಸಹಾಯಕ ಆಯುಕ್ತರು ಬಸವಕಲ್ಯಾಣ**

ಸಂ:ಕಂ/ವೀ/ದೇವಸ್ಥಾನ/ಮಳಿಗೆ/27/ 2024-25

ಕಾರ್ಯಾಲಯ
ಶ್ರೀ ವೀರಭದ್ರೇಶ್ವರ ದೇವಸ್ಥಾನ
ಹುಮನಾಬಾದ
ದಿನಾಂಕ:18/04/2026

## :: ಮಳಿಗೆ ಹರಾಜು ಪ್ರಕಟಣೆ ::

ವಿಷಯ: ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ ದೇವಸ್ಥಾನಕ್ಕೆ ಸೇರಿದ ಥೇರ ಮೈದಾನದಲ್ಲಿರುವ ವಾಣಿಜ್ಯ ಕಟ್ಟಡದಲ್ಲಿನ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಹುಮನಾಬಾದ ಗ್ರಾಮದ ಶ್ರೀ. ವೀರಭದ್ರೇಶ್ವರ ದೇವಸ್ಥಾನ ಥೇರ ಮೈದಾನದಲ್ಲಿರುವ ಒಟ್ಟು 10 ಅಂಗಡಿ ಮಳಿಗೆಗಳ ಹರಾಜು ಪ್ರಕಟಣೆ ವಿವರ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ.

| ಕ್ರ. ಸಂ | ಅಂಗಡಿ ಹೆಸರು | ಒಂದು ಮಳಿಗೆ ನಿವೇಶನ ವಿಸ್ತೀರ್ಣ | ಒಂದು ಮಳಿಗೆ ಕಟ್ಟಡ ವಿಸ್ತೀರ್ಣ | ಒಂದು ಮಳಿಗೆ ಠೇವಣಿ ಮೊತ್ತ. | ಒಂದು ಮಳಿಗೆಗೆ ನಿಗದಿಪಡಿಸಿದ ಕನಿಷ್ಟ ತಿಂಗಳ ಬಾಡಿಗೆ | ಮಳಿಗೆಗಳ ಸಂಖ್ಯೆ ಒಟ್ಟು (10) |
|---|---|---|---|---|---|---|
| 01 | ವಾಣಿಜ್ಯ ಕಟ್ಟಡ "C" Block | ಉದ್ದ-25 ಅಡಿ ಅಗಲ-12ಅಡಿ | ಉದ್ದ-20 ಅಡಿ ಅಗಲ-12ಅಡಿ | 1,87,500/- | 11,708/- | **ಪ.ಜಾ(02)** ಮಳಿಗೆ ಸಂಖ್ಯೆ:-3 ಮತ್ತು 8<br>**ಪ.ಪಂ (01)** ಮಳಿಗೆ ಸಂಖ್ಯೆ:-06<br>**ಅಂಗವಿಕಲರಿಗೆ (01)** ಮಳಿಗೆ ಸಂಖ್ಯೆ:-9<br>**ಸಾಮನ್ಯ ವರ್ಗ (06)** ಮಳಿಗೆ ಸಂಖ್ಯೆ:-1,2,4,5,7 ಮತ್ತು 10 |

ಮುಂಗಡ ಠೇವಣಿ ಮೊತ್ತ ರೂ.1,87,500/- ಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ ರವರ ಹೆಸರಿಗೆ ಡಿ.ಡಿ ಅಥವಾ ನಗದು ರೂಪದಲ್ಲಿ ದಿನಾಂಕ:-03-05-2026 ರ ಸಾಯಂಕಾಲ 5:00 ಗಂಟೆ ಒಳಗಾಗಿ ಈ ಕಾರ್ಯಲಯಕ್ಕೆ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು ಸಮಯ ಮೀರಿ ಬಂದ ಅರ್ಜಿಗಳಿಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಹೆಚ್ಚಿನ ಬಾಡಿಗೆ ಹಣವನ್ನು ಹೇಳಿದವರಿಗೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ವಾಣಿಜ್ಯ ಕಟ್ಟಡ ಹಂಚಿಕೆ ಮಾಡಲು ದಿನಾಂಕ:04-05-2026 ಸೋಮವಾರ ರಂದು ಬೆಳಿಗ್ಗೆ 10:00 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಆಸಕ್ತಿಯುಳ್ಳ ಬಿಡ್ ದಾರರು ಹೆಚ್ಚಿನ ಸಂಖ್ಯೆ ಯಲ್ಲಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಿದೆ.

18/04/26

ಸಹಾಯಕ ಆಯುಕ್ತರು ಬಸವಕಲ್ಯಾಣ
ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ

**ಬಹಿರಂಗ ಹರಾಜು/ಲಿಲಾವು ನಿಬಂಧನೆ ಮತ್ತು ಷರತ್ತುಗಳು:-**

1) ಮಳಿಗೆ/ಅಂಗಡಿಗಳು ಪಡೆಯಲಿಚ್ಛಿಸಿ ಠೇವಣಿ ಮೊತ್ತವನ್ನು ಪಾವತಿಸಿದವರಿಗೆ ಮಾತ್ರ ಷರತ್ತುಗಳನ್ವಯ ಬಹಿರಂಗ ಹರಾಜು/ಲಿಲಾವಿನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.
2) ಅರ್ಜಿದಾರರು ವಿಳಾಸದ ಬಗ್ಗೆ, ಗುರುತಿನ ದಾಖಲೆ (ಆಧಾರ ಕಾರ್ಡ್. ಮತದಾರರ ಗುರುತಿನ ಚೀಟಿ,ಪ್ಯಾನ್ ಕಾರ್ಡ,ವಾಹನ ಚಾಲನಾ ಪರವಾನಗಿ ಇತ್ಯಾದಿ) ಇವುಗಳಲ್ಲಿ ಒಂದನ್ನು ಒದಗಿಸುವುದು.
3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದು.
4) ಅಂಗವಿಕಲರು ಸಕ್ಷಮ ಪ್ರಾಧಿಕಾರದಿಂದ ವಿಕಲಚೇತನ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು (ಇದರಲ್ಲಿ ಅಂಗವಿಕಲತೆಯ ಶೇಕಡವಾರನ್ನು ನಮೂದಿಸುವುದು)
5) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002 – ನಿಯಮ 31 ಉಪನಿಯಮ 05 ರ ಪ್ರಕಾರ ಯಶಸ್ವಿಯಾದ ಬಿಡ್ಡುದಾರರು 10 ದಿನಗಳ ಒಳಗಾಗಿ ಮುಂಗಡವಾಗಿ 06 ತಿಂಗಳ ಬಾಡಿಗೆ ಮೊತ್ತವನ್ನು ಬಡ್ಡಿ ರಹಿತವಾಗಿ ಪಾವತಿಸತಕ್ಕದ್ದು. ಈ ಮುಂಗಡ ಮೊತ್ತವನ್ನು ಗುತ್ತಿಗೆ ಅವಧಿ ಮುಕ್ತಾಯವಾಗುವ ಮುಂಚೆ ಮುಂದಿನ 06 ತಿಂಗಳ ಬಾಡಿಗೆ ಸಂದಾಯಕ್ಕೆ ಹೊಂದಿಸಿಕೊಳ್ಳಲಾಗುವುದು ನಿಗಧಿತ ಅವಧಿಯೊಳಗೆ ಮುಂಗಡ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ಹರಾಜಿಗೆ ಪಾವತಿಸಲಾದ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ನಡೆಸಲಾಗುವುದು.
6) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002 – ನಿಯಮ 31 ಉಪನಿಯಮ 09 ರ ಪ್ರಕಾರ ಬಾಡಿಗೆ ನೀಡುವ ಮಳಿಗೆಗಳಲ್ಲಿ ಬಾರ್, ಮಾಂಸ ಮಾರಾಟ, ಮಾಂಸಾಹಾರದ ಹೋಟೇಲ್, ಮದ್ಯ ಅಥವಾ ಮಾದಕ ಪಾನೀಯಗಳ ಅಂಗಡಿ ಅಥವಾ ಲೈವ್ ಬ್ಯಾಂಡ್‌ಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.
7) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002 – ನಿಯಮ 31 ಉಪನಿಯಮ 12 ರ ಪ್ರಕಾರ ಹಿಂದೂಗಳಲ್ಲದವರಿಗೆ ಗುತ್ತಿಗೆಯನ್ನು ನೀಡುವುದಿಲ್ಲ.
8) ಮುಂಗಡ ಮೊತ್ತ ರೂ.1,87,500/-ಗಳನ್ನು ದಿನಾಂಕ:-03-05-2026 ರ ಸಾಯಂಕಾಲ 5:00 ಗಂಟೆ ಒಳಗಾಗಿ ಪಾವತಿಸತಕ್ಕದ್ದು.
9) ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಮೊದಲು ಮಳಿಗೆಯನ್ನು ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸತಕ್ಕದ್ದು.ಮಳಿಗೆ ಪಡೆದ ನಂತರ ಮಳಿಗೆಯನ್ನು ಯಾವುದೇ ಕಾರಣಕ್ಕೂ ಮಾರ್ಪಾಡುಗಳನ್ನು ದೇವಸ್ಥಾನದ ವತಿಯಿಂದ ಮಾಡಿಕೊಡಲಾಗುವುದಿಲ್ಲ. ಬಿಡ್ಡದಾರರು ತಮ್ಮ ಸ್ವಂತ ಖರ್ಚಿನಲ್ಲಿ ಮಳಿಗೆ ಮಾರ್ಪಾಡು ಮಾಡಲು ದೇವಸ್ಥಾನ ವತಿಯಿಂದ ಪೂರ್ವಾನುಮತಿ ಪಡೆಯತಕ್ಕದ್ದು.
10) ಯಶಸ್ವಿಯಾಗದೇ ಇರುವ ಬಿಡದಾರರ ಠೇವಣಿಯನ್ನು ಹರಾಜು ಪ್ರಕ್ರಿಯೆ ಮುಕ್ತಾಯಗೊಂಡ, ನಂತರ ಬಿಡ್ ದಾರರಿಗೆ ಹಿಂದಿರುಗಿಸಲಾಗುವುದು.
11) ಮಾಸಿಕ ಬಾಡಿಗೆಗೆ ನೀಡುವ ಅಂಗಡಿ ಮಳಿಗೆಗಳನ್ನು ಪ್ರಸ್ತುತ ಇರುವ ಸ್ಥಿತಿಯಲ್ಲಿಯೇ ಹರಾಜು ಮಾಡಲಾಗುವುದು.
12) ಯಶಸ್ವಿ ಬಿಡ್‌ದಾರರು ಇ.ಎಂ.ಡಿ ಠೇವಣಿ ಮೊತ್ತವನ್ನು ಬಾಡಿಗೆ ಅವಧಿ ಮುಗಿದ ನಂತರ ಯಾವುದೇ ಬಾಕಿ ಇಲ್ಲದೇ / ಇದ್ದಲ್ಲಿ ಮೂಲ ಠೇವಣಿಯ ರಶೀದಿ ಹಾಜರುಪಡಿಸಿ ಬಡ್ಡಿ ರಹಿತವಾಗಿ ಹಿಂಪಡೆಯಲು ಬದ್ಧರಾಗಿರತಕ್ಕದ್ದು.
13) ಟೆಂಡರ್‌ನಲ್ಲಿ ಪಡೆದ ಅಂಗಡಿ ಮಳಿಗೆಗಳ ಸ್ಥಿರೀಕರಣ ಆದೇಶಗೊಂಡ ದಿನಾಂಕದಿಂದ 03 ವರ್ಷಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ ಹಾಗೂ 2ನೇ ವರ್ಷಕ್ಕೆ ಹರಾಜು ಮೊತ್ತದ ಮೇಲೆ ಪ್ರತಿ ವರ್ಷ ಶೇಕಡ 10 ರಂತೆ ಅಥವಾ ಸರ್ಕಾರ ಕಾಲಕಾಲಕ್ಕೆ ನಿಗಧಿಪಡಿಸುವ ಆದೇಶಕ್ಕನುಗುಣವಾಗಿ ಪ್ರತಿವರ್ಷವು ಬಾಡಿಗೆ ಮೊತ್ತ ಹೆಚ್ಚಳಕ್ಕೆ ಒಳಪಟ್ಟಿರುತ್ತದೆ.
14) ಟೆಂಡರನ ಅವಧಿಯು ಮುಗಿದ ಅಂಗಡಿಮಳಿಗೆಯನ್ನು ಸುಸ್ಥಿತಿಯಲ್ಲಿ ದೇವಾಲಯಕ, ಬಿಟ್ಟು ಕೊಡತಕ್ಕದ್ದು ಹಾಗೂ ಒಂದು ವೇಳೆ ಅಂಗಡಿ ಮಳಿಗೆಯನ್ನು ಹಿಂದಿರುಗಿಸದೇ ಹೋದಲ್ಲಿ ಬಾಡಿಗೆ ಮುಕ್ತಾಯವಾದ ದಿನಾಂಕದಂದು ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಪ್ರತಿ ತಿಂಗಳು ನಷ್ಟ ಪರಿಹಾರ (Damages) ವನ್ನು ಶೇಕಡ 18% ರಷ್ಟನ್ನು ಬಡ್ಡಿಯೊಂದಿಗೆ ಪಾವತಿಸಲು ಬದ್ಧರಾಗಿರುತ್ತಾರೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರು ಬಸವಕಲ್ಯಾಣ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನಹುಮನಾಬಾದ ರವರಿಗೆ ಸಲ್ಲಿಸತಕ್ಕದ್ದು.
15) ಹೆಚ್ಚಿನ ಬಿಡ್‌ದಾರರು ಪ್ರತಿ ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ 05 ನೇ ತಾರೀಖಿನೊಳಗೆ ಪಾವತಿಸತಕ್ಕದ್ದು. ವಿಳಂಬವಾಗಿ ಪಾವತಿಸುವ ಮೊತ್ತಕ್ಕೆ ಶೇಕಡ 18% ರ ದರದಂತೆ ಬಡ್ಡಿಯನ್ನು ಪಾವತಿಸಿಕೊಳ್ಳಲಾಗುವುದು, ನಂತರವೂ ಸತತವಾಗಿ 2 ತಿಂಗಳ ಅವಧಿಗೆ ಬಾಡಿಗೆ ಪಾವತಿಸದೇ ಇದ್ದಲ್ಲಿ ಸದರಿ ಅಂಗಡಿ ಮಳಿಗೆಯನ್ನು ತೆರವುಗೊಳಿಸಿ, ಮರು ಹರಾಜು ಮಾಡುವ ಅಧಿಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ ರವರಿಗೆ ದತ್ತವಾಗಿರುತ್ತದೆ.
16) ದೇವಾಲಯಕ್ಕೆ ಸೇರಿದ ಅಂಗಡಿ ಮಳಿಗೆಯನ್ನು ಹಿಂದೆ ಬಾಡಿಗೆಗೆ ಪಡೆದು ಬಾಕಿ ಉಳಿಸಿಕೊಂಡರುವವರು/ಬೇನಾಮಿ ಹೆಸರಿನಲ್ಲಿಯೂ ಸಹ ಬಿಡ್ ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಈ ನಿಯಮ ಬಾಹಿರವಾಗಿ ಟೆಂಡರನಲ್ಲಿ ಭಾಗವಹಿಸಿರುವುದು ಕಂಡುಬಂದಲ್ಲಿ ಅಂತಹವರ ಬಿಡ್ ಆದ ಹರಾಜನ್ನು ರದ್ದುಗೊಳಿಸಿ, ಪಾವತಿಸಲಾದ ಇ.ಎಂ.ಡಿ ಮೊತ್ತವನ್ನು ದೇವಾಲಯದ ಉಳಿತಾಯ/ಖಾತೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
17) ಯಶಸ್ವಿಯಾದ ಬಿಡ್‌ದಾರರು ಅಂಗಡಿ ಮಳಿಗೆಯ ಆಸ್ತಿ ತೆರಿಗೆ, ವಿದ್ಯುತ್ ಹಾಗೂ ನೀರಿನ ಶುಲ್ಕವನ್ನು ಸಂಬಂಧಪಟ್ಟ ಇಲಾಖೆಯಲ್ಲಿ ಪ್ರತಿ ತಿಂಗಳು/ ಸಂಬಂಧಪಟ್ಟ ಇಲಾಖೆಯ ನಿಯಾಮಾಸಾರ ಪಾವತಿಸತಕ್ಕದ್ದು. ಹರಾಜು ಅವಧಿ ಮುಗಿದ ನಂತರ ಅಂತಿಮ ಬಿಲ್ಲು/ಪಾವತಿ ಪ್ರತಿಗಳನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.
18) ಅಂಗಡಿ ಮಳಿಗೆಗಳಲ್ಲಿ ಕೆಲಸಕ್ಕಾಗಿ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲ.
19) ಪ್ರತಿ ಮಳಿಗೆಯ ಮುಂಗಡ ಠೇವಣಿ ಮೊತ್ತ ರೂ.1,87,500/- ಮತ್ತು ತಿಂಗಳ ಕನಿಷ್ಟ ಬಾಡಿಗೆ ರೂ 11708/-ಗಳನ್ನು ನಗರಾಭಿವೃದ್ಧಿ ಇಲಾಖೆ ಸುತ್ತೋಲೆ ಸಂಖ್ಯೆ:ನಅಇ 301 ಜಿಇಎಲ್ 2017 ದಿನಾಂಕ:-19-07-2019 ರ ಮಾನದಂಡಗಳ ಪ್ರಕಾರ ನಿಗದಿಪಡಿಸಲಾಗಿದೆ.
20) ಹರಾಜಿನ ಸಮಯದಲ್ಲಿ ಹೊಸ ನಿಂಬಧನೆ ಮತ್ತು ಷರತ್ತುಗಳನ್ನು ವಿಧಿಸುವ ಅಧಿಕಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ ರವರಿಗೆ ಇರುತ್ತದೆ.
21) ಹರಾಜಿನ ಮೊತ್ತವನ್ನು ಅಂತಿಮವಾಗಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನಹುಮನಾಬಾದ ರವರಿಗೆ ಇರುತ್ತದೆ.
22) ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಶಾಂತಿ ಮತ್ತು ಶಿಸ್ತು ಕಾಪಾಡತಕ್ಕದ್ದು.

ಸಹಾಯಕ ಆಯುಕ್ತರು ಬಸವಕಲ್ಯಾಣ
ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ

## ವಿವಿ ಪತ್ಯಕ್ಕೆ ಡಾ.ಮುಮ್ತಾಜ ಬೇಗಂ ಲೇಖನ ಆಯ್ಕೆ

**ಗಂಗಾವತಿ:** ಕರ್ನಾಟಕ ವಿಶ್ವ ವಿದ್ಯಾಲಯದ ಪಠಕ್ಕೆ ಲೇಖಕಿ, ಡಾ. ಮುಮ್ತಾಜ್ ಬೇಗಂ ಅವರ ಲೇಖನ ಆಯ್ಕೆಯಾಗಿದೆ.



ಗಂಗಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಮುಮ್ತಾಜ್ ಬೇಗಂ ಅವರು ಹಿರಿಯ ಸಾಹಿತಿ ಡಾ. ಬರಗೂರ ರಾಮಚಂದ್ರಪ್ಪ ಅವರ ಶಾಂತಿ ಸ್ತ್ರೀ ಸಂವೇದನೆಯ ಒಳನೋಟ ಕುರಿತು ಬರೆದ ಲೇಖನ ವಿಶ್ವ ವಿದ್ಯಾಲಯ ಪತ್ಯಕ್ಕೆ ಆಯ್ಕೆಯಾಗಿದೆ. ವಿಶ್ವ ವಿದ್ಯಾಲಯದ ಸ್ನಾತಕ ಪದವಿಯ ಬಿಎ ನಾಲ್ಕನೇ ಸೆಮಿಸ್ಟರ್ ವಿಭಾಗದ ಐಚ್ಛಿಕ ಕನ್ನಡ ವಿಷಯಕ್ಕೆ ಡಾ.ಮುಮ್ತಾಜ ಬೇಗಂ ಅವರು ಡಾ. ಬರಗೂರರ ಶಾಂತಿ ಸ್ತ್ರೀ ಸಂವೇದನೆಯ ಒಳನೋಟ ಲೇಖನ ಆಯ್ಕೆ ಮಾಡಲಾಗಿದೆ.

**ಹರ್ಷ:** ಸಹ ಪ್ರಾಧ್ಯಾಪಕಿ ಡಾ. ಮುಮ್ತಾಜ ಬೇಗಂ ಅವರ ಲೇಖನ ಕರ್ನಾಟಕ ವಿವಿ ಪತ್ಯಕ್ಕೆ ಆಯ್ಕೆಯಾಗಿದ್ದಕ್ಕೆ ಎಸಕೆಎನಜಿ ಕಾಲೇಜಿನ ಅತಿಥಿ ಉಪನ್ಯಾಸಕರಾದ ಪವನಕುಮಾರ ಗುಂಡೂರ್, ಬಸವರಾಜ, ಪಾಗುಂಟಪ್ಪ ಸೇರಿದಂತೆ ಕನ್ನಡ ವಿಭಾಗದ ಉಪನ್ಯಾಸಕರು ಹರ್ಷ ವ್ಯಕ್ತಪಡಿಸಿದ್ದಾರೆ.

## ಸಮ ಸಮಾಜದ ಹರಿಕಾರ ಬಸವಣ್ಣ



**ಭಾಲ್ಕಿ:** ಮಹಾ ಮಾನವತವಾದಿ ಬಸವಣ್ಣನವರು 12ನೇ ಶತಮಾನದ ಮಹಾನ್ ಕ್ರಾಂತಿಕಾರಿ, ಸಮಾಜ ಸುಧಾರಕ ಮತ್ತು ತತ್ವಜ್ಞಾನಿಯಾಗಿದ್ದರು. ಅವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಜಾತಿ,ಲಿಂಗ ತಾರತಮ್ಯ ಮತ್ತು ಮೌಢ್ಯತೆಗಳನ್ನು ಕಠೋರವಾಗಿ ವಿರೋಧಿಸುತ್ತಾ ಸಮಾನತೆ ಮತ್ತು ಕಾಯಕ ನಿಷ್ಠೆಯನ್ನು ಬೋಧಿಸಿದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರು ಎಂದು ಭೀಮಣ್ಣ ಖಂಡ್ರೆ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾಂಶುಪಾಲರಾದ ಉದಯಕುಮಾರ್ ಕಲ್ಯಾಣಿ ಅಭಿಪ್ರಾಯ ಪಟ್ಟರು. ಕಾಲೇಜಿನಲ್ಲಿ ಬಸವೇಶ್ವರರ ಜಯಂತಿಯನ್ನು ಉದ್ದೇಶಿಸಿ ಮಾತನಾಡಿ ಸುಮಾರು 900 ವರ್ಷಗಳ ಹಿಂದೆಯೇ ಸಾಮಾಜಿಕ ಕಾನೂನು ಸಂವಿಧಾನ ಪ್ರಜಾಪ್ರಭುತ್ವ ಸಮ ಸಮಾಜದ ನಿರ್ಮಾಣ ಆರ್ಥಿಕತೆ ಶಿಕ್ಷಣ ಮತ್ತು ಜ್ಞಾನ ವಿಜ್ಞಾನದ ಪರಿಕಲ್ಪನೆಯಲ್ಲಿಯೇ ಅನುಭವ ಮಂಟಪವನ್ನು ಸ್ಥಾಪಿಸಿದರು ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಬಿಎಮ್ ಪಾಟೀಲ್ ಶಾಂತ್ ಕುಮಾರ್ ಶೆಟ್ಟಿಗಾರ್ ರಾಮಚಂದ್ರ ಶಿವರಾಜ ಬಿರಾದಾರ್ ಸಂತೋಷ್ ತಪಶಾಲೆ ವಿವಿಧ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.



ವಿಜಯಪುರ ನಗರದಲ್ಲಿ ಮರಾಠ ಸಮಾಜದ ವತಿಯಿಂದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ವೃತ್ತದಲ್ಲಿ ಶಿವ ಬಸವ ಜಯಂತಿ ಉತ್ಸವ ಪೂಜೆಯನ್ನು ಹೇಮರೆಡ್ಡಿ ಮಲ್ಲಮ್ಮ ಸಂಸ್ಥೆ ಗೌರವ ಅಧ್ಯಕ್ಷರಾದ ಶ್ರೀ ಹನುಮಂತ್ ಮಾಚಪ್ಪನವರ ಗೌರವ ನಮನ ಸಲ್ಲಿಸಿದರು. ಈ ವೇಳೆಯಲ್ಲಿ ಸಮಾಜದ ಮುಖಂಡರು ಕಾರ್ಯಕರ್ತರು ಉಪಸ್ಥಿತಿ ಇದ್ದರು.



ಹಗರಿಬೊಮ್ಮನಹಳ್ಳಿ: ವಿಶ್ವಗುರು ಬಸವಣ್ಣನವರ ಸ್ಮರಣಾರ್ಥ, ಬಸವೇಶ್ವರ ಬಜಾರ್‌ನ ಕಳಸ ಪ್ರಾಯವಾದ ಬಸವೇಶ್ವರ ವೃತ್ತವನ್ನು, ಅತ್ಯಂತ ಸುಂದರವಾಗಿ,ಮಾದರಿಯಾಗಿ ಧ್ವನಿ,ಬೆಳಕು ಅಳವಡಿಸುವ ಮೂಲಕ ಆಧುಕೀಕರಣಗೊಳಿಸಿದ್ದು, ಇಂದು ಪರಮಪೂಜ್ಯರ ಹಾಗೂ ಸಮಾಜ ಬಾಂಧವರ ನೇತೃತ್ವದಲ್ಲಿ ಅನಾವರಣಗೊಳಿಸಲಾಯಿತು.

# 622ನೇ ಉರ್ಸ್ ಸಿದ್ಧತೆಗಳ ಪರಿಶೀಲನೆ: ಉತ್ತಮ ವ್ಯವಸ್ಥೆಗೆ ಭರವಸೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಹಜ್ರತ್ ಖ್ವಾಜಾ ಬಂದಾ ನವಾಜ್ (ರಹ್) ದರ್ಗಾದ ಸಜ್ಜಾದಾ ನಶೀನ್, ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ್ ಅಲಿ ಅಲ್-ಹುಸೈನಿ ಅವರ ಅಧ್ಯಕ್ಷತೆಯಲ್ಲಿ ಮೇ 3,4 ಹಾಗೂ 5 ನೇ ತಾರೀಖು ನಡೆಯಲಿರುವ 622ನೇ ಉರ್ಸ್ ಶರೀಫ್ ಸಿದ್ಧತೆಗಳ ಪರಿಶೀಲನಾ ಸಭೆ ಶನಿವಾರ ನಡೆಯಿತು.



ದರ್ಗಾದ ಸಭಾಂಗಣದಲ್ಲಿ ನಡೆದ ಈ ಸಭೆಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ನಗರಪಾಲಿಕೆ, ಉಇಖಅಔಒ, ರೈಲ್ವೆ, ಸಾರಿಗೆ, ಪೊಲೀಸ್ ಹಾಗೂ ಆರೋಗ್ಯ ಇಲಾಖೆಗಳ ಜನಪ್ರತಿನಿಧಿಗಳು, ಮಂಡಳಿ ಹಾಗೂ ಕಾರ್ಪೋರೇಷನ್‌ಗಳ ಪ್ರತಿನಿಧಿಗಳು ಹಾಜರಿದ್ದು, ಎಲ್ಲಾ ಇಲಾಖೆಗಳು ಸಂಪೂರ್ಣ ಸಹಕಾರ ನೀಡುವುದಾಗಿ ಮತ್ತು ಕಳೆದ ವರ್ಷದಿಗಿಂತ ಉತ್ತಮ ಹಾಗೂ ದೃಢವಾದ ವ್ಯವಸ್ಥೆಗಳನ್ನು ಒದಗಿಸುವುದಾಗಿ ಭರವಸೆ ನೀಡಿದವು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಜ್ಜಾದಾ ನಶೀನ್ ಅವರು, ಉರ್ಸ್ ಸಂದರ್ಭದಲ್ಲಿ ದರ್ಗಾ ಆಡಳಿತ ಮಾತ್ರವಲ್ಲದೆ ಸಂಪೂರ್ಣ ನಗರವೇ ಭಕ್ತರ ಆತಿಥ್ಯ ವಹಿಸುತ್ತದೆ ಎಂದು ಹೇಳಿದರು. ದೇಶ-ವಿದೇಶಗಳಿಂದ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥೆ ಮಾಡುವುದೇ ಮುಖ್ಯ ಉದ್ದೇಶ ಎಂದು ಅವರು ತಿಳಿಸಿದರು. ಜೊತೆಗೆ, ಜಿಲ್ಲಾ ಉಸ್ತುವಾರಿ ಸಚಿವರಾದ ಕಡಿಥಿಚಿಟಇ ಝಿಚಿಡಿಂಜ ಅವರೊಂದಿಗೆ ತಾವು ನಿರಂತರ ಸಂಪರ್ಕದಲ್ಲಿರುವುದಾಗಿ ಹೇಳಿದರು.

ಮಹಬೂಬ್ ಗುಲ್ಶನ್‌ನಿಂದ ಹೊರಡುವ ಸಂದಲ್ ಮೆರವಣಿಗೆ ಹಾಗೂ ಉರ್ಸ್‌ನ ಪ್ರಮುಖ ಮೂರು ದಿನಗಳ ವ್ಯವಸ್ಥೆಗಳ ಕುರಿತು ವಿವರವಾದ ಚರ್ಚೆ ನಡೆಯಿತು.

ನಗರಪಾಲಿಕೆಗೆ ಹಲವು ಪ್ರಮುಖ ಸೂಚನೆಗಳನ್ನು ನೀಡಲಾಯಿತು. 100 ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸುವುದು, 100 ಕಸದ ಡ್ರಮ್‌ಗಳನ್ನು ಒದಗಿಸುವುದು. ದರ್ಗಾ ಸುತ್ತಮುತ್ತಲಿನ ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸುವುದು. ರಸ್ತೆಗಳನ್ನು ದುರಸ್ತಿ ಮಾಡುವುದು. ಮಹಬೂಬ್ ಗುಲ್ಶನ್‌ನಿಂದ ದರ್ಗಾವರೆಗೆ ಸ್ವಚ್ಛತೆಯನ್ನು ಖಚಿತಪಡಿಸುವುದು, ಮಾರ್ಕೆಟ್ ಮಸೀದಿ ಸುತ್ತಮುತ್ತ ವಿಶೇಷ ಸ್ವಚ್ಛತೆ.

ಗ್ಯಾರಹ್ ಸೀಢಿ ಬಳಿ ಕನಿಷ್ಠ 50 ದೀಪಗಳನ್ನು ಅಳವಡಿಸುವುದು. ಸಂದಲ ಮೆರವಣಿಗೆ ಮಾರ್ಗದಲ್ಲಿ 120 ಹೆಚ್ಚುವರಿ ಬೀದಿ ದೀಪಗಳನ್ನು ಅಳವಡಿಸುವುದು.

ನಗರಪಾಲಿಕೆ ಬೆಳಿಗ್ಗೆ 11 ಗಂಟೆಯಿಂದ 7 ದಿನಗಳ ನಿರಂತರ ನೀರಿನ ಸರಬರಾಜು ಮಾಡುವುದಾಗಿ ಭರವಸೆ ನೀಡಿದರು. ಮೊಬೈಲ್ ಶೌಚಾಲಯಗಳು ಹಾಗೂ ಹೆಚ್ಚುವರಿ ಕಸದ ವಾಹನಗಳ ವ್ಯವಸ್ಥೆಯೂ ಮಾಡಲಾಗುತ್ತದೆ.

ಪೊಲೀಸ್ ಇಲಾಖೆಗೆ ಕಾನೂನು ಸುವ್ಯವಸ್ಥೆ ಕಾಪಾಡುವಂತೆ ಸೂಚನೆ ನೀಡಲಾಗಿದ್ದು, ಪೊಲೀಸ್ ಆಯುಕ್ತರೊಂದಿಗೆ ಪ್ರತ್ಯೇಕ ಸಭೆ ನಡೆಸಲಾಗುತ್ತದೆ. ರೈಲ್ವೆ ಅಧಿಕಾರಿಗಳು ಕಲಬುರಗಿ ರೈಲು ನಿಲ್ದಾಣದಲ್ಲಿ ಶಾಮಿಯಾನ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಹೇಳಿದರು. ಹೈದರಾಬಾದ್‌ನಿಂದ ವಿಶೇಷ ರೈಲುಗಾಗಿ ಮನವಿ ಸಲ್ಲಿಸಲಾಗಿದೆ.

ಸಾರಿಗೆ ಇಲಾಖೆ ಹೈದರಾಬಾದ್, ಮಹಬೂಬ್‌ನಗರ ಮತ್ತು ತಾಂಡೂರಿನಿಂದ 20 ವಿಶೇಷ ಬಸ್‌ಗಳನ್ನು ಓಡಿಸುವುದಾಗಿ ಘೋಷಿಸಿತು. ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣದಿಂದ ದರ್ಗಾವರೆಗೆ 15 ಹೆಚ್ಚುವರಿ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗುತ್ತದೆ.

ಆರೋಗ್ಯ ಇಲಾಖೆ ಒಂದು ಪಿಜಿ ವೈದ್ಯರು, 4 ಇಂಟರ್ನ್ಸ್ ಮತ್ತು ಆಂಬ್ಯುಲೆನ್ಸ್ ವ್ಯವಸ್ಥೆ ಮಾಡುವುದಾಗಿ ತಿಳಿಸಿತು. ಭಕ್ತರ ಸಾಮಾನುಗಳಿಗಾಗಿ ಕ್ಲೋಕ್ ರೂಮ್ ವ್ಯವಸ್ಥೆಯನ್ನು ಖ್ವಾಜಾ ಹೈಸ್ಕೂಲ್ ಮತ್ತು ಮದರಸಾ ದೀನಿಯಾ ಬಂದಾ ನವಾಜಿಯ ಸಿಬ್ಬಂದಿಗೆ ಒಪ್ಪಿಸಲಾಯಿತು. ಮೆಟಲ್ ಡಿಟೆಕ್ಟರ್‌ಗಳ ಮೂಲಕ ಭದ್ರತಾ ತಪಾಸಣೆ ನಡೆಯಲಿದೆ.

GESCOM ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಲ್ ನಿರಂತರ ವಿದ್ಯುತ್ ಸರಬರಾಜು ಹಾಗೂ ವಿದ್ಯುತ್ ವ್ಯವಸ್ಥೆಯ ಸುಧಾರಣೆ ಮಾಡುವುದಾಗಿ ಹೇಳಿದರು. ಉಗಲಂ ಅಧ್ಯಕ್ಷ ಮಝರ್ ಆಲಂ ಖಾನ್ ಕೂಡ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದಾಗಿ ಭರವಸೆ ನೀಡಿದರು.

ಸಭೆಯ ಆರಂಭವನ್ನು ಮೌಲಾನಾ ಸಯ್ಯದ್ ಅಬ್ದುಲ್ ರಶೀದ್ ಅವರ ಕುರಾನ್ ಪಠಣದಿಂದ ಮಾಡಲಾಯಿತು. ಕಳೆದ ಉರ್ಸ್ ವರದಿಯನ್ನು ಅಬ್ದುಲ್ ಬಾಸಿತ್ ಮಂಡಿಸಿದರು. ನಂತರ ಸೆಮಿನಾರ್ ಹಾಗೂ ಸ್ವಯಂಸೇವಕರ ವರದಿಗಳನ್ನು ಮಂಡಿಸಲಾಯಿತು. ನಗರಪಾಲಿಕೆಯಿಂದ ಸಂದಲ್‌ಗೂ 5 ದಿನಗಳ ಮೊದಲು ಕೆಲಸ ಆರಂಭಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

## ವಿಶ್ವಕ್ಕೆ ದಾರಿ ತೋರಿಸಿದ ಬಸವಣ್ಣ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಕನ್ನಡನಾಡಿನ ಹೆಮ್ಮೆ, ಸಮಾನತೆ ಮತ್ತು ಮಾನವತೆಯ ಮಹಾನ್ ತತ್ವಜ್ಞರಾದ ಬಸವಣ್ಣರು ವಿಶ್ವಕ್ಕೆ ದಾರಿ ತೋರಿಸಿದ ಮಹಾಪುರುಷರಲ್ಲಿ ಪ್ರಮುಖರು.



12ನೇ ಶತಮಾನದಲ್ಲಿ ಜೀವಿಸಿದ್ದ ಅವರು ಸಮಾಜದ ಅಸಮಾನತೆ, ಜಾತಿ ವ್ಯವಸ್ಥೆ, ಅಂಧಶ್ರದ್ಧೆಗಳಿಗೆ ವಿರುದ್ಧವಾಗಿ ಧ್ವನಿಯಾಗಿದ್ದರು. ಅವರ ಚಿಂತನೆಗಳು ಇಂದಿಗೂ ಸಮಕಾಲೀನವಾಗಿದ್ದು, ವಿಶ್ವ ಮಾನವಕುಲಕ್ಕೆ ದಾರಿದೀಪವಾಗಿದೆ ಎಂದು ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಸಿದ್ರಾಮ ವಾಘಮಾರೆ ತಿಳಿಸಿದರು.

ಸೊಮವಾರ ಹುಮನಾಬಾದ್ ನಗರದ ಗಾದಾ ಕಾಂಪ್ಲೇಕ್ಸ್ ನಲ್ಲಿರುವ ಶ್ರೀ ಮಾಣಿಕಪ್ರಭು ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬಸವಣ್ಣರು "ಕಾಯಕವೇ ಕೈಲಾಸ" ಎಂಬ ಮಹತ್ವದ ಸಂದೇಶವನ್ನು ನೀಡಿದರು. ದುಡಿಯುವವನಿಗೆ ಗೌರವ, ಪರಿಶ್ರಮಕ್ಕೆ ಮೌಲ್ಯ ನೀಡುವ ಸಮಾಜವೇ ಶ್ರೇಷ್ಠ ಎಂದು ಅವರು ಸಾರಿದರು. ಅವರ ಅನುಭವ ಮಂಟಪವು ಪ್ರಜಾಪ್ರಭುತ್ವದ ಮೊದಲ ವೇದಿಕೆಯೆಂದು ಪರಿಗಣಿಸಲಾಗುತ್ತದೆ, ಅಲ್ಲಿ ಎಲ್ಲ ವರ್ಗದ ಜನರು ಸಮಾನವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದರು.

ಜಾತಿ ಬೇಧವಿಲ್ಲದ ಸಮಾನ ಸಮಾಜ ನಿರ್ಮಾಣವೇ ಬಸವಣ್ಣರ ಮುಖ್ಯ ಗುರಿಯಾಗಿತ್ತು. ಮಹಿಳೆಯರಿಗೆ ಗೌರವ, ಶೋಷಿತರ ಮತ್ತು ನೈತಿಕ ಜೀವನದ ಮಹತ್ವವನ್ನು ಅವರು ತಮ್ಮ ವಚನಗಳ ಮೂಲಕ ಬೋಧಿಸಿದರು. ಅವರ ವಚನಗಳು ಸರಳ ಭಾಷೆಯಲ್ಲಿ ಆಳವಾದ ತತ್ವಗಳನ್ನು ಹೊತ್ತಿವೆ ಎಂದು ತಿಳಿಸಿದರು.


### ವೈಕುಂಠ ಸಮಾರಾಧನೆ



ಆತ್ಮೀಯ ಬಂಧುಗಳೇ

ನಮ್ಮ ಸಹೋದರರಾದ ದಿ|| ಶ್ರೀ ಷಣ್ಮುಖ (ಗುರು ಸ್ವಾಮಿ) ಬಂಡಿಮೋಟ್ ಇವರು ದಿನಾಂಕ 11-04-2026ರ ಶನಿವಾರ ರಾತ್ರಿ 10.45ಕ್ಕೆ ದೈವಾಧೀನರಾಗಿರುತ್ತಾರೆ.

ಪ್ರಯುಕ್ತ ಅಗಲಿದ ಪುಣ್ಯಾತ್ಮನ ಆತ್ಮಕ್ಕೆ ಚಿರ ಶಾಂತಿ ಸಿಗಲೆಂದು ಪ್ರಾರ್ಥಿಸಿ ಅವರ ವೈಕುಂಠ ಸಮಾರಾಧನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

- ದಿನಾಂಕ: 22-04-2026, ಬುಧವಾರ
- ಸಮಯ: ಸಾಯಂಕಾಲ 6.30 ಗಂಟೆಗೆ ಪೂಜೆ ಕಾರ್ಯಕ್ರಮ ನಂತರ ಭೋಜನ
- ಸ್ಥಳ: ಷಣ್ಮುಖ (ಗುರು ಸ್ವಾಮಿ) ನಿವಾಸ, ಬಳ್ಳಾರಪ್ಪ ಕಾಲೋನಿ, ಬಂಡಿಮೋಟ್, ಬಳ್ಳಾರಿ.

ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಅಗಲಿದ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿ ತೀರ್ಥ ಪ್ರಸಾದ ಸ್ವೀಕರಿಸಬೇಕೆಂದು ವಿನಂತಿಸುತ್ತೇವೆ.

ದಿ|| ಶ್ರೀ ಷಣ್ಮುಖ ಗುರು ಸ್ವಾಮಿ ಬಂಡಿಮೋಟ್, ಬಳ್ಳಾರಿ
ಅಗಲಿದ ಕಾಂಗ್ರೆಸ್ ಮುಖಂಡರು

ಜನನ: 10.02.1974 ನಿಧನ : 11.04.2026

**ದುಃಖತಪ್ತರು**

ಬಿ. ನಾಗೇಂದ್ರ, ಶಾಸಕರು, ಬಳ್ಳಾರಿ ಗ್ರಾಮೀಣ ವಿಧಾನ ಸಭೆ ಕ್ಷೇತ್ರ.
ಗುಮ್ಮನೂರು ಜಯರಾಮ್, ಗುಂತಕಲ್ಲು ಕ್ಷೇತ್ರದ ಹಾಲಿ ಶಾಸಕರು.
ಗುಮ್ಮನೂರು ಶ್ರೀನಿವಾಸ್
ಗುಮ್ಮನೂರು ನಾರಾಯಣಸ್ವಾಮಿ
ಬಿ. ವೆಂಕಟೇಶ್ ಪ್ರಸಾದ, ಕಾಂಗ್ರೆಸ್ ಮುಖಂಡರು

ದಿ|| ಡ್ರೈವರು ಅಂಜಿನಪ್ಪ ಮತ್ತು ಮಕ್ಕಳು ಕುಟುಂಬಸ್ಥರು, ಮಲ್ಲಯ್ಯ ಡಿ -ವಕೀಲರು ವಣ್ಣೆನೂರು ಕುಟುಂಬಸ್ಥರು ಭೀಮಲಿಂಗಪ್ಪ - PDO ಜೆ. ಬಿ. ಹಳ್ಳಿ ಕುಟುಂಬಸ್ಥರು , ರಾಮಸ್ವಾಮಿ ವಕೀಲರು ಜಾಲಿಬೆಂಚಿ ಕುಟುಂಬಸ್ಥರು, ಗಾದಿಲಿಂಗಪ್ಪ AP ಪೊಲೀಸ್ ಇಲಾಖೆ ಕುಟುಂಬಸ್ಥರು, ನಾಗಮುನಿ ರಮೇಶ್ ಬಳ್ಳಾರಿ ಕುಟುಂಬಸ್ಥರು ಚೆನ್ನಯ್ಯ ಚಿಟ್ಟಾಲ್ ಕುಟುಂಬಸ್ಥರು ಹಾಗೂ ಗೆಳೆಯರ ಬಳಗ.


## ಬುಕ್ ಮಾಡಿದರು ಗ್ಯಾಸ್ ಸಿಲಿಂಡರ್ ಸಿಗದೇ ಗ್ರಾಹಕರು ಪರದಾಟ

• ವೀರೇಶ್ ಹೊಸಳ್ಳಿ, ಸಿಂಧನೂರು

ತಾಲೂಕಿನ ಸಾಲುಗುಂದ ಹೋಬಳಿಯಲ್ಲಿ ಭಾರತ ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರು ಶರಣಪ್ಪ ಎಂಬವರು ಅವರು ಸಿಬ್ಬಂದಿ ವರ್ಗದವರು ಸಿಲಿಂಡರ್ ಗ್ರಾಹಕರಲ್ಲಿ ಗ್ಯಾಸ್ ಬುಕ್ ಮಾಡುತ್ತವೆ ಎಂದು ಫೋನ್ ಕರೆ ಮಾಡಿ ಗ್ರಾಹಕರು ಮೂಲಕ ಓಟಿಪಿ ಪಡೆದುಕೊಂಡು ಬೇರೆ ಕಡೆಗೆ ಭಾರತ ಗ್ಯಾಸ್ ಸಿಲಿಂಡರ್ ಗಳನ್ನು ಬ್ಲಾಕ್ ನಲ್ಲಿ ಮಾರಿಕೊಂಡಿದ್ದಾರೆ.ಸಾಲಗುಂದ ಹೋಬಳಿಯ ಸುತ್ತ ಮುತ್ತಲಿನ ಸಾರ್ವಜನಿಕರು ಆರೋಪ ಮಾಡಿದರು.



ಅಮೆರಿಕಾ ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭ ಹಿನ್ನೆಯಲ್ಲಿ ಭಾರತ ಕರ್ನಾಟಕ ದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗದೇ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಆದರೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದ ಹೋಬಳಿಯಲ್ಲಿ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರು ಸಿಲಿಂಡರ್ ಗಳನ್ನು, ಸುಮಾರು ಒಂದು ವರಿ ತಿಂಗಳಿಂದ ಗ್ಯಾಸ್ ಸಿಲಿಂಡರ್ ಸಾರ್ವಜನಿಕರಿಗೆ ವಿತರಣೆ ಮಾಡದೇ ಬ್ಲಾಕ್ ನಲ್ಲಿ ಮಾರಾಟ ಮಾಡಿದ್ದರಿಂದ ಇವತ್ತು ಸಾಲಗುಂದ ಹೋಬಳಿಯಲ್ಲಿ ಸಾರ್ವಜನಿಕರಿಗೆ ಸಿಲಿಂಡರ್ ತೆಗೆದುಕೊಂಡು ಭಾರತ ಗ್ಯಾಸ್ ಗೋಡೌನ್ ಮುಂದೆ ಎರಡು ದಿನದಿಂದ ಸುಮಾರು ಎರಡು ಸಾವಿರ ಸಿಲಿಂಡರ್ ರಷ್ಟು ಗ್ರಾಹಕರು ಸಾಲುಗಟ್ಟಿ ನಿಂತಿದ್ದಾರೆ. ಆದರೆ ಇದು ಯಾವುದನ್ನೂ ಲೆಕ್ಕಿಸದೆ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರಾದ ಶರಣಪ್ಪ ಹಾಗೂ ಅವರು ಸಿಬ್ಬಂದಿ ವರ್ಗದವರು ಗೋಡೌನ್ ಲಾಕ್ ಮಾಡಿ ಕೊಂಡು ಮೊಬೈಲ್ ಸ್ವಿಚ್ ಆಫ್ ಮಾಡಿ ಕೊಂಡಿರುವುದು ವಿಪರ್ಯಾಸ.

ಇಂಡಿಯನ್ ಹಾಗೂ ಎಚ್ ಪಿ ಗ್ಯಾಸ್ ಸಿಲಿಂಡರ್ ಗಳು ಬುಕ್ ಮಾಡಿದರೆ ಒಂದು ವಾರದಲ್ಲಿ ಅಥವಾ ಎಮರ್ಜೆನ್ಸಿ ಅಂತಹ ಹೇಳಿದರೆ ಗ್ಯಾಸ್ ಸಿಲಿಂಡರ್ ಮಾಲೀಕರು ಸಾರ್ವಜನಿಕರು ಹಿತದೃಷ್ಟಿಯಿಂದ ಸಿಬ್ಬಂದಿ ವರ್ಗದವರು ಮೂಲಕ ಕಳಿಸುತ್ತಾರೆ. ಆದರೆ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರು ಎರಡು ಹಿಂದೆ ಎರಡು ಲಾರಿ ಗ್ಯಾಸ್ ಸಿಲಿಂಡರ್ ಗಳನ್ನು (ಭಾರತ ಗ್ಯಾಸ್) ಬ್ಲಾಕ್ ನಲ್ಲಿ ಹೆಚ್ಚಿಗೆ ಹಣದಲ್ಲಿ ಮಾಡಿಕೊಂಡಿದ್ದಾರೆ. ಈಗಾಗಿ ನಮಗೆ ಭಾರತ ಗ್ಯಾಸ್ ಸಿಲಿಂಡರ್ ಗಾಗಿ ಸಾಲುಗಟ್ಟಿ ನಿಂತಿದ್ದೇವೆ. ಸಾಲಗುಂದ ಹೋಬಳಿಯ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರು ಕಾನೂನು ಗಾಳಿಗೆ ತೂರಿ ನಾವು ಮಾಡಿದ್ದ ಶಾಸನ ಎಂದು ಹೇಳುತ್ತಾರೆ. ಗ್ಯಾಸ್ ಬಂದರೆ ತೆಗೆದುಕೊಂಡು ಹೋಗಿ ಇಲ್ಲಾಂದ್ರೆ ಬಿಡಿ ನಾವು ಏನು ಮಾಡಬೇಕು ಎಂದು ಹೇಳುತ್ತಾರೆ ಅವರು ಸಿಬ್ಬಂದಿ ವರ್ಗದವರು. ಸಾರ್ವಜನಿಕರಿಗೆ ಬೆಲೆ ಇಲ್ಲದಂತಾಗಿದೆ. ಇಲ್ಲಿ ಯಾರು ಹೇಳೋರು ಕೇಳೋರು ಇಲ್ಲದಂತಾಗಿದೆ. ಎಂದು ಗ್ಯಾಸ್ ಸಿಲಿಂಡರ್ ಗ್ರಾಹಕರು ಮಾಲೀಕರು ಮೇಲೆ ಆಕ್ರೋಶವನ್ನು ವ್ಯಕ್ತಪಡಿಸಿದರು.

# ಹೆದ್ದಾರಿಯ ರಕ್ತಪಾತಕ್ಕೆ ಅದೆಷ್ಟು ಮುಗ್ಧ ಜೀವ ಬಲಿಯಾಗಬೇಕು?



ಭೋಗ-ಐಭೋಗ

• ವೀರಣ್ಣ ಕಲಕೇರಿ, ಕೆಂಭಾವಿ

ಬದುಕಿನ ನಶ್ವರತೆ ಎಂಥದ್ದು ಎಂದರೆ, ಮುಂದಿನ ಕ್ಷಣ ಏನಾಗುತ್ತದೆ ಎಂಬ ಕನಿಷ್ಠ ಅರಿವು ಕೂಡ ಮನುಷ್ಯನಿಗಿರುವುದಿಲ್ಲ. ಇದಕ್ಕೆ ತಾಜಾ ಉದಾಹರಣೆಯೇ ಏಪ್ರಿಲ್ 17ರಂದು ಸಂಭವಿಸಿದ ರಸ್ತೆ ಅಪಘಾತ. ಇಡೀ ಕುಟುಂಬವೊಂದು ನೋಡುನೋಡುತ್ತಿದ್ದಂತೆಯೇ ಅಗ್ನಿಗಾಹುತಿಯಾಯಿತು. ಅಂದು ಬೆಳಿಗ್ಗೆ ಶಿರವಾರದ ಮನೆತುಂಬಾ ನಗು-ಸಂಭ್ರಮ ತುಂಬಿತ್ತು. ಅದೇ ಸಂಭ್ರಮದಿಂದಲೇ ಆ ಕುಟುಂಬ ದೇವಸ್ಥಾನಕ್ಕೆಂದು ಹರಕೆ ಹೊತ್ತು ಸುರಪುರಕ್ಕೆ ಹೊರಟಿತ್ತು. ಆದರೆ ಆ ಹರಕೆ ತೀರಿಸಿ ಮರಳಿ ಮನೆ ಮುಟ್ಟುವ ಮೊದಲೇ ಸಾವು ಅವರನ್ನು ಹೆದ್ದಾರಿಯ ಮಧ್ಯದಲ್ಲಿ ಸಂಧಿಸಿತ್ತು. ರಾಯಚೂರು ಜಿಲ್ಲೆಯ ಸಿರವಾರದ ಆ ಒಂಬತ್ತು ಜೀವಗಳು ಚಿತೆಯೇರಿದ ಘಟನೆ ಕೇವಲ ಒಂದು ಅಪಘಾತವಲ್ಲ; ಅದು ಸಜಾಗರುಕತೆಯ ಜತೆ ನಮ್ಮ ವ್ಯವಸ್ಥೆಯ ಅಂಧಕಾರಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರೆ ತಪ್ಪಾಗಲಾರದು.

**ಚಿತೆಯಾದ ಸಂಸಾರ**

ಏಪ್ರಿಲ್ 17, 2026, ಶುಕ್ರವಾರ. ಅಂದು ಬೆಳಿಗ್ಗೆ ರಾಯಚೂರು ಜಿಲ್ಲೆಯ ಸಿರವಾರ ಪಟ್ಟಣದ ಕೃಷ್ಣಾ ನಾಯಕ ಅವರ ಮನೆಯಲ್ಲಿ ಹಬ್ಬದ ವಾತಾವರಣವಿತ್ತು.



ಅಮಾವಾಸ್ಯೆಯ ಪುಣ್ಯದಿನದಂದು ಸುರಪುರದ ದೇವಸ್ಥಾನದಲ್ಲಿ ದೇವರ ದರ್ಶನ ಪಡೆಯಬೇಕೆಂಬ ಹಂಬಲದಿಂದ ಕುಟುಂಬದ ಸದಸ್ಯರೆಲ್ಲರೂ ಸಜ್ಜಾಗಿದ್ದರು. ಮೂರು ವರ್ಷದ ಪುಟಾಣಿ ಸಿದ್ಧಾರ್ಥನ ಮುಗ್ಧ ನಗು, ನಿಸರ್ಗ ಮತ್ತು ಶಶಿಕಲಾ ಅವರ ಹೊಸ ಆಸೆಗಳು, ಹಿರಿಯರಾದ ಕೃಷ್ಣಾ ನಾಯಕ ಮತ್ತು ಅನಂತ ಕಲಾ ಅವರ ಪ್ರೀತಿಯ ಮಾತುಗಳು, ಎಲ್ಲವೂ ಆ ಕಾರಿನೊಳಗೆ ತುಂಬಿಕೊಂಡಿದ್ದವು.

'ದರ್ಶನ ಮುಗಿಸಿ ಬೇಗ ಮನೆಗೆ ಮರಳೋಣ, ಮಕ್ಕಳಿಗೆ ತಿಂಡಿ ತರೋಣ' ಎಂದುಕೊಂಡೇ ಹೊರಟಿದ್ದರು. ದರ್ಶನ ಪಡೆದು ಇನ್ನೇನು ಊರು ಸೇರಬೇಕು ಎನ್ನುವಷ್ಟರಲ್ಲಿ, ಅಂದರೆ ಬೆಳಿಗ್ಗೆ ಹತ್ತರ ಹೊತ್ತಿಗೆ ಸುರಪುರದಿಂದ ಶಾಂತಪುರ ಕ್ರಾಸ್ ಹತ್ತಿರ ಸಾಗುವಾಗ, ಕಾಲನ ರೂಪದಲ್ಲಿ ಬೆಂಗಳೂರಿನಿಂದ ಕಲಬುರಗಿಯೆಡೆಗೆ ಧಾವಿಸಿದ ಖಾಸಗಿ ಸ್ಲೀಪರ್ ಬಸ್ ಹಾಗೂ ಕಾರಿನ ನಡುವೆ ಭೀಕರ ಡಿಕ್ಕಿ ಸಂಭವಿಸಿತು. ಈ ಅಪಘಾತವು ಕ್ಷಣಾರ್ಧದಲ್ಲಿ ಎಲ್ಲವನ್ನೂ ಕರಿಯ ಬೂದಿಯನ್ನಾಗಿಸಿತು.

### ವ್ಯವಸ್ಥೆಯ ವೈಫಲ್ಯ: ಕಾರಣಗಳು ಹಲವು

**ಘಟನೆಯಲ್ಲಿ ಅಪಘಾತಕ್ಕೀಡಾದ ಖಾಸಗಿ ಬಸ್ ಮತ್ತು ಕಾರ್ ಚಾಲಕರ ಬೇಜವಾಬ್ದಾರಿತನ ಅಥವಾ ಅತಿ ವೇಗ, ಅಜಾಗರೂಕತೆ ಇನ್ನೇನಾದರೂ ಇರಬಹುದು. ಸದ್ಯ ಹೋದ ಜೀವ ಮರಳಿ ಬರದು. ಆದರೆ ಹೆದ್ದಾರಿಗಳ ಮೇಲೆ ವಾಹನಗಳ ದಟ್ಟಣೆ ಹೆಚ್ಚುತ್ತಿದ್ದರೂ, ಅದಕ್ಕೆ ಪೂರಕವಾಗಿ ರಸ್ತೆಗಳ ಅಗಲೀಕರಣ ಮಾಡದಿರುವುದು ಸರ್ಕಾರದ ಅತಿದೊಡ್ಡ ವೈಫಲ್ಯ ಎಂಬುದನ್ನು ಅಲ್ಲಗಳೆಯುವಂತಿಲ್ಲ.**

ಅಪಘಾತದ ತೀವ್ರತೆ ಎಷ್ಟಿತ್ತೆಂದರೆ, ಡಿಕ್ಕಿ ಹೊಡೆದ ಮರುಕ್ಷಣವೇ ಕಾರಿನ ಇಂಜಿನ್‌ನಲ್ಲಿ ಸ್ಫೋಟ ಸಂಭವಿಸಿ ಬೆಂಕಿ ಆವರಿಸಿಕೊಂಡಿತು. ಕಾರಿನ ಬಾಗಿಲುಗಳು ಲಾಕ್ ಆಗಿದ್ದವು. ಒಳಗಿದ್ದವರು ಹೊರಬರಲು ನಡೆಸಿದ ಹೋರಾಟ, ಆ ಕಂದಮ್ಮಗಳ ಕಿರುಚಾಟ ಬೆಂಕಿಯ ಕೆನ್ನಾಲಿಗೆಯ ಅಬ್ಬರದಲ್ಲಿ ಮರೆಯಾದವು. ದಾರಿಯಲ್ಲಿ ಹೋಗುತ್ತಿದ್ದವರು ಬೆಂಕಿ ಆರಿಸಲು ಧಾವಿಸುವಷ್ಟರಲ್ಲೇ ಎಲ್ಲವೂ ಮುಗಿದುಹೋಗಿತ್ತು. ಕೃಷ್ಣಾ ನಾಯಕ, ಅನಂತ ಕಲಾ, ಶರಣಪ್ಪ, ನಿಸರ್ಗ, ಶಶಿಕಲಾ ಮತ್ತು ಪುಟ್ಟ ಸಿದ್ಧಾರ್ಥ ಸೇರಿದಂತೆ ಏಳು ಮಂದಿ ಗುರುತು ಹಿಡಿಯಲಾಗದಷ್ಟು ಸುಟ್ಟು ಕರಕಲಾಗಿದ್ದರು. ದೇವರ ಪ್ರಸಾದ ಹಿಡಿಯಬೇಕಿದ್ದ ಕೈಗಳು ಸುಟ್ಟ ಕರಿಯ ಮುದ್ದೆಯಾಗಿದ್ದು ಇಲ್ಲಿ ವಿಧಿಯ ಕ್ರೂರ ಹಾಸ್ಯವಲ್ಲದೆ ಮತ್ತೇನು?

ಈ ಭೀಕರ ದುರಂತವನ್ನು ಕೇವಲ 'ವಿಧಿಯ ಬರಹ' ಎಂದು ಕರೆದು ಸುಮ್ಮನಾಗುವುದು ಮೃತರಿಗೆ ಮಾಡುವ ಅಪಮಾನವೇ ಸರಿ. ರಸ್ತೆ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿ ಅನುದಾನ ಕಾಗದದ ಮೇಲೆ ಬಿಡುಗಡೆಯಾಗುತ್ತದೆ. ಆದರೆ ವಾಸ್ತವದಲ್ಲಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿವೆ; ಇದು ಸರ್ಕಾರದ ಅಭಿವೃದ್ಧಿಯ ಮುಖವಾಡವೆಂದು ಬೇರೆ ಹೇಳಬೇಕಿಲ್ಲ. ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಡುವಿನ 'ಕಮಿಷನ್' ಹಣದ ದಾಹ ಅಮಾಯಕರ ರಕ್ತವನ್ನು ಕುಡಿಯುತ್ತಿದೆ. ಅವೈಜ್ಞಾನಿಕ ತಿರುವುಗಳು, ರಸ್ತೆ ವಿಭಜಕಗಳ ಕೊರತೆ ಮತ್ತು ಅಪೂರ್ಣಗೊಂಡ ಕಾಮಗಾರಿಗಳೇ ಇಲ್ಲಿ ಮೃತ್ಯುಕೂಪಗಳಾಗಿವೆ ಎಂಬುದು ಪ್ರಜ್ಞಾವಂತರ ಆರೋಪ. ಈ ಮಧ್ಯೆ ಸಮಯದ ಮಿತಿಯನ್ನು ಪೂರೈಸಲು ರಕ್ಕಸ ವೇಗದಲ್ಲಿ ಸಂಚರಿಸುವ ಖಾಸಗಿ ಬಸ್‌ಗಳ ಮೇಲೆ ನಿಯಂತ್ರಣ ಹೇರುವಲ್ಲಿ ಸಾರಿಗೆ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ. ಮೃತ್ಯುವಿನ ಈ ತಾಂಡವದ ನಡುವೆಯೂ ಐದು ವರ್ಷದ ಅದ್ವಿಕಾ ಮತ್ತು ಒಂದೂವರೆ ವರ್ಷದ ಹಸುಳೆ ಶ್ರೀನಿಧಿಯ ಚಿಂತಾಜನಕ ಸ್ಥಿತಿ, ಆತಂಕ ನಡುವೆ ಕಣ್ಣೆದುರೇ ಇಡೀ ಸಂಸಾರವನ್ನು ಕಳೆದುಕೊಂಡ ಸ್ಥಿತಿ ಕಂಡು ಕಟುಕನೂ ಕಣ್ಣೀರು ಹಾಕುವಂತಿದೆ. ತಂದೆ-ತಾಯಿಯ ನೆರಳಿಲ್ಲದೆ ಆಸ್ಪತ್ರೆಯ ಬೆಡ್ ಮೇಲೆ ನೋವಿನಿಂದ ನರಳುತ್ತಿರುವ ಮಗುವನ್ನು ಕಂಡರೆ, "ದೇವದರ್ಶನಕ್ಕೆ ಹೋದವರನ್ನು ಆ ದೇವರು ಯಾಕೆ ಕಾಪಾಡಲಿಲ್ಲ?" ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ.

**ಪಾಠವಾಗಲಿ ಈ ಘಟನೆ**

ಈ ಕಥೆ ನಮಗೆ ಕಲಿಸುವ ಪಾಠವೊಂದೇ; ಜೀವನವು ನಾವು ಊಹಿಸುವುದಕ್ಕಿಂತಲೂ ಅತಿ ಚಿಕ್ಕದು. ಪ್ರಯಾಣದ ವೇಳೆ ರಸ್ತೆಯಲ್ಲಿ ತೋರುವ ಒಂದು ಕ್ಷಣದ ಅಜಾಗರೂಕತೆ ಅಥವಾ ಅಧಿಕಾರಿಗಳು ತೋರುವ ಭ್ರಷ್ಟ ನಿರ್ಲಕ್ಷ್ಯ ಕೇವಲ ಒಬ್ಬ ವ್ಯಕ್ತಿಯನ್ನಲ್ಲ, ಒಂದು ಇಡೀ ವಂಶವನ್ನೇ ಚಿತೆಯೇರಿಸಬಲ್ಲದು. ಇನ್ನಾದರೂ ರಾಜ್ಯದ ಎಲ್ಲಾ ಪ್ರಮುಖ ಹೆದ್ದಾರಿಗಳನ್ನು ತಕ್ಷಣವೇ ಚತುಷ್ಪಥಂತ ಅಗಲಿಕರಣ ರಸ್ತೆಗಳನ್ನಾಗಿ ಪರಿವರ್ತಿಸಬೇಕಿದೆ.

**ಕಠಿಣ ಕಾನೂನು ಅಗತ್ಯ**

ಅಮಾಯಕರ ಸಾವುಗಳಿಗೆ ಕೇವಲ ಕಣ್ಣೀರು ಸುರಿಸಿದರೆ ಸಾಲದು. ಕಳಪೆ ಕಾಮಗಾರಿ ಅಥವಾ ಸುರಕ್ಷತಾ ನಿಯಮಗಳ ಉಲ್ಲಂಘನೆ ಕಂಡುಬಂದಲ್ಲಿ ಸಂಬಂಧಪಟ್ಟವರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಶಿಕ್ಷೆಗೆ ಗುರಿಪಡಿಸುವಂತಾಗಬೇಕಾಗಿದೆ. ಆಡಳಿತ ಯಂತ್ರ ಮೈಕೊಡವಿ ಎದ್ದು ನಿಲ್ಲದಿದ್ದರೆ, ನಮ್ಮ ಹೆದ್ದಾರಿಗಳು ನಿರಂತರವಾಗಿ ಸ್ಮಶಾನಗಳಾಗಿಯೇ ಉಳಿಯಲಿವೆ. ಸಿರವಾರದ ಆ ಕುಟುಂಬ ಮರಳಿ ಬರಲಿಲ್ಲ, ಆದರೆ ಅವರ ಸಾವಿನ ಕಿರುಚಾಟ ಈ ವ್ಯವಸ್ಥೆಯ ಕಿವುಡು ಕಿವಿಗಳಿಗೆ ಕೇಳಿಸಬೇಕಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)